

# ಬದುಕಲು ಯೋಗ್ಯವಾದ ಬದುಕಿಗಾಗಿ



ಜನಾರೋಗ್ಯ ಸಭೆ ಪುಸ್ತಕ ಮಾಲಿಕೆ - 3

*SOCHARA*
**Community Health**
**Library and Information Centre (CLIC)**
Community Health Cell
85/2, 1st Main, Maruthi Nagar, Madiwala,
Bengaluru - 560 068
Tel : (080) 25531518 email : clic@sochara.org
www.sochara.org

# ಬದುಕಲು ಯೋಗ್ಯವಾದ ಬದುಕಿಗಾಗಿ



**ತಯಾರಿ ಹಾಗೂ ಪ್ರಕಟಣೆ**

'ಜನಸ್ವಾಸ್ಥ್ಯ ಸಭಾ' ದ ರಾಷ್ಟ್ರೀಯ ಸಮನ್ವಯ ಸಮಿತಿ

ಕನ್ನಡಾನುವಾದ : ಶ್ರೀ ಯು.ಹೆಚ್.ಗಣೇಶ್

ಡಾ॥ ಹೆಚ್.ಎನ್. ಸುಬ್ರಹ್ಮಣ್ಯಂ

ಶ್ರೀ ಬಿ.ಸಿ. ರಮೇಶ್

ಜನಾರೋಗ್ಯ ಸಭೆಯತ್ತ - ಪುಸ್ತಕ 3

*Badukalu Yogyavada Badukigagi , a book prepared by NCC, PHA and translated by Sri U.H. Ganesh, Dr. H.N. Subrahmanya, Sri B.C. Ramesh, BGVS Unit, Thirthahally.*

**First edition :** 2000

Pages : 76 + IV

**Rate :** Rs. 20/-

**Published by**
E. Basavaraju
Secretary,
Bharath Gyan Vigyan Samithi
IISc Campus, Bangalore - 560 012
Ph: 3600384
email : bgvs_kar@hotmail.com

**DTP :**
Ankita Graphics, S.R.Nagar, Bangalore-27

**Printed at :**
Kanteerava Offset,
No. 6, 7th Main, S.R.Nagar,
Bangalore-27 Ph. 2273380

# ಮುನ್ನುಡಿ

'2000ದ ಹೊತ್ತಿಗೆ ಎಲ್ಲರಿಗೂ ಆರೋಗ್ಯ' ಎಂಬ ಗುರಿಯನ್ನು ಸರಕಾರಗಳು ಮರೆತಂತಿದೆ. ಐವತ್ತು ಮೂರು ವರ್ಷಗಳ ಸ್ವಾತಂತ್ರ್ಯದ ನಂತರವೂ, ಆರೋಗ್ಯ ಪರಿಸ್ಥಿತಿ ಸಮರ್ಪಕವಾಗಿಲ್ಲ. ತಡೆಗಟ್ಟಬಹುದಾದ ರೋಗಗಳು ಇಂದಿಗೂ ಕಂಡು ಬರುತ್ತದೆ. ಪ್ರಾಥಮಿಕ ಆರೋಗ್ಯ ಪಾಲನೆಯ ವ್ಯವಸ್ಥೆಯನ್ನು ಸುಧಾರಿಸದೇ ಇರುವುದು ಆರೋಗ್ಯ ಕಾರ್ಯಕ್ರಮಗಳಲ್ಲಿ ಜನರ ಸಹಭಾಗಿತ್ವ ಇಲ್ಲದಿರುವುದು ಹಾಗೂ ಇತ್ತೀಚೆಗಿನ ಹೊಸ ಧಾಳಿಯಾದ ಖಾಸಗೀಕರಣ, ಉದಾರೀಕರಣ ಹಾಗೂ ಜಾಗತೀಕರಣ ನೀತಿಯಿಂದಾಗಿ, ಆರೋಗ್ಯ ಪರಿಸ್ಥಿತಿ ಸುಧಾರಿಸಿಲ್ಲ. ಜನಾರೋಗ್ಯ ಸುಧಾರಣೆ ಜನರಿಗೆ ಹಾಗೂ ಸರಕಾರಕ್ಕೆ ಒಂದು ಆಧ್ಯತೆಯ ವಿಷಯ.

ಭಾರತೀಯರೆಲ್ಲರಿಗೆ ಅರ್ಥವಾಗಬಹುದಾದ ಇತ್ತೀಚೆಗಿನ ಐತಿಹಾಸಿಕ ಘಟನೆ, ಸ್ವಾತಂತ್ರ್ಯ ಹೋರಾಟ, ಎಲ್ಲ ವರ್ಗಗಳ ಜನರು ಭಾಗಿಯಾಗಿ ಹೋರಾಡಿದ್ದುದರಿಂದ ಆ ಮಹಾನ್ ಜನಾಂದೋಲನ ಸಾಫಲ್ಯವಾಯಿತು ಎಂಬುದರ ಬಗ್ಗೆ ಎರಡು ಮಾತಿಲ್ಲ. ಇಂದಿನ ಆರೋಗ್ಯ ಪರಿಸ್ಥಿತಿಯನ್ನು ಸುಧಾರಿಸಲು ನಾವು ಜನಾಂದೋಲನವನ್ನೇ ಮಾಡಬೇಕಾಗಿದೆ. ಜನರು ನಿರುತ್ಸಾಹ ಹಾಗೂ ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು ತೊರೆದು, ಜನಾರೋಗ್ಯ ಸುಧಾರಿಸಲು ಮುಂದಡಿ ಇಡಬೇಕಾಗಿದೆ.

ಜನಾರೋಗ್ಯ ಸುಧಾರಣೆಗೆ ಅಗತ್ಯವಿರುವ ಜನಾಂದೋಲನದ ಮುಂದಾಳತ್ವವನ್ನು ಜನಾರೋಗ್ಯ ಸಭೆಗಳು ತೆಗೆದುಕೊಂಡಿವೆ. ಭಾರತವಷ್ಟೇ ಏಕೆ, ಇಡೀ ಜಗತ್ತಿನಾದ್ಯಂತ ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ನಾವು ಅದರ ಭಾಗವಾಗಿ ಹೋರಾಟ ಮಾಡಬೇಕಾಗಿದೆ.

ಜನರಿಗೆ ಆರೋಗ್ಯ ವಿಷಯಗಳನ್ನು ತಿಳಿಸಿ ಜನಾರೋಗ್ಯದ ಇಂದಿನ ಪರಿಸ್ಥಿತಿಗೆ ಕಾರಣವನ್ನು ಹುಡುಕಿ, ಜನರ ಸಹಾಯದಿಂದ ಅದನ್ನು ಸರಿಪಡಿಸಲು ಸರಕಾರವನ್ನು ಎಚ್ಚರಿಸಬೇಕಾದ ಧ್ಯೇಯ ಈ ಕಾರ್ಯಕ್ರಮದ್ದಾಗಿದೆ.

ಜನಾರೋಗ್ಯದ ಪರಿಸ್ಥಿತಿಯನ್ನು ಹಾಗೂ ಕಾರ್ಯಕ್ರಮವನ್ನು ಅರ್ಥ ಮಾಡಿಕೊಳ್ಳಲು ಈ ಪುಸ್ತಕ ಮಾಲೆ ಸಹಾಯವಾಗುತ್ತದೆ ಎಂದು ನಾವು ನಂಬಿದ್ದೇವೆ. ಈ ಪುಸ್ತಕಗಳನ್ನು ಭಾಷಾಂತರಿಸಿಕೊಟ್ಟ ಪ್ರೊ. ಎಂ.ಆರ್. ನಾಗರಾಜುರವರಿಗೆ, ಡಿಟಿಪಿ ಮಾಡಿಕೊಟ್ಟ ಶ್ರೀ ರಾಜಶೇಖರ್ ಅವರಿಗೆ, ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ಗುಜ್ಜಾರ್, ಶ್ರೀ ರವಿಶಂಕರ್ ಅವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಕಂಠೀರವ ಆಫ್‌ಸೆಟ್‌ನವರಿಗೂ, ಪುಸ್ತಕ ಮುದ್ರಣಕ್ಕೆ ಧನ ಸಹಾಯ ನೀಡಿದ ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಾಗೂ ಎಲ್ಲ ಸ್ನೇಹಿತರಿಗೂ ಜನಾರೋಗ್ಯ ಸಮಿತಿಯ ಪರವಾಗಿ ಅಭಿನಂದನೆಗಳನ್ನು ಕೋರುತ್ತೇವೆ.

## ಜನಾರೋಗ್ಯ ಸಭೆ - ಕರ್ನಾಟಕ

ಎಲ್ಲರಿಗೂ ಆರೋಗ್ಯ - ಈಗ ಇದಕ್ಕಾಗಿ ಜನಾಂದೋಲನ

| | |
|---|---|
| ಅಧ್ಯಕ್ಷರು | ಡಾ|| ಹೆಚ್. ಸುದರ್ಶನ್ |
| ಉಪಾಧ್ಯಕ್ಷರು | ಶ್ರೀಮತಿ ರೂತ್ ಮನೋರಮ |
| ಸಂಚಾಲಕರು(ತಾಂತ್ರಿಕ) | ಡಾ|| ಪ್ರಕಾಶ್ ಸಿ.ರಾವ್ |
| ಸಂಚಾಲಕರು(ಸಂಘಟನೆ) | ಈ. ಬಸವರಾಜು |
| ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರು | ಡಾ|| ರವಿ ನಾರಾಯಣ್ |

### ಸಂಘಟನಾ ಸಮಿತಿ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (AIDWA)
ಭಾರತ ಜ್ಞಾನ ವಿಜ್ಞಾನ ಸಮಿತಿ(BGVS)
ಸಮುದಾಯ ಆರೋಗ್ಯ ಕೋಶ(CHC)
ಕ್ಯಾಥೋಲಿಕ್ ಹೆಲ್ತ್ ಅಸೋಸಿಯೇಷನ್ ಆಫ್ ಇಂಡಿಯಾ(CHAI-KA) ಕರ್ನಾಟಕ
ಕ್ಯಾಂಪೇನ್ ಎಗೆನೆಸ್ಟ್ ಚೈಲ್ಡ್ ಲೇಬರ್ (CACL)
ಕ್ರಿಶ್ಚಿಯನ್ ಮೆಡಿಕಲ್ ಅಸೋಸಿಯೇಷನ್ ಆಫ್ ಇಂಡಿಯಾ (CMAI) ಕರ್ನಾಟಕ
ಔಷಧಿ ಕ್ರಿಯಾ ವೇದಿಕೆ (DAF-K) ಕರ್ನಾಟಕ
ದಲಿತ ಸಂಘರ್ಷ ಸಮಿತಿ (DSS)
ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್(DYFI)
ಫೋರಮ್ ಫಾರ್ ಸ್ಟ್ರೀಟ್ ಚಿಲ್ಡ್ರನ್
ಭಾರತೀಯ ಕುಟುಂಬ ಯೋಜನಾ ಸಂಘ(FPAI)
ಕರ್ನಾಟಕ ಗ್ರಾಮಾಭ್ಯುದಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ(FEVORD-K) ಕರ್ನಾಟಕ
ಸ್ಥಳೀಯ ಆರೋಗ್ಯ ಪರಂಪರೆಗಳ ಪುನರುತ್ಥಾನ ಪ್ರತಿಷ್ಠಾನ (FRLHT)
ಜಾಯಿಂಟ್ ವುಮೆನ್ಸ್ ಪ್ರೋಗ್ರಾಂ (JWP) ಕರ್ನಾಟಕ
ಕರ್ನಾಟಕ ರಾಜ್ಯ ಔಷಧಿ ಮತ್ತು ಮಾರಾಟ ಪ್ರತಿನಿಧಿಗಳ ಸಂಘ(KSMSRA)
ಕರ್ನಾಟಕ ರಾಜ್ಯ ರೈತ ಸಂಘ(KRRS)
ಕರ್ನಾಟಕ ಪ್ರಾಂತ ರೈತ ಸಂಘ(AIKS)
ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ (KRVP)
ಕರ್ನಾಟಕ ಆರೋಗ್ಯ ಸ್ವಯಂ ಸೇವಾ ಸಂಸ್ಥೆ (VHAK)
ಮಹಿಳಾ ಸಾಮಖ್ಯ-ಕರ್ನಾಟಕ (MS-K)
ನ್ಯಾಷನಲ್ ಅಲಿಯೆನ್ಸ್ ಫಾರ್ ಪೀಪಲ್ಸ್ ಮೂವ್‌ಮೆಂಟ್ (NAPM) ಕರ್ನಾಟಕ
ನ್ಯೂ ಎಂಟಿಟಿ ಫಾರ್ ಸೋಶಿಯಲ್ ಆಕ್ಷನ್ (NESA)
ವಿವೇಕಾನಂದ ಫೌಂಡೇಶನ್ (VF)

### ಭಾಗವಹಿಸುವ ಇತರ ಸಂಸ್ಥೆಗಳು

ಆರೋಗ್ಯಪಾಲನೆ ಮತ್ತು ಆರೋಗ್ಯ ನೀತಿಯ ಬಗ್ಗೆ ಕಳಕಳಿಯುಳ್ಳ ಮೇಲಿನ ಸಂಘಟನೆಗಳ ಜಾಲದಲ್ಲಿರುವ ಮತ್ತು ಹೊರಗಿರುವ ಅನೇಕ ಸಂಸ್ಥೆಗಳು ಜನಾರೋಗ್ಯ ಸಭೆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿವೆ.

### ಸಂಪರ್ಕ ವಿಳಾಸ :

ಭಾರತ ಜ್ಞಾನ ವಿಜ್ಞಾನ ಸಮಿತಿ, ಭಾರತೀಯ ವಿಜ್ಞಾನ ಮಂದಿರದ ಆವರಣ, ಬೆಂಗಳೂರು- 560 012
ದೂರವಾಣಿ: 3600384, ಇ-ಮೇಲ್ : bgvs_kar@hotmail.com
ಸಮುದಾಯ ಆರೋಗ್ಯ ಕೋಶ, ನಂ. 367, ಶ್ರೀನಿವಾಸ ನಿಲಯ, ಜಕ್ಕಸಂದ್ರ ಮೊದಲ ಮುಖ್ಯ ರಸ್ತೆ,
ಮೊದಲನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560 034
ದೂರವಾಣಿ: 5531518, ಫ್ಯಾಕ್ಸ್: 5525372 ಇ-ಮೇಲ್: sochara@vsnl.com

# ಪರಿವಿಡಿ

ಅಧ್ಯಾಯ 1: ಎಲ್ಲರಿಗೆ ಆರೋಗ್ಯ: ಎಲ್ಲರಿಗೂ ಮೂಲಭೂತ ಸೌಲಭ್ಯ ------ 1-7

ಅಧ್ಯಾಯ 2: ಮೂಲಭೂತ ನಾಗರೀಕ ಸೌಲಭ್ಯಗಳ ವ್ಯವಸ್ಥೆ ---------------8-19

ಅಧ್ಯಾಯ 3: ಯಶಸ್ಸಿನಿಂದ ಕಲಿಯುವಿಕೆ ---------------------------------- 20-29


ಅಧ್ಯಾಯ 4: ಮೂಲಭೂತ ಶಿಕ್ಷಣ ---------------------------------------- 30-45


ಅಧ್ಯಾಯ 5: ಜನರ ಜೀವನೋಪಾಯದ ಭದ್ರತೆ ------------------------ 46-60

ಅಧ್ಯಾಯ 6: ಹಿಂತಿರುಗಿ ಹೋರಾಡೋಣ ------------------------------ 61-65

ಅಧ್ಯಾಯ - 1


# ಎಲ್ಲರಿಗೆ ಆರೋಗ್ಯ - ಎಲ್ಲರಿಗೆ ಮೂಲಭೂತ ಸೌಲಭ್ಯ








ಪ್ರಾಥಮಿಕ ಆರೋಗ್ಯ ಪಾಲನೆ ಆರೋಗ್ಯ ಕ್ಷೇತ್ರದ ಜೊತೆಗೆ ಇನ್ನಿತರ ಎಲ್ಲಾ ಸಂಬಂಧಿತ ರಾಷ್ಟ್ರೀಯ ಮತ್ತು ಸಾಮುದಾಯಿಕ ಅಭಿವೃದ್ಧಿ ಕ್ಷೇತ್ರಗಳನ್ನು ಒಳಗೊಂಡಿದೆ. ವ್ಯವಸಾಯ, ಪಶುಪಾಲನೆ, ಉದ್ಯಮ, ಶಿಕ್ಷಣ, ವಸತಿ ಸಾರ್ವಜನಿಕ ಕಾಮಗಾರಿ ಸಂಪರ್ಕ ಮತ್ತು ಇತರ ಕ್ಷೇತ್ರಗಳ ಸಮನ್ವಯ ಪ್ರಯತ್ನ ಆರೋಗ್ಯ ಪಾಲನೆಗೆ ಅಗತ್ಯವಾಗಿದೆ.

- ಆಲ್ಮಾ ಆಟಾ ನಿರ್ಣಯ 1978.





ಸಾಕ್ಷರತಾ ಆಂದೋಳನದ ಒಂದು ತರಗತಿ






ಅವರು ಬರೆದ ಪತ್ರಗಳು

ದೇವರೆ
ಈ ದಿನ ನೀರಿನ ಲಾರಿ ಬರಲಿ
ದೇವರೆ
ನಮ್ಮೂರಿಗೆ ಬಸ್ ಸೌಕರ್ಯ ಬೇಗ ಬರಲಿ
ದೇವರೆ
ಯಾವ ತೊಂದರೆ ಇಲ್ಲದೇ ಮಗು ಜನಿಸಲಿ
ದೇವರೆ
ಈ ದಿನ ನನ್ನ ಗಂಡ ಕುಡಿಯದಂತೆ ಮಾಡು
ದೇವರೆ
ನಮ್ಮ ರೇಷ್ಮೆ ಗೂಡಿಗೆ ನ್ಯಾಯವಾದ ಬೆಲೆ ಸಿಗಲಿ. ಇಲ್ಲದಿದ್ದರೆ ನಮಗೆ ಸಾಲಿಗನಿಗೆ[ಮಾರವಾಡಿಗೆ] ಹಣ ಕೊಡಲು ಆಗುವುದಿಲ್ಲ.








ಇದು ಅಂತಹ ಅತಿಯಾದ ಬೇಡಿಕೆಯೇನೂ ಅಲ್ಲ ಎಂಬುದು ನೆನಪಿರಲಿ.
ಬದುಕಿನ ಮೂಲ ಅಗತ್ಯಗಳ ಪೂರೈಕೆಯೇ ಮನುಷ್ಯ ಸಮಾಜದ ಕೇಂದ್ರ ಗುರಿಗಳಲ್ಲೊಂದು. ಮೂಲಭೂತ ಅಗತ್ಯಗಳಿಂದ ವಂಚನೆ ಬದುಕಿನ ಘನತೆಯನ್ನೇ ಇಲ್ಲವಾಗಿಸುತ್ತದೆ, ಬದುಕು ಅಮಾನವೀಯವಾಗುತ್ತದೆ.

**ಜೀವನ ಮಟ್ಟ**


ಆರೋಗ್ಯ ಪರಿಸ್ಥಿತಿ ಜನಗಳ ಜೀವನ ಮಟ್ಟದ ಒಂದು ಅಳತೆಗೋಲು. ಎಲ್ಲಿ ಮೂಲಭೂತ ಅಗತ್ಯಗಳ ಪೂರೈಕೆಯಾಗಿದೆಯೋ ಅಲ್ಲಿ ಜೀವನಮಟ್ಟ ಉತ್ತಮವಾಗಿದ್ದು ಜನಗಳು ಆರೋಗ್ಯವಾಗಿರುತ್ತಾರೆ. ಎಲ್ಲಿ ಮೂಲಭೂತ ಅಗತ್ಯಗಳು ಪೂರೈಕೆಯಾಗುವುದಿಲ್ಲ ಅಲ್ಲಿ ಜೀವನ ಮಟ್ಟ ಕಳಪೆಯಾಗಿದ್ದು ಬದುಕು ಒಂದು ಅಸಹನೀಯ ಹೋರಾಟವಾಗಿರುತ್ತದೆ.


## ಎಲ್ಲರಿಗಾಗಿ ಆರೋಗ್ಯ ಘೋಷಣೆಯನ್ನು ನಾವು ಇನ್ನೊಮ್ಮೆ ನೋಡೋಣ.

⇨ ಆರೋಗ್ಯ ಎಂದರೆ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಸುಸ್ಥಿತಿ.


⇨ ಎಲ್ಲರೂ ಎಂದರೆ ಕೆಲವೇ ಕೆಲವು ಅದೃಷ್ಟಶಾಲಿಗಳಲ್ಲ.

ಎಲ್ಲರೂ ಎಂದರೆ ಎಲ್ಲರೂ ಎಂದರ್ಥ. ಎಲ್ಲರಿಗಾಗಿ ಎಂದು ಬರುವ ಯಾವ ಘೋಷಣೆಯೂ ನಿಜಗೊಂಡಿಲ್ಲ. ಎಲ್ಲರಿಗಾಗಿ ಆರೋಗ್ಯ, ಎಲ್ಲರಿಗಾಗಿ ಶಿಕ್ಷಣ, ಎಲ್ಲರಿಗಾಗಿ ಆಹಾರ ಈ ಯಾವುದರಲ್ಲೂ - ಎಲ್ಲರಿಗಾಗಿ ಎಂಬುದು ಕೇವಲ ನಮ್ಮ ಕಲ್ಪನೆಯಾಗಿ ಉಳಿದಿದೆ. ಕೇವಲ ಅಲಂಕಾರದ ಮಾತಾಗಿದೆ. ವಾಸ್ತವವಾಗಿ ಎಲ್ಲವೂ ಕೆಲವರಿಗಾಗಿ ಮಾತ್ರ ಇದೆ. ಈಗಿನ ಕಾರ್ಯಕ್ರಮ ಎಲ್ಲರಿಗಾಗಿ ಎಂಬುದನ್ನು ನಿಜಕ್ಕೂ ಎಲ್ಲರಿಗಾಗಿ ಅನುಷ್ಠಾನಗೊಳಿಸುವುದು.





ಬದುಕಿನ ಬಗೆಗೆ ಸರಿಯಾದ ನಿಲುವು ಅಂದರೆ ''ಮನುಷ್ಯನ ಅಗತ್ಯಗಳ ಹಾಗೂ ಆ ಅಗತ್ಯಗಳಿಗಿರುವ ಸಂಬಂಧಗಳ ಸರಿಯಾದ ನಿಲುವು. ಅಂದರೆ ಮನುಷ್ಯನ ಅಗತ್ಯಗಳ ಹಾಗೂ ಆ ಅಗತ್ಯಗಳಿಗಿರುವ ಸಂಬಂಧಗಳ ಸರಿಯಾದ ತಿಳುವಳಿಕೆ, ಆಹಾರ, ಉಡುಪು, ವಸತಿ ಮುಂತಾದ ಮೂಲಭೂತ ಅಗತ್ಯಗಳು ಪ್ರೀತಿ ಹಾಗೂ ಸುಭದ್ರತೆಯ ಭಾವನೆ ಮುಂತಾದ ಭಾವನಾತ್ಮಕ ಅಗತ್ಯಗಳು ಹಾಗೂ ಸಾಮಾಜಿಕ ಮನ್ನಣೆ'' ಇವೆಲ್ಲವೂ - ಇಲ್ಲದೆ ಮನಸ್ಸಿನ ಸ್ವಾಸ್ಥ್ಯ ಸಾಧ್ಯವಿಲ್ಲ.






ಹಾಗೆಯೇ ದೈಹಿಕ ಆರೋಗ್ಯವಿಲ್ಲದೆ ಮಾನಸಿಕ ಆರೋಗ್ಯವಿಲ್ಲ.

⇩

ಪ್ರತಿಯೊಬ್ಬರಿಗೂ ಆಹಾರ, ಉಡುಪು, ಶಿಕ್ಷಣ ಹಾಗೂ ಆರೋಗ್ಯ ಸೇವಾ ಸೌಲಭ್ಯ ದೊರೆಯುವುದು ಅಗತ್ಯ.

⇩


ಈ ದೊರೆಯುವಿಕೆ ಸಾಧ್ಯವಾಗುವುದು ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆಯನ್ನು ಒಂದು ಹಕ್ಕಾಗಿ ಜಾರಿಗೊಳಿಸಿದಾಗ ಮಾತ್ರ.

⇩

ನಿರುದ್ಯೋಗ, ಒಂದು ವಾಸ್ತವ ಮಾತ್ರವಲ್ಲದೆ ಒಂದು ಸೈದ್ಧಾಂತಿಕ ಅಗತ್ಯವೂ ಆಗುವ ಸಮಾಜದಲ್ಲಿ ಆರ್ಥಿಕ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಿಕೆ ಮೂಲಭೂತ ಹಕ್ಕಾಗಿ ಜಾರಿಯಾಗುವುದು ಸಾಧ್ಯವಿಲ್ಲ.

⇩

**ಆದ್ದರಿಂದ, ಎಲ್ಲರಿಗಾಗಿ ಆರೋಗ್ಯಕ್ಕೆ ಜನತೆಯ ಆರ್ಥಿಕ ಹಾಗೂ ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯ ಹೆಚ್ಚಳ ಅಗತ್ಯ. ದುರಾಸೆಯ ವಿರುದ್ಧ ವಿವೇಕದ ಶಿಕ್ಷಣ ಅಗತ್ಯ.**




ಆದ್ದರಿಂದಲೇ ನಾವು ಪರ್ಯಾಯಗಳಿಗಾಗಿ ಹುಡುಕಾಡಬೇಕಾಗಿದೆ ಮತ್ತು ಜನಾರೋಗ್ಯ ಸಭಾ ಚಳುವಳಿ ಅಂತಹ ಹುಡುಕಾಟದ ಒಂದು ಮುಖ್ಯ ಪ್ರಯತ್ನವಾಗಿದೆ.


## ಜನಾರೋಗ್ಯ ಸಭಾ ಚಳುವಳಿಯ ಕೇಂದ್ರ ಬಿಂದು

ಢಾಕಾದಲ್ಲಿ ನಡೆಯುವ ಜನಾರೋಗ್ಯ ಸಮ್ಮೇಳನಕ್ಕೆ ಪೂರ್ವಭಾವಿಯಾದ ಒಂದು ವರ್ಷದ ಅವಕಾಶವನ್ನು ಈ ಕೆಳಗಿನ ಕಾರ್ಯಕ್ರಮಗಳಿಗಾಗಿ ಬಳಸಿಕೊಳ್ಳಬೇಕು.

1. ನಿಜವಾದ ಬೆಳವಣಿಗೆಯ ವಿಷಯವನ್ನು ಪ್ರಚಾರಗೊಳಿಸುವುದು.
2. ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಹಾಗೂ ಬಳಕೆದಾರ ಸಂಸ್ಕೃತಿಯನ್ನು ಪ್ರಶ್ನೆ ಮಾಡುವುದು. ಶೇಕಡಾ 20 ರಷ್ಟು ಅಲ್ಪಸಂಖ್ಯಾತರು ಎಲ್ಲರ ಹಿತಕ್ಕೆ ದ್ರೋಹ ಬಗೆಯುವ ಪ್ರಕ್ರಿಯೆಯಲ್ಲಿ ತೊಡಗಿರುವುದನ್ನು ಬಹಿರಂಗಗೊಳಿಸಬೇಕು .

ದೇಶವು ಬಹುಸಂಖ್ಯಾತರ ಹಿತಕ್ಕಾಗಿ ತನ್ನ ಪಥವನ್ನು ಬದಲಿಸುವ ಅಗತ್ಯವಿದೆ. ಜನ ಆರೋಗ್ಯ ಸಭಾ ಈ ದಿಕ್ಕಿನಲ್ಲಿ ಪರ್ಯಾಯವಾದ ಬೆಳವಣಿಗೆಯ ಮಾರ್ಗಗಳನ್ನು ಶೋಧಿಸಿ, ಬೆಳೆಸಿ ಅವುಗಳ ಜಾರಿಗೆ ಹೋರಾಡಬೇಕು. ಈ ಚಳುವಳಿಯು ಪರಿಣಾಮಕಾರಿಯಾಗಲು ಜನತೆಯ ಸೃಜನಶೀಲ ಶಕ್ತಿಯ ವಾಹಕಗಳಾದ ವಿಮರ್ಶೆ, ಸಲಹೆ ಹಾಗೂ ಕ್ರಿಯಾತ್ಮಕತೆಯ ಅಗತ್ಯವಿದೆ.


ಈ ಚಳುವಳಿ ಜನತೆಯ ಕ್ರಿಯಾಶೀಲತೆಗೆ ದಾರಿಯಾಗಬೇಕು. ಪಂಚಾಯಿತಿ, ಸ್ವಯಂ ಸೇವಾ ಸಂಘಟನೆಗಳು, ಜನ ಚಳುವಳಿಗಳು, ಕಾರ್ಮಿಕರು, ರೈತರು, ಮಹಿಳೆಯರು, ಯುವಕರು, ವಿದ್ಯಾರ್ಥಿಗಳು, ಉದ್ಯೋಗಸ್ಥರು, ಕಲಾವಿದರು, ಇವೆಲ್ಲರನ್ನೂ ಕಾರ್ಯಪ್ರವೃತ್ತರಾಗಿಸಲು ವೇಗವರ್ಧಕವಾಗಬೇಕು.





ನೈರ್ಮಲ್ಯ, ಕುಡಿಯುವ ನೀರು, ಪೋಷಕ ಆಹಾರ, ವಸತಿ, ಸಾರಿಗೆ, ಶಿಕ್ಷಣ, ಉದ್ಯೋಗ, ಆರೋಗ್ಯ ಸೇವೆ ಮುಂತಾದವುಗಳ ಜಾರಿಗಾಗಿ ನಡೆಸುವ ಚಳುವಳಿಗಳು ಪರಿಣಾಮಕಾರಿಯಾಗುವುದು ಸ್ಥಳೀಯ ಮಟ್ಟದ ಯೋಜನೆ ಹಾಗೂ ಕಾರ್ಯಚಟುವಟಿಕೆಗಳ ಮೂಲಕವೇ.

ಎಲ್ಲರಿಗಾಗಿ ಇಂದೇ ಆರೋಗ್ಯ ಘೋಷಣೆ ಸೂಚಿಸುವುದೆಂದರೆ

- ನಾವು ಇಲ್ಲಿಯವರೆಗೆ ಯಾರೋ 2000ನೇ ಇಸವಿಯ ವೇಳೆಗೆ ಆರೋಗ್ಯವನ್ನು ದೊರಕಿಸಿಕೊಡುವರೆಂಬ ನಿರೀಕ್ಷೆಯಲ್ಲಿದ್ದೆವು.
- ನಾವು ಭ್ರಮನಿರಸನಗೊಂಡಿದ್ದೇವೆ.
- ನಾವೀಗ ನಮ್ಮ ಆರೋಗ್ಯಕ್ಕಾಗಿ ಕಾರ್ಯಪ್ರವೃತ್ತರಾಗುತ್ತೇವೆ.






ಈ ಐದೂ ಕ್ಷೇತ್ರಗಳಿಗೆ ಪರಸ್ಪರ ಸಂಬಂಧವಿದೆ. ಇವೆಲ್ಲದರ ಒಟ್ಟು ಮೊತ್ತವೇ ಆರೋಗ್ಯ

ಈ ಪುಸ್ತಕವು ಒಂದು ಗೌರವಯುತ ಬದುಕಿಗೆ ಅಗತ್ಯವಾದ ಮೂಲಭೂತ ಅಗತ್ಯಗಳ ಪೂರೈಕೆಯಲ್ಲಿನ ಬಿಕ್ಕಟ್ಟನ್ನು ಪರಿಶೀಲಿಸುತ್ತದೆ. ಕುಡಿಯುವ ನೀರಿನ ಸೌಲಭ್ಯ ದೊರಕಿಸಿಕೊಡುವುದು ಒಂದು ರಾಜಕೀಯ ಬೇಡಿಕೆಯಾದರೂ, ಸರ್ಕಾರ ಈ ಬೇಡಿಕೆಯನ್ನು ಪೂರೈಸಲು ವಿಫಲವಾಗಿದೆ ಎಂಬುದನ್ನು ಪರೀಕ್ಷಿಸುತ್ತದೆ. ರಚನಾತ್ಮಕ ಹೊಂದಾಣಿಕಾ ನೀತಿಯು (Structural Adjustment Policies) ಮೂಲಭೂತ ಸೌಕರ್ಯಗಳ ಪೂರೈಕೆಯ ಮೇಲೆ ಉಂಟುಮಾಡುವ ಪರಿಣಾಮವನ್ನು ವಿಮರ್ಶಿಸುತ್ತದೆ. ಕೆಲವು ಬದಲೀ ಯೋಜನೆಗಳ ಅನುಷ್ಠಾನದ ಸಂದರ್ಭಗಳ ಅಧ್ಯಯನದೊಂದಿಗೆ ಮೂಲಭೂತ ಸೌಲಭ್ಯಗಳ ಪೂರೈಕೆಯನ್ನು ಸಾಧ್ಯವಾಗಿಸಲು ಅಗತ್ಯವಾದ ನೀತಿಗಳ ಮಾರ್ಪಾಟನ್ನು ಸೂಚಿಸುತ್ತದೆ. ಇಲ್ಲಿ ಚರ್ಚಿಸಬೇಕಾದ ಕ್ಷೇತ್ರ ತುಂಬಾ ವ್ಯಾಪಕವಾದ್ದರಿಂದ ಪ್ರಸಕ್ತ ಸಂದರ್ಭದ ಸವಿಸ್ತಾರವಾದ ವಿಮರ್ಶೆ ಸಾಧ್ಯವಿಲ್ಲ. ಇಲ್ಲಿನ ದೃಷ್ಟಿ, ಜನತೆಯೊಂದಿಗೆ ವಿಚಾರ ವಿನಿಮಯವನ್ನು ಮಾಡಲು, ಪರ್ಯಾಯ ವ್ಯವಸ್ಥೆಯ ಯೋಜನೆಗಳನ್ನು ಪ್ರಾರಂಭಿಸಲು ಅಗತ್ಯವಾದ ತಿಳುವಳಿಕೆಯ ಮೇಲೆ ಕೇಂದ್ರಿಕೃತವಾಗಿದೆ.

ಅಧ್ಯಾಯ - 2

# ಮೂಲಭೂತ ನಾಗರಿಕ ಸೌಲಭ್ಯಗಳ ವ್ಯವಸ್ಥೆ





ಸಂಪನ್ಮೂಲ ಮತ್ತು ಕೌಶಲ್ಯದ ಅಸಮಾನ ಹಂಚಿಕೆಯಿಂದಾಗಿ ಮತ್ತು ಸಮುದಾಯದ ಹಿಡಿತವನ್ನು ಮೀರಿದ ಆರ್ಥಿಕ ಅಂಶಗಳಿಂದಾಗಿ ಜೀವನೋಪಾಯದ ಪೂರೈಕೆ ಕಷ್ಟವೆನಿಸುತ್ತದೆ ನಿಜ. ಆರೋಗ್ಯ ಮತ್ತು ಶಿಕ್ಷಣದ ಸೌಲಭ್ಯಗಳನ್ನೊದಗಿಸಲು ಪ್ರಯತ್ನಗಳಾಗಿವೆ ಎಂಬುದೂ ನಿಜವೇ. ಇವುಗಳ ಗುಣಮಟ್ಟ ಪ್ರಶ್ನಾರ್ಹವಾದರೂ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳ ವ್ಯವಸ್ಥೆಯಂತೂ ಆಗಿದೆ.

ಆದರೆ ಪ್ರತಿಯೊಬ್ಬ ಗ್ರಾಮೀಣ ವ್ಯಕ್ತಿಯೂ ಕೇಳುವ ಕುಡಿಯುವ ನೀರು, ಬೀದಿ ದೀಪಗಳ ಸೌಲಭ್ಯದ ವ್ಯವಸ್ಥೆ ಇಲ್ಲ ಎಂಬುದು ಆಶ್ಚರ್ಯದ ಸಂಗತಿ. ಒಂದು ಪ್ರಜಾಪ್ರಭುತ್ವದೊಳಗೆ ಜನಪ್ರಿಯ ಬೇಡಿಕೆಗಳಾದ ಇವುಗಳನ್ನು, ಪ್ರಭುತ್ವ ಪೂರೈಸಬೇಕಿತ್ತೆಂದು ನಿರೀಕ್ಷಿಸಬಹುದು. ಆದರೆ ಹಾಗೆ ಆಗಿಲ್ಲ. ಹಾಗೇಕೆ ಆಗಿಲ್ಲ ಎಂಬುದನ್ನು ಈ ಅಧ್ಯಾಯದಲ್ಲಿ ಕುಡಿಯುವ ನೀರು, ಶೌಚ ವ್ಯವಸ್ಥೆ ಮತ್ತು ವಾಸಗೃಹ ಈ ಮೂರು ಸಂಗತಿಗಳಿಗೆ ಸಂಬಂಧಿಸಿದಂತೆ ಪರಿಶೀಲಿಸಲಾಗುತ್ತದೆ.




## ಕುಡಿಯುವ ನೀರು

1980 ದಶಕದಲ್ಲಿ ರಾಜೀವ್ ಗಾಂಧಿ ರಾಷ್ಟ್ರೀಯ ಕುಡಿಯುವ ನೀರಿನ ಯೋಜನೆ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರು ಒದಗಿಸುವ ಮುಖ್ಯ ಯೋಜನೆಯಾಗಿ ರೂಪುಗೊಂಡಿತು.





ಆಗ ಅನುಸರಿಸಿದ ಇನ್ನೊಂದು ಮಾರ್ಗೋಪಾಯವೆಂದರೆ ಬೋರ್‌ವೆಲ್‌ಗಳನ್ನು ಕೊರೆದು ಅದರಿಂದ ಒಂದು ಓವರ್ ಹೆಡ್ ಟ್ಯಾಂಕಿಗೆ ನೀರೆತ್ತಿ ನೀರನ್ನು ಸರಬರಾಜು ಮಾಡುವುದು. ಈ ಕಾರ್ಯ ಯೋಜನೆಗಳ ಮೂಲಕ ಸಮಸ್ಯೆಯ ಗ್ರಾಮಗಳ ಸಂಖ್ಯೆಯನ್ನು ಸೊನ್ನೆಗೆ ತರಲಾಯಿತು.

ಆದರೂ ಸಮಸ್ಯೆಗಳು ಉಳಿದವು. ಗ್ರಾಮಗಳಲ್ಲಿನ ಕೆಲ ಭಾಗಗಳಿಗೆ ನೀರು ದೊರಕಲಿಲ್ಲ.





ಗ್ರಾಮೀಣ ಪ್ರದೇಶದ ಕೊಪ್ಪಲುಗಳಲ್ಲಿ ಮೂರನೇ ಒಂದು ಭಾಗ ಈ ಯೋಜನೆಗೆ ಒಳಪಡಲಿಲ್ಲ. ಈ ಸಮಸ್ಯೆಗೆ ಪರಿಹಾರವನ್ನು ಹುಡುಕುವ ಪ್ರಯತ್ನವಾಯಿತು. ನಂತರ ಸುಮಾರು ಶೇ. 81ರಷ್ಟು ಮನೆಗಳು ಈ ಯೋಜನೆಯ ವ್ಯಾಪ್ತಿಗೆ ಬಂದವು. (ಗ್ರಾಮೀಣ ಪ್ರದೇಶದಲ್ಲಿ ಶೇ. 79ರಷ್ಟು ಮತ್ತು ನಗರ ಪ್ರದೇಶದಲ್ಲಿ ಶೇ.88ರಷ್ಟು).


ಬೋರ್‌ವೆಲ್‌ಗಳ ಸಮಸ್ಯೆಯೊಂದಿಗೆ ಪಂಪುಗಳು ಕೆಟ್ಟು ಪದಃ ಪದೇ ಅವುಗಳನ್ನು ರಿಪೇರಿ ಮಾಡಿಸಬೇಕಾಗಿ ಬಂದದ್ದು ಇನ್ನೊಂದು ಸಮಸ್ಯೆ. ಈ ಸಮಸ್ಯೆಗೆ ಉಪಾಯವಾಗಿ ಮಾರ್ಕ್ 3 ಪಂಪುಗಳನ್ನು ಒದಗಿಸಿ ಸ್ಥಳೀಯರಿಗೆ ಪಂಪುಗಳ ರಿಪೇರಿಯನ್ನು ಕಲಿಸಿ ರಿಪೇರಿಯ ಉಪಕರಣಗಳನ್ನು ನೀಡಲಾಯಿತು. ಉತ್ತರ ಪ್ರದೇಶದ ಬಾಂಡಾ ಮುಂತಾದೆಡೆ, ಮಹಿಳೆಯರಿಗೂ ರಿಪೇರಿಯ ತರಬೇತಿ ನೀಡಲಾಯಿತು. ಆದರೂ ಈ ಪಂಪುಗಳ ನಿರ್ವಹಣೆ ಇನ್ನೂ ಸಮಸ್ಯೆಯಾಗಿ ಉಳಿದಿದೆ.


ಈ ಕೈಪಂಪ್ ಸರಿಪಡಿಸುವವರಾರು?




ನಿಜ, ಅಂತರ್ಜಲ ಕುಸಿದಿದ್ದು ಕುಡಿಯುವ ನೀರಿನ ಕಾರಣದಿಂದಲ್ಲ. ಅತಿಯಾಗಿ ನೀರನ್ನು ಬಳಸುವ ಕೃಷಿಯಿಂದ, ವರ್ಷಕ್ಕೆ ಮೂರು ಬಾರಿ ಭತ್ತವನ್ನೋ ಅಥವಾ ನೀರು ತುಂಬಾ ಬೇಕಾಗುವಂತೆ ಕಬ್ಬನ್ನೋ ಬೆಳೆಸಿದ್ದರಿಂದ, ಶ್ರೀಮಂತರು ಹೆಚ್ಚು ಹೆಚ್ಚು ಆಳಕ್ಕೆ ಬೋರ್ ತೋಡಿಸಿದ್ದರಿಂದ ಬಡವರಿಗೆ ಕುಡಿಯಲೂ ಸಹ ನೀರಿಲ್ಲವಾಯಿತು. ಇದು ಸರಿಯಾದ ಯೋಜನೆಯ








ಕೊರತೆಯಿಂದಾದುದು. ಸಮಾನ ಹಂಚಿಕೆಯ ಅಗತ್ಯವನ್ನು ಅಲಕ್ಷಿಸಿದ್ದರಿಂದ ಆದದ್ದು. ಈ ಅಂಶಗಳನ್ನು ಎಂದೂ ಪರಿಗಣಿಸಿಯೇ ಇರಲಿಲ್ಲ.



ಇದಕ್ಕೆ ಕಾರಣ ಕಬ್ಬಿಣದ ಅಂಶದಿಂದಾಗಿ ನೀರಿಗೆ ಅಹಿತಕರ ವಾಸನೆ ಮತ್ತು ಬಣ್ಣ ಬರುವುದು. ಆರ್ಸೆನಿಕ್ ಅಥವಾ ಫ್ಲೋರೋಸಿಸ್‌ನ ಅಪಾಯವೂ ಇದ್ದದ್ದೇ. ಬೋರ್‌ವೆಲ್‌ಗಳ ಆಳ ಹೆಚ್ಚಿದಂತೆ ಕಲ್ಲು ಬಂಡೆಗಳಿಂದಿಳಿಯುವ ರಾಸಾಯನಿಕಗಳ ಅಪಾಯವೂ ಹೆಚ್ಚುತ್ತದೆ.





ಬೋರ್‌ವೆಲ್‌ನಿಂದ ತೆಗೆದ ಅಂತರ್ಜಲದ ಅನುಕೂಲತೆಯೆಂದರೆ ಅದು ಕಲುಷಿತಗೊಂಡಿರುವುದಿಲ್ಲ ಎಂಬುದು. ಭೂಮಿಯ ಮೇಲ್ಭಾಗದ ಕೊಳ, ಕೆರೆ, ನದಿಯ ನೀರು ಸುಲಭವಾಗಿ ಕಲುಷಿತಗೊಳ್ಳುತ್ತದೆ. ಕೆಲವು ಕೊಳ ಕೆರೆಗಳಲ್ಲಿ ಸ್ನಾನ, ಬಟ್ಟೆ ತೊಳೆಯುವುದನ್ನು ನಿಷೇಧಿಸಿದ್ದರೂ ಹರಿದು ಬರುವ ಮಳೆ ನೀರಿನಿಂದ ಅದು ಕಲುಷಿತವಾಗುತ್ತದೆ. ಬೋರ್‌ವೆಲ್ ನೀರು ಚೆನ್ನಾಗಿದ್ದಾಗಲೂ ಸಾಂಸ್ಕೃತಿಕ ಕಾರಣಗಳಿಗಾಗಿ ಎಷ್ಟೋ ಜನ ಕೆರೆ ನೀರನ್ನೇ ಬಳಸುತ್ತಾರೆ. ನೀರಿನಿಂದ ಬರುವ ಕಾಯಿಲೆಗಳ ಬಗೆಗೆ ಸರಿಯಾದ ಮಾಹಿತಿ ಇಲ್ಲದಿರುವುದರಿಂದ ಎಷ್ಟೋ ಜನ ಸುರಕ್ಷಿತ ನೀರನ್ನು ಬಳಸುವ ಅಗತ್ಯವನ್ನು ಮನಗಾಣುವುದಿಲ್ಲ.




**ಅವರ ಸಂಖ್ಯೆ ಶೇ. 80 ಕ್ಕೂ ಕಡಿಮೆ.**

ಒಂದು NCAER ಅಧ್ಯಯನದ ಪ್ರಕಾರ ನಮ್ಮ ದೇಶದಲ್ಲಿ ಸುರಕ್ಷಿತವಲ್ಲದ ನೀರಿನ ಬಳಕೆ ಶೇ. 52ರಷ್ಟಿದೆ. ಸುರಕ್ಷಿತ ನೀರಿನ ಬಳಕೆಯಲ್ಲಿ (48%) ಶೇ.16.6 ರಷ್ಟು ಬೋರ್‌ವೆಲ್ ನೀರು ಶೇ.18.4ರಷ್ಟು ಕೈ ಪಂಪುಗಳು, ಶೇ.13 ರಷ್ಟು ಬಾವಿಯೂ ಸೇರಿದಂತೆ ಇತರ ಮೂಲಗಳಿಂದ ಬಂದದ್ದು.




ಎನ್.ಸಿ.ಸಕ್ಸೇನಾ, (ಗ್ರಾಮೀಣಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ) ಹೀಗೆ ಹೇಳುತ್ತಾರೆ: (ಇಂಡಿಯನ್ ಎಕ್ಸ್ ಪ್ರೆಸ್ ಏಪ್ರಿಲ್ 16, 2000)

ಒಂದು ಆದ್ಯತಾ ವಿಷಯವಾದ ಕುಡಿಯುವ ನೀರಿನ ಸಮಸ್ಯೆಯ ಸ್ಥಿತಿಯೇ ಹೀಗಿರುವುದು, ದೇಶದ ಆಡಳಿತ ವ್ಯವಸ್ಥೆಯ ಬಗೆಗಿನ ವಿಷಾದನೀಯ ಹೇಳಿಕೆಯಾಗುತ್ತದೆ.

## ರಚನಾತ್ಮಕ ಹೊಂದಾಣಿಕಾ ನೀತಿ (STRUCTURAL ADJUSTMENT POLICY) ಮತ್ತು ಕುಡಿಯುವ ನೀರು

ರಚನಾತ್ಮಕ ಹೊಂದಾಣಿಕಾ ನೀತಿಗೆ (ಇದು ಜಾಗತೀಕರಣದ ಒಂದು ಅಂಶ) ಕುಡಿಯುವ ನೀರಿನಂತಹ ವಿಷಯಗಳ ಬಗೆಗೆ ಕಾಳಜಿ ಇಲ್ಲ. ಈ ನೀತಿಯನ್ನು ಬೆಂಬಲಿಸುವ ಅರ್ಥಶಾಸ್ತ್ರಜ್ಞರಿಗೆ ಕುಡಿಯುವ ನೀರು ಒಂದು ಮುಖ್ಯ ಆದ್ಯತೆಯೇ ಅಲ್ಲ. ಈ ನೀತಿಯಿಂದಾಗಿ ಸರ್ಕಾರದ ಖರ್ಚಿನಲ್ಲಿ ಕಡಿತವಾಗುವುದರಿಂದ, ಸರ್ಕಾರ ಇಂತಹ ಸೇವೆಗಳ ಮೇಲಿನ ಖರ್ಚನ್ನು ಕಡಿತಗೊಳಿಸುತ್ತದೆ. ಈ ನೀತಿಯ ಪರವಾದ ಅರ್ಥಶಾಸ್ತ್ರಜ್ಞರಲ್ಲಿ ಕುಡಿಯುವ ನೀರಿನ ಸರಬರಾಜನ್ನು ಖಾಸಗೀಕರಣಗೊಳಿಸುವುದರಿಂದ ಸಿಗುವ ಲಾಭದ ಲೆಕ್ಕಾಚಾರವೂ ಇದೆ.




ಸರ್ಕಾರ ಕುಡಿಯುವ ನೀರನ್ನು ಸರಬರಾಜು ಮಾಡಲು ವಿಫಲವಾಗಿರುವುದರಿಂದ ಅದನ್ನು ಖಾಸಗೀಕರಣಗೊಳಿಸಿದರೆ ತಪ್ಪೇನು?

ಇದು ಹಾಸ್ಯಾಸ್ಪದ ವಾದ ಏಕೆಂದರೆ.......

1. ನೀರಿನ ಸರಬರಾಜನ್ನು ಖಾಸಗೀಕರಣಗೊಳಿಸಿರುವ ದೇಶಗಳಲ್ಲಿ ಅತಿಯಾದ ಬೆಲೆ, ಕಳಪೆ ಸೇವೆ ಮತ್ತು ಕಳಪೆ ಗುಣಮಟ್ಟದ ದೂರುಗಳಿವೆ.
2. ನಮ್ಮ ದೇಶದಂತಹ ಬಡ ದೇಶದಲ್ಲಿ ಬಹುಸಂಖ್ಯಾತ ಬಡವರು ಕುಡಿಯುವ ನೀರಿಗಾಗಿ ಹಣ ತೆರಬೇಕಾಗುವುದು ಒಪ್ಪಿಕೊಳ್ಳಲಾಗದ ಮಾತು.

ನಾನು ನಿಮಗೆ ಸುರಕ್ಷಿತ ನೀರು ಕೊಡುತ್ತೇನೆ.
ನೀರಿನ ವಿಷಯ ಖಾಸಗಿ ಕ್ಷೇತ್ರಕ್ಕೆ ಬಿಡಿ.






ನಾವು ಪರಿಶೀಲಿಸಬೇಕಾದುದು ಸರ್ಕಾರದ ಯೋಜನೆಗಳು ಹೇಗೆ ಕೆಲಸ ಮಾಡಬೇಕು ಎಂಬುದು, ಸರ್ಕಾರದ ಯೋಜನೆಗಳು ಕೆಲಸ ಮಾಡಬಾರದು ಎಂದಲ್ಲ. ಖಾಸಗೀಕರಣ ಎಂದರೆ ಬದುಕಿನಲ್ಲಿ ಸಮಸ್ಯೆಗಳಿವೆ ಎನ್ನುವ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಂತೆ.

ಖಾಸಗೀ ಕ್ಷೇತ್ರವೆಂದರೆ ಕಾರ್ಪೋರೇಟ್ ಕ್ಷೇತ್ರವೆಂದೂ, ಸರ್ಕಾರಿ ಕ್ಷೇತ್ರವೆಂದರೆ ಕೇಂದ್ರಿಕೃತ ಆಧಿಕಾರ ಶಾಹಿ ಎಂದೂ ಹೇಳುವ ಈ ಎರಡು ಕ್ಷೇತ್ರಗಳ ನಡುವಿನ ವೈರುಧ್ಯ ಹುಸಿಯಾದದ್ದು.


ಎನ್.ಹೆಚ್. ಆಂತಿಯಾ

ಸ್ಥಳೀಯ ಸಮುದಾಯಗಳ ಹಿಡಿತಕ್ಕೊಳಪಟ್ಟ ಜನತಾ ಕ್ಷೇತ್ರ ಯಾಕಾಗಬಾರದು?



## ನೈರ್ಮಲ್ಯ

ಈ ವಿಷಯದಲ್ಲಿ ನಮ್ಮ ದಾಖಲೆ ಕಳವಳಕಾರಿ. ನಮ್ಮ ದೇಶದಲ್ಲಿ ಶೌಚಾಲಯಗಳ ಸೌಲಭ್ಯ ಹೊಂದಿರುವ ಜನರ ಸಂಖ್ಯೆ ಶೇ.29 ಮಾತ್ರ.




ಈ ಶೇ. 29ರ ಲೆಕ್ಕದಲ್ಲಿ ಸಾರ್ವಜನಿಕ ಶೌಚಾಲಯಗಳಿರುವ ಪ್ರದೇಶದ ಮಂದಿಯೂ ಸೇರಿದ್ದಾರೆ. ವಾಸ್ತವವಾಗಿ ಈ ಶೌಚಾಲಯಗಳೆಷ್ಟೋ ಕೆಲಸ ಮಾಡುವುದಿಲ್ಲ.

ನಗರ ಪ್ರದೇಶದಲ್ಲಿರುವ ಪ್ರತಿಯೊಂದು ಶೌಚಾಲಯವನ್ನು ಬಳಕೆಯೋಗ್ಯ ಎಂದೇ ಭಾವಿಸಿ ಶೇ. 70ರಷ್ಟು ನಗರ ವಾಸಿಗಳು ಶೌಚಾಲಯ ಸೌಲಭ್ಯ ಹೊಂದಿರುವರು ಎನ್ನಲಾಗುತ್ತದೆ. ಇದು ನಿಜವಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯ ಸೌಲಭ್ಯ ಹೊಂದಿರುವವರ ಸಂಖ್ಯೆ ಶೇ. 14 ಮಾತ್ರ.

ಈ ಲೆಕ್ಕಾಚಾರದ ಉತ್ಪ್ರೇಕ್ಷೆಯ ನಡುವೆಯೂ ನೈರ್ಮಲ್ಯದ ವಿಷಯದಲ್ಲಿ ನಾವು ಅತ್ಯಂತ ಹಿಂದುಳಿದವರ ಸಾಲಿನಲ್ಲಿ ಬರುತ್ತೇವೆ. ಈ ಸೌಲಭ್ಯ ಪಡೆದವರ ಸಂಖ್ಯೆ ಉಪ ಸಹಾರ ಆಫ್ರಿಕಾದ ಬಡದೇಶ ಕೆನ್ಯಾದಲ್ಲಿ ಶೇ. 81, ಟಾಂಜೇನಿಯಾದಲ್ಲಿ ಶೇ. 86%, ನೈಜೀರಿಯಾದಲ್ಲಿ ಶೇ. 81%, ಉಗಾಂಡಾದಲ್ಲಿ ಶೇ. 57% ಶ್ರೀಲಂಕಾದಲ್ಲಿ ಶೇ. 63% ಪಾಕಿಸ್ತಾನದಲ್ಲಿ ಶೇ. 56%.

ಶೌಚಾಲಯ, ಚರಂಡಿ, ಕಸದ ವಿಲೇವಾರಿಯಂತಹ ವಿಷಯಗಳಲ್ಲಿ ನಮ್ಮ ಸಾಧನೆ ಶೋಚನೀಯ. ನಾನು 'ನೈರ್ಮಲ್ಯವನ್ನು' ಸ್ವಾತಂತ್ರ್ಯ ಚಳುವಳಿಯ ಒಂದು ಭಾಗವಾಗಿಸಿ ಹೋರಾಡಿದ್ದೇನೆ.



ಆದರೆ ಯೋಜನಾಕರ್ತರು ನೈರ್ಮಲ್ಯಕ್ಕೆ ಕಾಗದದ ಮೇಲೆ ಸತತವಾಗಿ ಒತ್ತು ನೀಡಿದ್ದಾರೆ.
ನೈರ್ಮಲ್ಯಕ್ಕಾಗಿ ಯೋಜನಾ ವೆಚ್ಚ ಕಡಿಮೆಯಾದರೂ, ಈ ಹಣದ ಬಳಕೆಯೂ ಸಾಧ್ಯವಾಗಿಲ್ಲ. ಎಷ್ಟೋ ವೇಳೆ ಶೌಚಾಲಯಗಳನ್ನು ನಿರ್ಮಿಸುವುದಿಲ್ಲ ಮತ್ತು ನಿರ್ಮಿಸಿದರೂ ಅವುಗಳನ್ನು ಕಟ್ಟಿಗೆ ಶೇಖರಿಸಲು ಬಳಸಿರುವುದೂ ಇದೆ.
ಆದರೆ ಕಳೆದ ದಶಕದಲ್ಲಿ ನಡೆಸಿದ ಸಮೀಕ್ಷೆಗಳ ಪ್ರಕಾರ ನೈರ್ಮಲ್ಯದ ಅರಿವು ಮತ್ತು ಶೌಚಾಲಯದ ಬೇಡಿಕೆ ಹೆಚ್ಚಿರುವುದು ಕಂಡು ಬರುತ್ತದೆ. ಈ ಅರಿವು ಮಹಿಳೆಯರಲ್ಲಿ ಜಾಸ್ತಿ. ಅವರಿಗೆ ಅದು ಗೌರವದ ಪ್ರಶ್ನೆಯೂ ಹೌದು. ಗಿಡ ಕಂಟಿಗಳು ಮರೆಯಾಗುತ್ತಿರುವುದರಿಂದ ಏಕಾಂತ ಒಂದು ಸಮಸ್ಯೆಯಾಗುತ್ತದೆ.





**ಸರಿಯಾದ ಉತ್ತರಕ್ಕೆ ಗುರುತು ಮಾಡಿ.**

ಶೌಚಾಲಯದ ಬೇಡಿಕೆಗೆ ಕೆಳಗಿನ ಯಾವ ಅಂಶ ಅತ್ಯಂತ ಹೆಚ್ಚು ಸಂಬಂಧಿಸಿದೆ?

1. ತಲಾ ಆದಾಯ
2. ಬಡತನ
3. ಆರೋಗ್ಯ
4. ಶಿಕ್ಷಣ

ನೀವು ಶಿಕ್ಷಣ ಎಂದು ಊಹಿಸಿದ್ದರೆ ಅದು ಸರಿಯೇ ಆಗಿದೆ. ಸ್ತ್ರೀ ಶಿಕ್ಷಣ ಮತ್ತು ಅದರಿಂದ ಬದಲಾದ ದೃಷ್ಟಿಕೋನದಿಂದಾದ ನೈರ್ಮಲ್ಯ ದೊಡ್ಡ ಗ್ರಾಮಗಳಲ್ಲಿ ಹಾಗೂ ಪಟ್ಟಣಗಳಲ್ಲಿ ಬಹು ಮುಖ್ಯ ವಿಷಯವಾಗಿದೆ. ಹಲವಾರು ರಾಜ್ಯಗಳ ನಡುವೆ ಹೋಲಿಸಿದಾಗ ಶಿಕ್ಷಣ ಮತ್ತು ನೈರ್ಮಲ್ಯಕ್ಕಿರುವ ಸಂಬಂಧ ಸ್ಪಷ್ಟವಾಗುತ್ತದೆ.

ಇದಲ್ಲದೇ ಕೊಳಚೆ ನೀರು ಹಾಗೂ ಕಸ ಪದಾರ್ಥಗಳ ಸಂಗ್ರಹ ಹಾಗೂ ನಿರ್ವಹಣೆಯ ಬಗೆಗೆ ಸ್ಥಳೀಯ ಸಂಸ್ಥೆಗಳು ಕಾರ್ಯ ಪ್ರವೃತ್ತರಾಗಬೇಕು. ಪಟ್ಟಣ ಹಾಗೂ ನಗರಗಳಲ್ಲಿ ಈ ಸಮಸ್ಯೆ ಎದ್ದು ಕಾಣುವುದಲ್ಲದೆ ಮೂಗಿಗೇ ಬಡಿಯುವುದು. ಗ್ರಾಮೀಣ ಪ್ರದೇಶದಲ್ಲೂ ಕಸ ನಿರ್ವಹಣೆ, ಆರೋಗ್ಯ ಹಾಗೂ ಜೀವನ ಮಟ್ಟದ ಮೇಲೆ ಪರಿಣಾಮ ಹೊಂದಿದೆ.





ನಗರ ಪ್ರದೇಶದಲ್ಲಾದರೂ ಕೊಳಚೆ ನಿರ್ವಹಣೆ ಕೆಲವರ ಕೆಲಸ. ಆದರೆ ಗ್ರಾಮಗಳಲ್ಲಿ ಅದು ಯಾರದ್ದು ಅಲ್ಲ.




## ರಚನಾತ್ಮಕ ಹೊಂದಾಣಿಕೆ ನೀತಿ ಮತ್ತು ನೈರ್ಮಲ್ಯ

ಆರ್ಥಿಕ ಸುಧಾರಣೆಗಳಿಗೆ ಸಂಬಂಧಿಸಿದ ಬರಹಗಳಲ್ಲಿ ನೈರ್ಮಲ್ಯದ ಪ್ರಸ್ತಾಪವೇ ಇಲ್ಲ. ಏಕೆಂದರೆ ಇದು ಅವರ ಕಳಕಳಿಯಲ್ಲ. ದೊಡ್ಡ ನಗರಗಳನ್ನು ಹೊರತು ಪಡಿಸಿದರೆ ಈ ಕ್ಷೇತ್ರವನ್ನು ಖಾಸಗೀಕರಣಗೊಳಿಸುವ ಪ್ರಸ್ತಾಪವೂ ಕೂಡ ಇಲ್ಲ. ನೈರ್ಮಲ್ಯದ ಕೊರತೆ ಕೋಟ್ಯಾಂತರ ರೂ.ಗಳ ಸೊಳ್ಳೆ ಓಡುಕ ಉದ್ಯಮಕ್ಕೆ ಅವಕಾಶ ನೀಡಿದೆ.




ಹೀಗಾಗಿ ನೈರ್ಮಲ್ಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನಿರ್ಲಕ್ಷಿಸಲ್ಪಟ್ಟ ಸ್ಥಳೀಯ ಸಂಸ್ಥೆಗಳ ಜವಾಬ್ದಾರಿಯಾಗಿದೆ. ಇದಕ್ಕಾಗಿ ಸಾಕಷ್ಟು ಹಣಕಾಸು ಸಹಾಯವಿಲ್ಲ. ಸರ್ಕಾರದ ಧನಸಹಾಯ ಇನ್ನೂ ಕಡಿತಗೊಳ್ಳುವುದರೊಂದಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಸಂಪನ್ಮೂಲ ಕ್ರೋಢೀಕರಿಸಿಕೊಳ್ಳಬೇಕಾಗುತ್ತದೆ.

## ವಾಸದ ಮನೆ




ಈ ಅಂದಾಜು ರಾಷ್ಟ್ರೀಯ ಗೃಹನೀತಿ ಮಂಡನೆ - 1998ರ ಪ್ರಕಾರವಿದ್ದು 1991ರ ಜನಗಣತಿಯನ್ನು ಆಧರಿಸಿದೆ. ಒಂಬತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಕೊರತೆಯನ್ನು ನೀಗಲು ಅಗತ್ಯವೆಂದು ಅಂದಾಜು ಮಾಡಿದ ಮೊತ್ತ 1,51,000 ಕೋಟಿರೂಗಳು. ಇದರ ಜೊತೆಗೆ ಪ್ರಾರಂಭದ ವರ್ಷಗಳಿಗಾಗಿ ಬೇಕಾಗುವ ಮೊತ್ತ 2,50,000 ಕೋಟಿರೂಗಳು. ಯೋಜನೆಯ ಪ್ರಾರಂಭದ ವರ್ಷಗಳಲ್ಲಿ ಗೃಹ ನಿರ್ಮಾಣದ ವಿಷಯದಲ್ಲಿ ಸರ್ಕಾರ ಹೆಚ್ಚಿನ ಪಾತ್ರ ವಹಿಸುವುದೆಂಬ ಭರವಸೆ ಇತ್ತು. ಆದರೆ ಬಜೆಟ್ಟಿನಲ್ಲಿ ಈ ಕ್ಷೇತ್ರಕ್ಕೆ ಮೀಸಲಿರಿಸಿದ ಮೊತ್ತ ಈ ಭರವಸೆಗೆ ಅನುಗುಣವಾಗಿರಲಿಲ್ಲ.


**ಗೃಹನಿರ್ಮಾಣಕ್ಕೆ ನಿಗದಿಪಡಿಸಿದ ಬಜೆಟ್ ಅಂದಾಜಿನ ಇಳಿಕೆ**

| ಯೋಜನೆ | 2ನೇ ಯೋಜನೆ | 5ನೇ ಯೋಜನೆ | 8ನೇ ಯೋಜನೆ |
|---|---|---|---|
| ಒಟ್ಟು ಬಜೆಟ್‌ನ ಶೇಕಡಾ ಮೊತ್ತ | 25% | 1.5% | 1.47% |

ಗೃಹನಿರ್ಮಾಣದಲ್ಲಿ ಖಾಸಗಿ ಕ್ಷೇತ್ರದ ಹೂಡಿಕೆಯೂ ಅತೃಪ್ತಿಕರ. ಆದರೆ ಸಾರ್ವಜನಿಕ ಕ್ಷೇತ್ರದ ಹೂಡಿಕೆಗಿಂತ ಖಾಸಗಿ ಹೂಡಿಕೆಯ ಪ್ರಮಾಣ ಹೆಚ್ಚಾಗಿರುವುದನ್ನು ಕಾಣಬಹುದು.

| ಯೋಜನೆ | ಸಾರ್ವಜನಿಕ ಕ್ಷೇತ್ರದ ಹೂಡಿಕೆ | ಖಾಸಗಿ ಕ್ಷೇತ್ರದ ಹೂಡಿಕೆ | ಖಾಸಗಿ ಕ್ಷೇತ್ರದ ಹೆಚ್ಚಳ | ಸಾರ್ವಜನಿಕ ಹೂಡಿಕೆ | ಒಟ್ಟು |
|---|---|---|---|---|---|
| II<br>VII | 300<br>25000 | 900<br>29000 | ಸಾರ್ವಜನಿಕ ಕ್ಷೇತ್ರದ ಕೇವಲ ಹತ್ತರಷ್ಟು | 3 ರಷ್ಟು | 19%<br>9% |

Economic and Political Weekly, Social Impact of Reforms, Vol. 35, NO.10, Mar 4-10, pg. 845.




ಇದು ಹಲವಾರು ಕೇಂದ್ರ ಹಾಗೂ ರಾಜ್ಯ ಯೋಜನೆಗಳ ಮೂಲಕ ಆರ್ಥಿಕವಾಗಿ ಹಿಂದುಳಿದವರಿಗೆಂದು ಕೈಗೊಂಡ ಸರ್ಕಾರದ ಬಹು ದೊಡ್ಡ ಯೋಜನೆ ಇಂದಿರಾ ಆವಾಸ್ ಯೋಜನೆ. ರಾಜ್ಯ ಗೃಹನಿರ್ಮಾಣ ಯೋಜನೆಗಳು ಕನಿಷ್ಠ ಸೌಲಭ್ಯ ಯೋಜನೆಯಲ್ಲಿ ಬರುತ್ತವೆ. ಆದರೆ ಈ ಯೋಜನೆಗಳು ಅಗತ್ಯಕ್ಕಿಂತ ತುಂಬಾ ಹಿಂದೆ ಬೀಳುತ್ತವೆ.

ಹಾಗಿದ್ದರೆ ಮಾಡಬೇಕಾದದ್ದೇನು.

ಇದು

ಗ್ರಾಮೀಣ ಗೃಹ ನಿರ್ಮಾಣದ ಮಾರ್ಗ

1. ಗ್ರಾಮೀಣ ಪ್ರದೇಶದಲ್ಲಿ ಭೂಮಿ ಸುಲಭವಾಗಿ ದೊರೆಯುತ್ತದೆ. ಸ್ಥಳೀಯವಾಗಿ ದೊರೆಯುವ ಸಾಮಗ್ರಿಗಳನ್ನು ಬಳಸಿ ಪಾರಂಪರಿಕ ಮಾದರಿಯ ಮನೆಯನ್ನು ಕುಟುಂಬದವರೇ ನಿರ್ಮಾಣ ಮಾಡಬಹುದು. ಕುಟುಂಬದ ಆದಾಯ ಉತ್ತಮಗೊಂಡರೆ ಕುಟುಂಬವೇ ಮನೆಯನ್ನು ಎಲ್ಲಾ ಹವಾಮಾನಕ್ಕೆ ಹೊಂದುವಂತೆ ಉತ್ತಮ ಪಡಿಸಿಕೊಳ್ಳಬಹುದು.






2. ನೆಲ ಮತ್ತು ಆದಾಯ ಮಾರ್ಗವನ್ನು ಹೀಗೆ ನೋಡಬಹುದು

ಎ) ಭೂಮಿಯನ್ನು ದೊರಕಿಸುವುದು

ಬಿ) ಗ್ರಾಮೀಣ ಕುಟುಂಬಗಳಿಗೆ ತಮ್ಮ ಮನೆಗಳನ್ನು ಆಗಾಗ ಉತ್ತಮ ಪಡಿಸಿಕೊಳ್ಳಲು ಸಹಾಯ ಮಾಡುವುದು.

ಸಿ) ಕನಿಷ್ಠ ಆದಾಯ ಹಾಗೂ ವೃತ್ತಿಯನ್ನು ದೊರಕಿಸುವುದು.

ಡಿ) ನ್ಯಾಯಯುತ ಬಡ್ಡಿದರದಲ್ಲಿ ಸಾಲಸೌಲಭ್ಯ.

3. ಒಂದು ಕಾಂಕ್ರೀಟ್ ಮನೆಯ ನಿರ್ಮಾಣ ಆದ್ಯತೆಯಲ್ಲ. ಗ್ರಾಮೀಣ ವಸತಿ ಸೌಲಭ್ಯವನ್ನು ಕಾಂಕ್ರೀಟ್ ಕಟ್ಟಡಗಳಿಗೆ ಸಮೀಕರಿಸಬೇಕಿಲ್ಲ.

## ನಗರ ಪ್ರದೇಶಗಳಲ್ಲಿ ವಸತಿ ಪರಿಸ್ಥಿತಿ




1947ರಲ್ಲಿ ನಮ್ಮ ದೇಶದ ಜನಸಂಖ್ಯೆ 33 ಕೋಟಿ ಇತ್ತು. ಇದರಲ್ಲಿ ಶೇ 14 ರಷ್ಟು ನಗರ ವಾಸಿಗಳಿದ್ದರು. 2001ನೇ ಇಸವಿಗೆ ನಮ್ಮ ದೇಶದ ನಗರಗಳಲ್ಲಿ 33 ಕೋಟಿ ಜನರು ವಾಸಮಾಡುತ್ತಿರುತ್ತಾರೆ. ಅಂದರೆ ಸ್ವಾತ್ರಂತ್ರ್ಯ ಬಂದಾಗ ಇದ್ದ ಒಟ್ಟು ಜನಸಂಖ್ಯೆಯಷ್ಟು 2025ರ ವೇಳೆಗೆ ದೇಶದ ಅರ್ಧಭಾಗ ಜನರು ನಗರಗಳಲ್ಲಿ ವಾಸಮಾಡುತ್ತಿರುತ್ತಾರೆ.


### ಜನಸಂಖ್ಯಾ ವಿತರಣೆ


ಮುಂಬೈ, ಕಲ್ಕತ್ತ, ಮದ್ರಾಸ್, ಬೆಂಗಳೂರು ಮತ್ತು ಹೈದರಾಬಾದ್ ಮೆಗಾ ನಗರಗಳಲ್ಲಿ 40 ಲಕ್ಷಕ್ಕಿಂತ ಹೆಚ್ಚು ಜನರಿದ್ದಾರೆ. ಉಳಿದ ನಗರವಾಸಿಗಳು 40 ಮೆಟ್ರೋ ಪಾಲಿಟನ್ ನಗರಗಳಲ್ಲಿ 300, ದೊಡ್ಡ ಪಟ್ಟಣಗಳಲ್ಲಿ 3396 ಸಣ್ಣ ಪಟ್ಟಣಗಳಲ್ಲಿ ವಾಸಿಸುತ್ತಾರೆ. ರಾಷ್ಟ್ರದ ಜಿಡಿಪಿಯಲ್ಲಿ ಶೇ 600ರಷ್ಟು ನಗರಗಳಿಂದ ಬರುತ್ತದೆ.

(ಆಧಾರ ಸುರೇಶ್ ವಿ. ಅವರ ಭಾಷಣ ಹೊಸ ಸಹಸ್ರ ಮಾನದಲ್ಲಿ ಗ್ರಾಮೀಣ ಮತ್ತು ನಗರಗಳ ಬೆಳವಣಿಗೆಯ ಮಾರ್ಗಸೂಚಿ.)

**ನಗರವಾಸಿಗಳು**

- ⇨ ಶೇ 84 ರಷ್ಟು ಮಂದಿಗೆ ಕುಡಿಯುವ ನೀರಿನ ಸೌಲಭ್ಯವಿದೆ
- ⇨ ಶೇಕಡಾ 46 ಮಂದಿಗೆ ಮಾತ್ರ ಚರಂಡಿ ಮತ್ತು ನೈರ್ಮಲ್ಯ ವ್ಯವಸ್ಥೆ ಲಭ್ಯ.
- ⇨ ಶೇಕಡಾ 31 ಮಂದಿಗೆ ಶೌಚಾಲಯವಿಲ್ಲ.
- ⇨ ಶೇ 28 ಜನಕ್ಕೆ ಕಸದ ನಿರ್ವಹಣೆ ಸೌಲಭ್ಯವಿಲ್ಲ.
- ⇨ ಶೇ 25 ಮಂದಿಗೆ ವಿದ್ಯುಚ್ಛಕ್ತಿ ಸೌಲಭ್ಯವಿಲ್ಲ.







ಸೌಲಭ್ಯಗಳ ಕೊರತೆ ಪೂರ್ಣವಾಗಿ ಕೊಳಚೆ ಪ್ರದೇಶಗಳಿಗೆ ಮೀಸಲು, ಕೊಳಚೆ ಪ್ರದೇಶ ವಾಸಿಗಳ ಸಂಖ್ಯೆ ಕಡಿಮೆಯೇನಿಲ್ಲ.


ಕೊಳಚೆ ಪ್ರದೇಶಗಳಲ್ಲಿ ನಾಗರಿಕ ಸೌಲಭ್ಯಗಳಿಲ್ಲ. ಅತ್ಯಂತ ಹೀನಸ್ಥಿತಿಯ ಮನೆಗಳಿರುತ್ತವೆ. ಅಲ್ಲಿನ ನಿವಾಸಿಗಳಿಗೆ ಮನೆ ಅಥವಾ ನೆಲದ ಮೇಲೆ ಹಕ್ಕಿರುವುದಿಲ್ಲ.

**ಕೊಳಚೆ ಪ್ರದೇಶದ ಮೂರು ಮುಖ್ಯ ಲಕ್ಷಣಗಳು**

1. ಹೆಚ್ಚಿನ ಕೊಳಚೆ ಪ್ರದೇಶಗಳು ಅಕ್ರಮವಾದುದಲ್ಲ. ಅನೇಕ ಕೊಳಚೆ ಪ್ರದೇಶಗಳು ಕಾನೂನಿನ ಮನ್ನಣೆ ಪಡೆದಿದೆ. ಆದರೆ ರಾಜಕೀಯ ಪ್ರಭಾವವಿಲ್ಲದ ಎಷ್ಟೋ ಅನಧಿಕೃತ ಗುಡಿಸಲು ವಾಸಿಗಳ ನೆಲೆಗಳೂ ಇವೆ.




2. ಇಂದು ಮನ್ನಣೆಗೊಳಗಾಗಿರುವ ಕೊಳಚೆ ಪ್ರದೇಶಗಳು ಅನಧಿಕೃತವಾಗಿಯೇ ಆರಂಭವಾಗಿ ದೀರ್ಘ ಹೋರಾಟದ ನಂತರ ಮನ್ನಣೆ ಪಡೆದವು. ಎಷ್ಟೋ ವೇಳೆ ಇದು ಸಾಧ್ಯವಾಗಿದ್ದು ರಾಜಕಾರಣಿಗಳೊಡನೆ ಸಂಧಾನದಿಂದ.
3. ಅತ್ಯಂತ ಹೀನಸ್ಥಿತಿಯಲ್ಲಿರುವ ನೆಲೆಗಳಲ್ಲೂ ಒಂದು ಸಾಮುದಾಯಿಕ ರಚನೆ ಉಂಟಾಗುತ್ತದೆ. ಸಮುದಾಯಗಳು ಅರ್ಥಿಕತೆಯಲ್ಲಿ ಮುಖ್ಯ ಪಾತ್ರ ವಹಿಸುತ್ತಿವೆ. ಈ ಸಮುದಾಯಗಳನ್ನು ಸ್ಥಳಾಂತರಿಸಿದರೂ, ನಗರ ಅವರ ಶ್ರಮವನ್ನು ಅವಲಂಬಿಸುವುದರಿಂದ, ಅವರು ನಗರದ ಉದ್ಯೋಗಗಳನ್ನು ಅವಲಂಬಿಸುವುದರಿಂದ ಕೊಳಚೆ ಪ್ರದೇಶದ ನಿವಾಸಿಗಳು ಮರಳಿ ಬರುತ್ತಾರೆ.





ಇಂತಹ ಧೋರಣೆಯಿಂದಾಗಿ ಕೊಳಚೆ ಪ್ರದೇಶಗಳನ್ನು ನೆಲಸಮಗೊಳಿಸುವ, ಜನರನ್ನು ಒಕ್ಕಲೆಬ್ಬಿಸುವ ಕ್ರಮಗಳು ಜರುಗಿದವು. ನಗರದ ಸೌಂದರ್ಯ, ವಸತಿ ಗುಣಮಟ್ಟ, ಕಾನೂನು ಈ ದೃಷ್ಟಿಗಳಿಂದ ನಿವಾಸಿಗಳನ್ನು ತೆರವು ಮಾಡುವುದೊಂದೇ ಮಾರ್ಗವಾಗಿ ಕಾಣಿಸಿತು. ಅರವತ್ತರಿಂದ ಎಂಭತ್ತರ ದಶಕದಲ್ಲಿ ಇದೇ ಪ್ರಮುಖ ನೀತಿಯಾಗಿತ್ತು. 1982 - 84 ರಲ್ಲಿ ಎಷ್ಟೋ ರಾಜ್ಯಗಳಲ್ಲಿ ಅನಧಿಕೃತ ಕಟ್ಟಡಗಳ ವಿರುದ್ಧ ಜಾರಿಗೆ ಬಂದ ಕಾಯ್ದೆ ಮುಖ್ಯವಾಗಿ ಕೊಳಚೆ ಪ್ರದೇಶ ನಿವಾಸಿಗಳ




ಮೇಲೆ ಬಳಕೆಯಾಯ್ತು. ಅನಧಿಕೃತ ನೆಲೆಯನ್ನು ನಾಗರೀಕ ಅತಿಕ್ರಮ ಎನ್ನುವ ಬದಲು ಅಪರಾಧ ಎಂದು ಪರಿಗಣಿಸಿದ್ದರಿಂದ ಲಕ್ಷಾಂತರ ಮಂದಿ ಅಪರಾಧಿಗಳು ಎನ್ನಿಸಿಕೊಂಡು ಶೋಷಣೆ ಹಾಗೂ ಕಿರುಕುಳಕ್ಕೆ ಒಳಗಾದರು.

**ಸೌಂದರ್ಯೀಕರಣದ ಹಿಂದಿನ ದುರಾಸೆ**

ನಗರಗಳಲ್ಲಿ ಕೆಲವು ಭಾಗಗಳಲ್ಲಿ ವಿಶೇಷ ಸೌಲಭ್ಯಗಳ ಅಭಿವೃದ್ಧಿ ಹಾಗೂ ಸರ್ಕಾರಿ ಮತ್ತು ವಾಣಿಜ್ಯ ಸಂಕೀರ್ಣಗಳ ಸ್ಥಾಪನೆಯಿಂದ ಭೂಮಿಯ ಬೆಲೆ ಅತಿಯಾಗಿ ಮೇಲೇರುತ್ತದೆ.






ನಿವೇಶನ ದಳ್ಳಾಳಿಗಳು ಮತ್ತು ಕಟ್ಟಡ ನಿರ್ಮಾಣ ಮಾಡುವ ಧಣಿಗಳಿಗೆ ಕೊಳಚೆ ಪ್ರದೇಶದ ನಿವಾಸಿಗಳನ್ನು ಒಕ್ಕಲೆಬ್ಬಿಸುವುದು, ರಾಜಕೀಯ ಬೆಂಬಲದಿಂದ ಅವರ ಮನೆಯನ್ನು ನೆಲಸಮಗೊಳಿಸುವುದು ಲಾಭದಾಯಕ ಉದ್ಯಮ. ಮಧ್ಯಮ ವರ್ಗದವರೂ ಸಹ ಕೆಲವೊಮ್ಮೆ ನಗರದ ಕೇಂದ್ರ ಭಾಗಗಳನ್ನು ಬಿಟ್ಟು ದೂರದ ಸೌಲಭ್ಯರಹಿತ ಉಪನಗರಗಳಿಗೆ ವಲಸೆ ಹೋಗಬೇಕಾಗುತ್ತದೆ.

**ಮನೆ ನಿರ್ಮಾಣದ ಮೇಲೆ ರಚನಾತ್ಮಕ ಹೊಂದಾಣಿಕಾ ನೀತಿಯ ಪರಿಣಾಮ**

ಗೃಹ ಸೌಲಭ್ಯದ ರಾಷ್ಟ್ರೀಯ ಪ್ರಚಾರ(National Campaign for Housing Rights)ಎನ್ನುವ ಸಂಸ್ಥೆ ಹೀಗೆ ಹೇಳುತ್ತದೆ. ಎಸ್‌ಎಪಿ (ರಚನಾತ್ಮಕ ಹೊಂದಾಣಿಕಾ ನೀತಿ)ಯಿಂದಾಗಿ ಉಂಟಾಗುವ ನಿರುದ್ಯೋಗದ ಹೆಚ್ಚಳ ಬೆಲೆಗಳ ಏರಿಕೆ, ಖಾಸಗೀಕರಣದಿಂದಾಗಿ ಸರ್ಕಾರ ತನ್ನ ಜವಾಬ್ದಾರಿಗಳಿಂದ ನುಣುಚಿಕೊಳ್ಳುವುದು. ಇವುಗಳಿಂದಾಗಿ ಕೊಳಚೆ ನಿವಾಸಿಗಳ ಬಲವಂತ ಸ್ಥಳಾಂತರ, ಕೊಳಚೆ ಪ್ರದೇಶಗಳ ನೆಲಸಮ ಮಾಡುವುದು ಹೆಚ್ಚುತ್ತದೆ. ಬಡಜನತೆಯನ್ನು ಅಪರಾಧ ಪ್ರವೃತ್ತಿಗಳಿಗೆ ಎಳೆಯುವ ಸಂಧರ್ಭಗಳು ಹೆಚ್ಚುತ್ತವೆ. ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರದ ಧಣಿಗಳು ಕೊಳಚೆ ಪ್ರದೇಶಗಳಿರುವ ಸ್ಥಳಗಳನ್ನು ಲಾಭಗಳಿಕೆ ಮಾರ್ಗವಾಗಿ ನೋಡುತ್ತಾರೆ.

ರಚನಾತ್ಮಕ ಹೊಂದಾಣಿಕಾ ನೀತಿ ಪರಿಸ್ಥಿತಿಯನ್ನು ಹದಗೆಡಿಸುತ್ತದೆ. 1976ರ ಪ್ರಗತಿಪರವಾಗಿದ್ದ ಆಸ್ತಿಮಿತಿ ಕಾಯಿದೆಯನ್ನು ರದ್ದುಗೊಳಿಸಿ ಈಗ ಮಾರುಕಟ್ಟೆ ಶಕ್ತಿಗಳು ಮುಕ್ತವಾಗಿ ಕಾರ್ಯವೆಸಗುವಂತೆ ಮಾಡಲಾಗಿದೆ.

ರಚನಾತ್ಮಕ ಹೊಂದಾಣಿಕಾ ನೀತಿ (ಎಸ್.ಎ.ಪಿ.) ಯ ಷರತ್ತುಗಳು ಹಾಗಿಲ್ಲದಿದ್ದರೂ ಆ ನೀತಿಯೇ ಎಪ್ಪತ್ತರ ಜನಪ್ರಿಯ ಸಮಾಜವಾದದಿಂದ ಸರ್ಕಾರ ಹೊರಬರುವುದನ್ನು ಸೂಚಿಸುತ್ತದೆ. ಈಗ ಸಾಮಾಜಿಕ ಗೃಹನಿರ್ಮಾಣದ ವಿಚಾರ ದೃಷ್ಟಿಕೋನಗಳೆ ಇಲ್ಲವಾಗಿದೆ. ಈಗ ಗೃಹ ನಿರ್ಮಾಣವನ್ನು ಸಾಮಾಜಿಕ ನ್ಯಾಯದ ಒಂದು ಮುಖವಾಗಿ ನೋಡಲಾಗುತ್ತಿಲ್ಲ.

*ಜೈ ಸೇನ್ - ಸಂಚಾಲಕರು*
ರಾಷ್ಟ್ರೀಯ ಮಾನವ ಹಕ್ಕು ಸಮಿತಿ(NCHR)


# ಅಧ್ಯಾಯ -3

# ಯಶಸ್ಸಿನಿಂದ ಕಲಿಯುವಿಕೆ

## ಕೆಲವು ಅಧ್ಯಯನಗಳು

### 1. ಕೇರಳದ ವಿಕೇಂದ್ರಿಕರಣದ ಅನುಭವ

**1996 :** ಕೇರಳದ ರಾಜ್ಯ ಸರ್ಕಾರವು ಒಂದು ಬಹು ಮುಖ್ಯ ರಾಜಕೀಯ ಹಾಗೂ ಆರ್ಥಿಕ ವಿಕೇಂದ್ರೀಕರಣದ ಹೆಜ್ಜೆ ಇಟ್ಟಿತು. ರಾಜ್ಯ ಆಯವ್ಯಯ ಪತ್ರದ ಶೇ. 40ರಷ್ಟು ಹಣವನ್ನು ಪಂಚಾಯಿತಿಗಳಿಗೆ ನೀಡಿತು.





ಈ ಕ್ರಾಂತಿಕಾರೀ ಕ್ರಮದ ಮೂಲಗಳು ಎರಡು.

ಒಂದು ಕಾರಣ ಆಳುವ ಪಕ್ಷದೊಳಗೇ ಇತ್ತು. ಸರ್ಕಾರದ ಆಳ್ವಿಕೆಯ ಮಿತಿ ಆಸ್ತಿ ಅಥವಾ ಆದಾಯ ಹಂಚಿಕೆಯಲ್ಲಿ ಅಥವಾ ಶ್ರೀಮಂತರಿಂದ ಸಂಪನ್ಮೂಲವನ್ನು ಕ್ರೋಢೀಕರಿಸುವುದರಲ್ಲಿ ಕ್ರಾಂತಿಕಾರೀ ಬದಲಾವಣೆ ಸಾಧ್ಯವಿರಲಿಲ್ಲ. ಆದಾಗ್ಯೂ ಸರ್ಕಾರ ಜನತೆಯ ಆಶೋತ್ತರಗಳಿಗೆ ಸ್ಪಂದಿಸಬೇಕಿತ್ತು.

ಎರಡನೆಯ ಕಾರಣ; ವಿಕೇಂದ್ರೀಕರಣ ಪ್ರಜಾಪ್ರಭುತ್ವದ ಒಂದು ಅಂತರ್ಗತ ಮೌಲ್ಯವಾಗಿ ಜನತೆಯ ಪಾಲ್ಗೊಳ್ಳುವಿಕೆ ಹಾಗೂ ಜನಾಧಿಕಾರದ ಸಾಧನವಾಗಿ ಒಂದು ಬೌದ್ಧಿಕ ಬದ್ಧತೆಯಾಗಿ ವಿಕಾಸಗೊಂಡ ತತ್ವ. ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ ನ ಸತತ ಪ್ರಚಾರ ಹಾಗೂ ಕ್ರಿಯಾತ್ಮಕ ಕಾರ್ಯಾಚರಣೆ ಈ ವಿಕೇಂದ್ರಿಕರಣದ ಗುರಿಯನ್ನು ಸಾಕ್ಷಾತ್ಕಾರಗೊಳಿಸಲು ಪ್ರೇರಕ ಶಕ್ತಿಯಾಯಿತು.


### ಪರಣಾಮಕಾರೀ ವಿಕೇಂದ್ರಿಕರಣದ ಅತ್ಯಗತ್ಯ ಅಂಶಗಳು







ಎಷ್ಟೋ ರಾಜ್ಯಗಳಲ್ಲಿ ಸರ್ಕಾರ ಮೂಲ ಸೌಕರ್ಯಗಳ ಪೂರೈಕೆಯನ್ನೇ, ಪಂಚಾಯಿತಿಯ ಮುಖ್ಯವಾದ ಹಾಗೂ ಏಕೈಕ ಕಾರ್ಯವನ್ನಾಗಿ ಕಾಣುತ್ತದೆ. ಆದರೆ ಪಂಚಾಯಿತಿಗಳಿಗೆ ಯೋಜನಾ ಸ್ವಾತಂತ್ರ್ಯವಾಗಲೀ ಹಣಕಾಸಾಗಲೀ ಇರುವುದಿಲ್ಲ. ಕೇರಳದಲ್ಲಿ ಈ ಎರಡೂ ಅಗತ್ಯಗಳನ್ನು ಪಂಚಾಯಿತಿಗೆ ಪೂರೈಸಲಾಯಿತು. ಆದರೆ ಕೇರಳದ ವಿಕೇಂದ್ರೀಕರಣ ಪ್ರಯೋಗ ಈ ಚೌಕಟ್ಟನ್ನು ಮೀರಿ ಆರೋಗ್ಯ ಮತ್ತು ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಬಡತನ ನಿವಾರಣೆ, ಮಹಿಳಾಭಿವೃದ್ಧಿ ಮತ್ತು ಕಲ್ಯಾಣ, ವ್ಯವಸಾಯ, ನೀರಾವರಿ, ಸಣ್ಣ ಮತ್ತು ಗೃಹ ಕೈಗಾರಿಕೆ ಈ ಕ್ಷೇತ್ರಗಳಿಗೆ ವ್ಯಾಪಿಸಿತು. ಈ ಎಲ್ಲಾ ಕ್ಷೇತ್ರಗಳಲ್ಲೂ ವಿಕೇಂದ್ರೀಕರಣ ಹಣಕಾಸಿನ ವಿತರಣೆಯ ಜೊತೆಗೆ, ಸಂಸ್ಥೆಗಳ ವರ್ಗಾವಣೆ, ಸ್ಥಳೀಯ ಸಾಮರ್ಥ್ಯದ ಬೆಳವಣಿಗೆ, ಸ್ಥಳೀಯ ಯೋಜನೆ ಮುಂತಾದ ಲಕ್ಷಣಗಳನ್ನು ಪಡೆದುಕೊಂಡಿತು.

ಹೀಗೆ ಮೊದಲ ಬಾರಿಗೆ ಆರೋಗ್ಯ ಸೇವೆಯನ್ನು ಒಂದು ಅಂತರ ಕ್ಷೇತ್ರೀಯ ರೂಪದಲ್ಲಿ ಯೋಜಿಸಲು ಸಾಧ್ಯವಾಯಿತು.





ಮೊದಲ ವರ್ಷದಲ್ಲಿ ಪಂಚಾಯಿತಿಗಳು ಕೇವಲ ಭಾಗಶಃ ಯಶಸ್ವಿಯಾದವು. ಕಾರಣ ಅವುಗಳು ಹೊಸ ವ್ಯವಸ್ಥೆಯನ್ನು ಕಲಿಯುವುದರೊಂದಿಗೆ ಪಟ್ಟಭದ್ರ ಹಿತಾಸಕ್ತಿಗಳೊಟ್ಟಿಗೆ ಪ್ರತಿ ಹಂತದಲ್ಲೂ ಹೋರಾಡಬೇಕಿತ್ತು. ಆದರೆ ವರ್ಷಗಳು ಕಳೆದಂತೆ ಪರಿಸ್ಥಿತಿ ಸುಧಾರಿಸಿತು. ಐವತ್ತು ವರ್ಷಗಳಿಂದ ಕೇವಲ ಬೇಡಿಕೆಗಳಾಗಿ ಉಳಿದಿದ್ದ ಮೂಲಭೂತ ಸೌಕರ್ಯಗಳು ಈ ವಿಕೇಂದ್ರೀಕರಣ ಪ್ರಯೋಗದ ಮೊದಲ ಕೆಲ ವರ್ಷಗಳಲ್ಲೇ ಈಡೇರುವುದು ಸಾಧ್ಯವಾಯಿತು.



## ಹಣಕಾಸಿನ ವಿನಿಯೋಗ


ರಾಜ್ಯ ಮುಂಗಡ ಪತ್ರದ ಶೇ. 40ರಷ್ಟು ಹಣಕಾಸನ್ನು ಪಂಚಾಯತಿಗಳಿಗೆ ನೀಡುವ ನಿರ್ಧಾರವಾಯಿತು. ಸ್ಥಳೀಯ ಸಂಸ್ಥೆಗಳಿಗೆ ನೀಡಲಾದ ಹಣದ ಮೊತ್ತ 1997-98ರಲ್ಲಿ 1025 ಕೋಟಿ ರೂ. 1998-99ರಲ್ಲಿ 1178 ಕೋಟಿ ರೂ. 1999-2000ದಲ್ಲಿ 1250 ಕೋಟಿ ರೂ.ಸರಾಸರಿಯಾಗಿ ಪ್ರತಿವರ್ಷ ಯೋಜನಾ ಅನುದಾನವಾಗಿ ಪ್ರತಿ ಗ್ರಾಮ ಪಂಚಾಯಿತಿ 60 ಲಕ್ಷ ರೂ, ತಾಲ್ಲೂಕು ಪಂಚಾಯಿತಿ 90 ಲಕ್ಷ ರೂ. ಹಾಗೂ ಜಿಲ್ಲಾ ಪಂಚಾಯಿತಿ ಹತ್ತು ಕೋಟಿ ರೂ ಗಳನ್ನು ಪಡೆಯುತ್ತದೆ. ಪ್ರತಿಯೊಂದು ಪುರಸಭೆ ಒಂದು ಕೋಟಿ ರೂಗಳನ್ನು, ನಗರಸಭೆ ಹದಿನೈದು ಕೋಟಿ ರೂ.ಗಳನ್ನು ಪಡೆಯುತ್ತದೆ. ಸಂಬಂಧಪಟ್ಟ ಸ್ಥಳೀಯ ಸಂಸ್ಥೆ ತನ್ನ ವ್ಯಾಪ್ತಿಯಲ್ಲಿ ಅಗತ್ಯವಾದ ಯೋಜನೆಯನ್ನು ಗುರುತಿಸಿ ಜಾರಿಗೊಳಿಸುವ ಅಧಿಕಾರ ಹೊಂದಿರುತ್ತದೆ.




### ಹಣಕಾಸು ಹಂಚಿಕೆಯ ಮೂಲಾಂಶಗಳು

ಸ್ಥಳೀಯ ಸಂಸ್ಥೆಗಳಿಗೆ ಒಂದು ನಿರ್ದಿಷ್ಟ ಸೂತ್ರದ ಆಧಾರದ ಮೇಲೆ ಹಣಕಾಸನ್ನು ವಿನಿಯೋಗಿಸಲಾಗುತ್ತದೆ. ಸಾಮಾನ್ಯ ಕ್ಷೇತ್ರಗಳ ಅನುದಾನಕ್ಕೆ ಸಂಬಂಧಿಸಿದಂತೆ ಗ್ರಾಮ ನಗರ ವರ್ಗೀಕರಣಕ್ಕೆ ಜನ ಸಂಖ್ಯೆ ಆಧಾರ, ಯೋಜನಾ ಅನುದಾನಕ್ಕೆ ಸಂಬಂಧಿಸಿದಂತೆ (SCP/TSP ಯೋಜನೆಗಳಲ್ಲಿ) ಗ್ರಾಮೀಣ ಜನತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಹಾಗೆಯೇ ವಲಯವಾರು ಮಾರ್ಗದರ್ಶಿ (Sectoral Guidelines) ಇರುತ್ತದೆ. ಸ್ಥಳೀಯ ಅನುದಾನದ ಶೇಕಡಾ 40ರಷ್ಟನ್ನು ಉತ್ಪಾದನಾ ಕ್ಷೇತ್ರದಲ್ಲೂ ಶೇ.30ಕ್ಕೆ ಹೆಚ್ಚಿಲ್ಲದಂತೆ ಮೂಲ ಸೌಲಭ್ಯಕ್ಕೂ ವಿನಿಯೋಗಿಸಬೇಕು. (ಆದರೆ ಅನುದಾನದ SCP ಮತ್ತು TSP ಯ ಅಂಶಕ್ಕೆ ಸಂಬಂಧಿಸಿದಂತೆ ಈ ಮಿತಿ ಇರುವುದಿಲ್ಲ.)

ಅನುದಾನದ ಶೇ. 10ರಷ್ಟನ್ನು ಮಹಿಳಾ ಯೋಜನೆಗಳಿಗೆ ವಿನಿಯೋಗಿಸುವುದು ಕಡ್ಡಾಯ. ಕೇಂದ್ರ ಯೋಜನೆಗಳಿಂದ ಬರುವ ಹಣವನ್ನು ಪಂಚಾಯಿತಿಗಳು ಸಂಪನ್ಮೂಲವೆಂದೇ ಪರಿಗಣಿಸಿ ಸಂಬಂಧಪಟ್ಟ ಕ್ಷೇತ್ರದಲ್ಲಿ ಹೆಚ್ಚಿನ ಸ್ವಾತಂತ್ರ್ಯದೊಂದಿಗೆ ಬಳಸಬಹುದು.








## ಸಂಸ್ಥೆಗಳ ವರ್ಗಾವಣೆ

ವೈದ್ಯಾಧಿಕಾರಿಗಳೂ ಸೇರಿದಂತೆ ಎಲ್ಲಾ ಸರ್ಕಾರಿ ಸಿಬ್ಬಂದಿಯನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗ ಮಾಡಲಾಗಿದೆ. ಈ ಸ್ಥಳೀಯ ಸಂಸ್ಥೆಗಳ ಪರವಾಗಿ ರಾಜ್ಯ ಸರ್ಕಾರ ಸಿಬ್ಬಂದಿ ನೇಮಕ, ವೇತನ ನೀಡಿಕೆ, ಬಡ್ತಿ ಹಾಗೂ ವರ್ಗಾವಣೆಗಳನ್ನು ನೋಡಿಕೊಳ್ಳುತ್ತದೆ. ಸ್ಥಳೀಯ ಸಂಸ್ಥೆಗಳಿಗೆ ಎಲ್ಲಾ ಸರ್ಕಾರಿ ಸಂಸ್ಥೆಗಳ ಆರ್ಥಿಕ ಹಾಗೂ ಆಡಳಿತಾತ್ಮಕ ನಿಯಂತ್ರಣದ ಅಧಿಕಾರವಿರುತ್ತದೆ. ರಾಜ್ಯ ಸರ್ಕಾರವು ಸಂಬಂಧಪಟ್ಟ ಇಲಾಖೆಗಳ ಮೂಲಕ ಸರ್ಕಾರಿ ಸಂಸ್ಥೆಗಳ ಮೇಲೆ ತಾಂತ್ರಿಕ ನಿಯಂತ್ರಣವನ್ನು ಹೊಂದಿರುತ್ತದೆ.

ಆಸ್ಪತ್ರೆಗಳಿಗೆ ಔಷಧಿ ಹಾಗೂ ಉಪಕರಣಗಳನ್ನು ಸರ್ಕಾರವೇ ಕೊಂಡು ಜಿಲ್ಲಾ ವೈದ್ಯಾಧಿಕಾರಿಗಳ ಮೂಲಕ ಸರಬರಾಜು ಮಾಡುತ್ತದೆ.

ಪ್ರತಿ ಇಲಾಖೆಯು ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರೀ ಸಂಸ್ಥೆಗಳ ಯೋಜನಾನುದಾನವನ್ನಲ್ಲದೆ ದೈನಂದಿನ ಕಾರ್ಯನಿರ್ವಹಣೆಗೆ ಅಗತ್ಯವಾದ ಹಣಕಾಸನ್ನು ಒದಗಿಸುತ್ತದೆ. ತುರ್ತು ಪರಿಸ್ಥಿತಿಯಲ್ಲಿ ಸ್ಥಳೀಯ ಸಂಸ್ಥೆಗಳೇ ಆಸ್ಪತ್ರೆಗಳಿಗೆ ಬೇಕಾದ ಔಷಧಗಳನ್ನು ಕೊಳ್ಳಬಹುದು. ವೈದ್ಯರ ಕೊರತೆಯಿದ್ದಾಗ ಸ್ಥಳೀಯ ಸಂಸ್ಥೆಗಳೇ ಗುತ್ತಿಗೆ ಆಧಾರದ ಮೇಲೆ ವೈದ್ಯರುಗಳನ್ನು ನೇಮಕ ಮಾಡಿಕೊಳ್ಳಬಹುದು. ಸರ್ಕಾರ ಅವರ ವೇತನವನ್ನು ಭರಿಸುತ್ತದೆ.





ನಿಜಕ್ಕೂ ! ಅದಕ್ಕೇ ನಮಗೆ ಬೇಕು ......

## ಸಾಮರ್ಥ್ಯದ ಬೆಳವಣಿಗೆ ಹಾಗೂ ಸ್ಥಳೀಯ ಯೋಜನೆ
## ಸ್ಥಳೀಯ ಆದ್ಯತೆಗಳನ್ನು ಗುರುತಿಸುವುದು ಹಾಗೂ ನಿರ್ವಹಿಸುವುದು

ಸ್ಥಳೀಯ ಯೋಜನೆಗಳು ಅಗತ್ಯವಾಗಿದೆ. ದುರ್ಬಲ ವರ್ಗಗಳ ಏಳಿಗೆಗಾಗಿ ಇರುವ ಯೋಜನೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿಸಲು ಈ ಯೋಜನೆಗಳ ಮರು ವಿನ್ಯಾಸ ಮಾಡಬೇಕಾಗಿದೆ. ಸರ್ಕಾರದ ಹೆಚ್ಚು ಯೋಜನೆಗಳು ಅವುಗಳ ರಚನೆಯಲ್ಲೇ ದೋಷಪೂರಿತವಾಗಿರುತ್ತವೆ. ಈ ಯೋಜನೆಗಳು ಸಾಮಾನೀಕೃತ ತಂತ್ರಜ್ಞಾನದ ಬಳಕೆಯೊಂದಿಗೆ ಕೇಂದ್ರೀಕೃತ ಅನುಷ್ಠಾನಕ್ಕಾಗಿ ರೂಪಗೊಂಡಿರುತ್ತವೆ. ಕೆಲವೊಮ್ಮೆ ಕೇವಲ ಪ್ರದರ್ಶನಕ್ಕಿರುವ ಈ ಯೋಜನೆಗಳಿಗೆ ಯಶಸ್ಸಿನ ಸಾಧ್ಯತೆಯಿರುವುದಿಲ್ಲ. ಈ ಯೋಜನೆಗಳನ್ನು ಪುನರ್ ರಚಿಸದೆ ಅಳವಡಿಸಿದರೆ ಅವುಗಳ ಸಾಮರ್ಥ್ಯವನ್ನು ಹೆಚ್ಚಿಸುವುದು ಸಾಧ್ಯವಿಲ್ಲ. ಒಂಬತ್ತನೇ ಯೋಜನೆಗಾಗಿ ನಡೆದ ಜನಾಂದೋಳನ, ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಮುದಾಯಗಳ ಪಾತ್ರದ ಅರಿವನ್ನು ಮೂಡಿಸಿದೆ. ಯೋಜನೆಗೆ ಪೂರ್ವದಲ್ಲಿ ನಡೆದ ವ್ಯಾಪಕ ತರಬೇತಿ ಕಾರ್ಯಕ್ರಮಗಳು ಯೋಜನೆಗಳ ಅನುಷ್ಠಾನಕ್ಕೆ ಅಗತ್ಯವಾದ ಸಾಮರ್ಥ್ಯದ ಬೆಳವಣಿಗೆಗೆ ಸಹಾಯಕವಾದವು. ಸರ್ಕಾರದ ಅಧಿಕಾರಿಗಳು, ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ ಮುಂತಾದ ಸಂಸ್ಥೆಗಳ ಸಹಾಯದೊಂದಿಗೆ ಪಂಚಾಯತಿಗಳು ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತಂದವು. ಈ ಮೊದಲ ಮೂರು ವರ್ಷಗಳಲ್ಲಿ ಬದಲಾವಣೆಯ ದರ ನಿಧಾನವಾಗಿದ್ದರೂ ಸಹ ಹೊಸ ಸಾಮರ್ಥ್ಯದ ಬೆಳವಣಿಗೆ ಸಾಧ್ಯವಾಗಿ ಮುಂಬರುವ ದಿನಗಳಿಗೆ ಆಶಾದಾಯಕವಾಗಿದೆ.

## 2. ಮಿದ್ನಾಪುರ ನೈರ್ಮಲ್ಯ ಯೋಜನೆ

**ಇದು ನಿಮಗೆ ಗೊತ್ತಾ?**
ಮಿದ್ನಾಪುರ ಜಿಲ್ಲೆಯ ನೈರ್ಮಲ್ಯ ಯೋಜನೆಯಡಿ ಯಾವುದೇ ಧನಸಹಾಯವಿಲ್ಲದ ಒಂದೂವರೆ ಲಕ್ಷ ಶೌಚಾಲಯಗಳನ್ನು ವಾಸದ ಮನೆಗಳಲ್ಲಿ ನಿರ್ಮಿಸಲಾಗಿದೆ.




### ಇದನ್ನು ಸಾಧಿಸಿದ್ದು ಹೇಗೆ?

1. ಈ ಯೋಜನೆ ಜಿಲ್ಲಾ ಆಡಳಿತ, ಚುನಾಯಿತ ಪಂಚಾಯ್ತಿ ಹಾಗೂ (ಸರ್ಕಾರೇತರ ಸಂಸ್ಥೆ) ರಾಮಕೃಷ್ಣ ಮಿಷನ್ ಸಹಯೋಗದಲ್ಲಿ ನಡೆಯಿತು.
2. ಈ ಯೋಜನೆ ಮಿದ್ನಾಪುರ ಜಿಲ್ಲೆಯ ಸಂಪೂರ್ಣ ಸಾಕ್ಷರತಾ ಆಂದೋಳನದ ಶೈಕ್ಷಣಿಕ ಹಾಗೂ ಸಾಂಘಿಕ ಪ್ರಯತ್ನದ ಫಲಿತಾಂಶಗಳಲ್ಲೊಂದು.




3. ಈ ಯೋಜನೆ ಶೌಚಾಲಯ ಮಾರುಕಟ್ಟೆ ಪರಿಕಲ್ಪನೆಯನ್ನು ಅಳವಡಿಸಿಕೊಂಡಿತು. ಮಾರುಕಟ್ಟೆಯಿಂದ ಎಲ್ಲಾ ಅಗತ್ಯ ಶೌಚಾಲಯದ ಘಟಕಗಳನ್ನು ಸುಲಭ ಬೆಲೆಯಲ್ಲಿ ಒದಗಿಸಲಾಯಿತು. ಪೂರ್ವರಚಿತ ಘಟಕಗಳ ತಯಾರಿ ಸ್ಥಳೀಯ ಯುವಕರಿಗೆ ಉದ್ಯೋಗಾವಕಾಶವನ್ನು ನಿರ್ಮಿಸಿತು. ಈ ಯುವಕರಿಗೆ ಮೊದಲ ವರ್ಷದಲ್ಲಿ ತರಬೇತಿ ಹಾಗೂ ಆರ್ಥಿಕ ನೆರವು ನೀಡಲಾಯಿತು. ಶೌಚಾಲಯ ನಿರ್ಮಾಣಕ್ಕೆ ತರಬೇತಾದ ಸ್ಥಳೀಯ ಕಟ್ಟಡ ಕಾರ್ಮಿಕರನ್ನು ಬಳಸಿಕೊಳ್ಳಲಾಯಿತು. ಒಟ್ಟು ಸೃಷ್ಟಿಯಾದ ಉದ್ಯೋಗದ ಸಂಖ್ಯೆ ಗಮನಾರ್ಹವಾಗಿತ್ತು. ಉತ್ಪಾದನಾ ಕೇಂದ್ರ, ವ್ಯಾಪಾರ ಕೇಂದ್ರ, ಹಾಗೂ ಕಟ್ಟಡ ನಿರ್ಮಾಣದ ಕೆಲಸಗಳು ಸ್ವತಂತ್ರ ಉದ್ಯಮಗಳಾಗಿ ಕಾರ್ಯನಿರ್ವಹಿಸಿದರೂ ಮೂರು ಘಟಕಗಳ ನಡುವಿನ ಹೊಂದಾಣಿಕೆ ಸಮರ್ಪಕವಾಗಿದ್ದು ಒಂದು ಘಟಕ ಇನ್ನೊಂದು ಘಟಕಕ್ಕೆ ಉದ್ಯೋಗ ಸೃಷ್ಟಿ ಮಾಡಿಕೊಟ್ಟಿತು.
4. ಯಾವುದೇ ಸಹಾಯಧನವಿರಲಿಲ್ಲ.
5. ಶೌಚಾಲಯ ವಿನ್ಯಾಸ ಹಾಗೂ ಬೆಲೆಗಳಲ್ಲಿ ಆಯ್ಕೆಗೆ ಅವಕಾಶ ಇತ್ತು. ಗ್ರಾಹಕರಿಗೆ ಎಂಟು ವಿವಿಧ ವಿನ್ಯಾಸಗಳಿಂದ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿತ್ತು. 600 ರೂ.ಗಳಿಂದ 6,000 ರೂ.ಗಳವರೆಗಿನ ವಿವಿಧ ಗುಣಮಟ್ಟಗಳ ಶೌಚಾಲಯಗಳನ್ನು ನಿರ್ಮಿಸಿಕೊಳ್ಳಬಹುದಿತ್ತು. ಕಟ್ಟಡ ಸಾಮಗ್ರಿ ಅಥವಾ ಶ್ರಮದ ಕೊಡುಗೆಯ ಮೂಲಕ ಗ್ರಾಹಕರು ಶೌಚಾಲಯ ನಿರ್ಮಾಣದ ಖರ್ಚಿನಲ್ಲಿ ಮಿಗಿಸಬಹುದಿತ್ತು.
6. ಎಲ್ಲಾ ಹಂತಗಳಲ್ಲೂ ಪಂಚಾಯಿತಿಗಳನ್ನು ಕ್ರಮಬದ್ಧವಾಗಿ ತೊಡಗಿಸಿಕೊಳ್ಳಲಾಯಿತು.
7. ಇದೇ ಕಾರ್ಯಕ್ರಮಗಳನ್ನು ಇತರ ಜಿಲ್ಲೆಗಳಲ್ಲಿ ಅನುಸರಿಸುವುದು ಸುಲಭವಾಗಿರಲಿಲ್ಲ. ಕಂತಿನ ಪಾವತಿ ಯೋಜನೆ ಮಾಡುವುದಾದರೆ ಸಾಕಷ್ಟು ಬಂಡವಾಳ ಹೂಡಿಕೆ ಅಗತ್ಯವಾಗುತ್ತದೆ.
8. ಇಂತಹ ಯೋಜನೆಯ ಯಶಸ್ಸಿಗೆ ಇದೇ ವೇಳೆ ಬೇರೆ ಯಾವುದೇ ಸಹಾಯ ಧನವನ್ನೊಳಗೊಂಡ ಯೋಜನೆ ಆ ಪ್ರದೇಶದಲ್ಲಿರಬಾರದು.
9. ಸ್ಥಳೀಯ ಉದ್ಯಮಕ್ಕೆ ಸಾಮಗ್ರಿಯ ವಿತರಣೆಯ ಅವಕಾಶದೊಂದಿಗೆ ಸರ್ಕಾರದ ಸಹಕಾರವೂ ಅಗತ್ಯ.

### ಪ್ರಮುಖ ಸಾಧನೆಗಳು

ಈ ಯಶಸ್ಸು ಸ್ಥಳೀಯ ಸಂಸ್ಥೆಗಳ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಸಹಾಯ ಧನ ರಹಿತ ನೈರ್ಮಲ್ಯ ಯೋಜನೆ ಸಾಧ್ಯವೆಂಬುವುದನ್ನು ತೋರಿಸಿಕೊಟ್ಟಿದೆ. ಹಿಂದಿನ ಕಾರ್ಯಕ್ರಮಗಳು ಸಹಾಯ ಧನ ಖರ್ಚಾಗುವುದರೊಂದಿಗೆ ನಿಂತು ಹೋದರೆ ಈ ಯೋಜನೆ ಮುಂದೆಯೂ ವೃದ್ಧಿಸಿತು. ಈ ಯೋಜನೆ ನೂರಾರು ಮಂದಿಗೆ ಉದ್ಯೋಗ ದೊರಕಿಸಿ ಕೊಟ್ಟಿದ್ದಲ್ಲದೆ ಸ್ಥಳೀಯ ಆರ್ಥಿಕತೆಯ ಬೆಳವಣಿಗೆಗೆ ಸಹಕಾರಿಯಾಯಿತು. ಪ್ರಚೋದನೆಯಾಗಿ ಉದ್ಯೋಗವಕಾಶಗಳನ್ನು ಸೃಷ್ಟಿಸಿದುದಲ್ಲದೆ ಜನಗಳ ಜೀವನ ಮಟ್ಟವನ್ನು ಸುಧಾರಿಸಿತು.


## 3. ನಿವೇಶನ ಮತ್ತು ಸೇವಾ ಮಾರ್ಗ

**ಬಿಲಾಸ್‌ಪುರ್ ಆಶಾ ಅಭಿಯಾನ ಮತ್ತು ಇತರ ಕೊಳಚೆ ಪ್ರದೇಶ ಅಭಿವೃದ್ಧಿ ಹಾಗೂ ಪುನರ್ವಸತಿ ಯೋಜನೆಗಳು.**




ಆದಕ್ಕಾಗಿ ಈ ಒಂಭತ್ತು ಹೆಜ್ಜೆಗಳನ್ನು ಅನುಸರಿಸಬೇಕು.

1. ಸ್ತ್ರೀ ಪುರುಷರ ಪ್ರಾತಿನಿಧ್ಯವಿರುವ ಒಂದು ನೊಂದಾಯಿತ ಸಂಘದ ರಚನೆ




2. ನಿಜವಾದ ನಿವಾಸಿಗಳಿಗೆ ಮಾತ್ರ ಹಕ್ಕನ್ನು ನೀಡಬೇಕು. ಬೇನಾಮಿ ವ್ಯಕ್ತಿಗಳಿಗೆ ನೀಡುವ ಹಕ್ಕು ರಾಜಕಾರಣಿಗಳು ಅಪರಾಧಿಗಳೊಂದಿಗೆ ಸಂಪರ್ಕ ಹೊಂದಿರುವ ಕೊಳಚೆ ಪ್ರದೇಶದ ಧಣಿಗಳಿಗೆ ಲಾಭ ಮಾಡಿಕೊಡುತ್ತದೆ.

3. ಹಾಲಿ ವಾಸವಾಗಿರುವ ನಿವಾಸಿಗಳಿಗೆಲ್ಲಾ ಒಟ್ಟು ದೊರೆಯುವ ಭೂಮಿಯನ್ನು ಸರಿಯಾಗಿ ಹಂಚಿಕೆ ಮಾಡಿ ಎಲ್ಲರಿಗೂ ನೀರು, ಚರಂಡಿ, ರಸ್ತೆ ಹಾಗೂ ಕ್ರೀಡಾ ಸ್ಥಳದ ಅವಕಾಶವಾಗುವಂತೆ ನೋಡಿಕೊಳ್ಳಬೇಕು.

4. ನಿವಾಸಿಗಳು ತಮ್ಮ ಖರ್ಚಿನಲ್ಲೇ ಮನೆಯನ್ನು ಕಟ್ಟಿಕೊಳ್ಳಬೇಕು. ಇದಕ್ಕೆ ಬೇಕಾಗುವ ಹಣವನ್ನು ಸಂಘದ ಮೂಲಕ ಸರ್ಕಾರವು ಸಾಲ ರೂಪದಲ್ಲಿ ನೀಡಬಹುದು.

5. ಮನೆಗಳ ವಿನ್ಯಾಸ ಹೊರಗಿನಿಂದ ಹೇರಿದ್ದಾಗದೇ ನಿವಾಸಿಗಳ ಆಯ್ಕೆಯದೇ ಆಗಬೇಕು. ತಜ್ಞರು ಅವರಿಗೆ ಸಹಾಯ ಮಾಡಬಹುದು. (ಮಹಿಳಾ ಮಿಲನ್ ಕಾರ್ಯಕ್ರಮದಲ್ಲಿ ಬೀದಿವಾಸಿ ಮಹಿಳೆಯರೇ ತಮ್ಮ ಮನೆಗಳನ್ನು ವಿನ್ಯಾಸಗೊಳಿಸಿದ್ದನ್ನು ಇಲ್ಲಿ ನೆನೆಯಬಹುದು.)




6. ನಿರ್ಮಾಣದ ಅವಧಿಯಲ್ಲಿ ಕುಟುಂಬಗಳು ಸ್ಥಳಾಂತರಗೊಳ್ಳಬೇಕಾಗುತ್ತದೆ.


7. ನಂತರ ಚರಂಡಿ ನೀರು ಮತ್ತು ವಿದ್ಯುತ್ ವ್ಯವಸ್ಥೆಯನ್ನು ಪುರಸಭೆಗಳು ಕೈಗೆತ್ತಿಕೊಳ್ಳಬೇಕು.

8. ನಿವಾಸಿಗಳು ಪುನಃ ನೆಲಸಿದ ಮೇಲೆ ಶೈಕ್ಷಣಿಕ ಹಾಗೂ ಆರೋಗ್ಯ ಕಾರ್ಯಕ್ರಮಗಳನ್ನು, ಮಕ್ಕಳಿಗಾಗಿ ಹಗಲಿನ ಪಾಲನಾ ಕೇಂದ್ರಗಳನ್ನೂ ನಡೆಸಬೇಕು. ಹೀಗೆ ಹಂತ ಹಂತವಾಗಿ ನಿವಾಸಿಗಳದೇ ಮಾರ್ಗದರ್ಶದಲ್ಲಿ ಅವರು ಸುಭದ್ರ ಹಾಗೂ ಗೌರವಯುತ ಬದುಕನ್ನು ನಡೆಸಲು ಅನುವು ಮಾಡಿಕೊಡಬೇಕು.


ಇವುಗಳಲ್ಲಿ ಅತ್ಯಂತ ಮಹತ್ವದ ಸಂಗತಿಗಳೆಂದರೆ 1. ಸಂಘದ ವ್ಯವಸ್ಥೆ 2. ನಿವಾಸಿಗಳಿಗೆ ಮಾತ್ರ ಭೂಮಿಯ ಹಕ್ಕನ್ನು ನೀಡಿ ಕೊಳಚೆ ಪ್ರದೇಶದ ಧಣಿಗಳನ್ನು ದೂರವಿಡುವುದು. ಈ ಧಣಿಗಳು ತಮ್ಮನ್ನು ದೂರವಿಡುವ ಅಧಿಕಾರಿಗಳನ್ನೇ ವರ್ಗಾವಣೆ ಮಾಡಿಸಿ, ಇಡೀ ಪ್ರಕ್ರಿಯೆಯನ್ನೇ ತಡೆಯುವುದೂ ಸಾಧ್ಯ.



## 4. ಉಂಗ್ರಾ ಮಾದರಿ




ಒಂದು ಸಲ ದಕ್ಷಿಣ ಕರ್ನಾಟಕದ ಉಂಗ್ರ ಎಂಬ ಹಳ್ಳಿಯಲ್ಲಿ ತೀವ್ರವಾದ ಕುಡಿಯುವ ನೀರಿನ ಸರಬರಾಜಿನ ಸಮಸ್ಯೆ ತಲೆದೋರಿತು. ಆಗ ಜನಗಳಿಗೆ ಜೀವನೋಪಾಯವನ್ನು ದೊರಕಿಸಿ, ನೀರಿನ ಸಮಸ್ಯೆಯನ್ನು ಬಗೆಹರಿಸುವ ಒಂದು ಉಪಾಯ ಮಾಡಲಾಯಿತು. ಇದಕ್ಕಾಗಿ ಸೂಕ್ತ ತಂತ್ರಜ್ಞಾನ ಹಾಗೂ ಗ್ರಾಮೀಣ ಸಂಸ್ಥೆಗಳನ್ನು ಬಳಸಿಕೊಳ್ಳಲಾಯಿತು.



ಇದೆಲ್ಲವೂ ಪ್ರಾರಂಭವಾಗಿದ್ದು ಒಂದು ಜೈವಿಕ ಅನಿಲ ಘಟಕದ ರಚನೆಯೊಂದಿಗೆ ರೈತರು ಘಟಕಕ್ಕೆ ಅಗತ್ಯವಾದ ಸಗಣಿಯನ್ನೊದಗಿಸಿದರು. ಪ್ರತಿಯೊಬ್ಬರೂ ಪ್ರತಿ ದಿನ ನೀಡಿದ ಸಗಣಿಯ ಪ್ರಮಾಣವನ್ನು ದಾಖಲಿಸಲಾಯಿತು. ನಂತರ ಜಮೀನಿಗೆ ಗೊಬ್ಬರ ಹಾಕುವ ವೇಳೆಗೆ ಅವರು





ನೀಡಿದ ಸಗಣಿಗೆ ಸರಿ ಪ್ರಮಾಣದ ಆದರೆ ಇನ್ನೂ ಉತ್ಕೃಷ್ಟವಾದ ಗೊಬ್ಬರ (ಜೈವಾನಿಲ ಮಿಶ್ರಣ) ವನ್ನು ಅವರಿಗೆ ನೀಡಲಾಯಿತು. ಉತ್ಪಾದನೆಯಾದ ಜೈವಿಕ ಅನಿಲವನ್ನು ಬಳಸಿ ವಿದ್ಯುತ್ ಉತ್ಪಾದಿಸಿ ಪಂಪುಗಳಿಂದ ಒಂದು ಎತ್ತರದ ಟ್ಯಾಂಕಿಗೆ ನೀರನ್ನು ಹಾಯಿಸಿ ಅಲ್ಲಿಂದ ಕೊಳವೆಗಳ ಮೂಲಕ ಪ್ರತಿ ಮನೆಗೂ ವಿತರಿಸಲಾಯಿತು. ಬೆಳಿಗ್ಗೆ ಒಂದು ಘಂಟೆ ನೀರಿನ ಸರಬರಾಜಿನೊಂದಿಗೆ ರಾತ್ರಿಯ ವೇಳೆ ಮೂರು ಗಂಟೆಯ ಕಾಲ ವಿದ್ಯುಚ್ಛಕ್ತಿಯನ್ನು ಒದಗಿಸಲಾಯಿತು. ಹೆಚ್ಚು ನೀರು ದೊರೆತಾಗ ಎರಡನೇ ಬೆಳಿಗೂ ನೀರು ಒದಗಿಸಲಾಯಿತು.

### ಈ ವ್ಯವಸ್ಥೆಯನ್ನು ನಿರ್ವಹಿಸಿದ್ದು ಯಾರು?

ಬೇರೆ ಯಾರು? ಗ್ರಾಮ ಸಮಿತಿಯೇ. ಇಡೀ ವ್ಯವಸ್ಥೆಯನ್ನು ನೋಡಿಕೊಳ್ಳಲು ಗ್ರಾಮ ಸಮಿತಿ ಒಬ್ಬ ವ್ಯಕ್ತಿಯನ್ನು ನೇಮಿಸಿದ್ದಲ್ಲದೆ ಇತರ ಗ್ರಾಮಗಳಿಗೂ ಮಾರ್ಗದರ್ಶನ ನೀಡಿತು.








## ಆರೋಗ್ಯದ ಮೇಲೆ ಇದರ ಪರಿಣಾಮ

ಸ್ತ್ರೀಯರು ಹೀಗೆ ಸಾಮುದಾಯಿಕ ವ್ಯವಸ್ಥೆಗಳ ಮೂಲಕ ನೀರು, ಮೇವು, ಸೌದೆಗೆ ಪಾಡು ಪಡುವುದರಿಂದ ಮುಕ್ತರಾದರೆ ಅವರ ಹಾಗೂ ಮಕ್ಕಳ ಆರೋಗ್ಯ ತಂಬಾ ಸುಧಾರಿಸುತ್ತದೆ. ಮಕ್ಕಳ ಪಾಲನೆಗೆ ಸಮಯ ಸಿಗುವುದೇ ಅಲ್ಲದೆ ಜೀವ ಹಿಂಡುವ ಅತಿಯಾದ ಶ್ರಮದಿಂದ ಅವರು ಮುಕ್ತರಾಗುತ್ತಾರೆ. ಉಂಗ್ರಾ ಮಾದರಿಯಲ್ಲಿ ನಾವು ಹಿಂದಿನ ಅಧ್ಯಾಯದಲ್ಲಿ ಸೂಚಿಸಿದ ಹಲವಾರು ಪರ್ಯಾಯಗಳನ್ನು ಕಾಣುತ್ತೇವೆ.

## ಮೂಲ ಸೌಲಭ್ಯಗಳಿಗಾಗಿ ಜನತೆಯ ಮೊದಲ ಹೆಜ್ಜೆ (Initiative)

ಮೇಲಿನ ಎಲ್ಲಾ ಅನುಭವಗಳಿಂದ ನಾವು ಗ್ರಹಿಸಬೇಕಾದ ಮುಖ್ಯ ಸಂದೇಶ ಇದು.


ಸರ್ಕಾರವೇ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ನಿರೀಕ್ಷಿಸುವುದರಲ್ಲಿ ಪ್ರಯೋಜನವಿಲ್ಲ. ಸ್ಥಳೀಯ ಸಂಸ್ಥೆಗಳು ಹಾಗೂ ಜನತೆಯ ಸಂಘಟನೆಗಳು ತಮ್ಮ ಅಗತ್ಯಗಳನ್ನು ಗುರುತಿಸಿ, ಯೋಜಿಸಿ, ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಅಗತ್ಯಗಳ ಪೂರೈಕೆಗೆ ಕಾರ್ಯಪ್ರವೃತ್ತವಾಗಬೇಕು. ಈ ದಿಸೆಯಲ್ಲಿ ಅವರು ಸ್ಪಂದನ ಶೀಲರಾದ ಸಾಮಾಜಿಕ ಕಾರ್ಯಕರ್ತರ, ತಜ್ಞರ ಕೌಶಲ್ಯ ಹಾಗೂ ಪರಿಣತಿಯನ್ನು ಬಳಸಿಕೊಳ್ಳಬೇಕು. ಜನತೆಯ ಅಗತ್ಯಗಳ ಯೋಜನೆ ಹಾಗೂ ಅದನ್ನು ಕಾರ್ಯಗತಗೊಳಿಸುವ ಪ್ರಯತ್ನಗಳೇ ಜನಾಂದೋಳನಗಳಾದಾಗ, ಜನತೆಯ ಅಗತ್ಯಗಳೇ ರಾಜಕೀಯ ಪ್ರಕ್ರಿಯೆಯ ಕೇಂದ್ರವಾಗುತ್ತದೆ. ಸಾಮಾಜಿಕ ಪರಿವರ್ತನೆ ಸಾಧ್ಯತೆ ಉತ್ತಮಗೊಳ್ಳುತ್ತದೆ.



## ಅಧ್ಯಾಯ - 4

# ಮೂಲಭೂತ ಶಿಕ್ಷಣ

> **ದೊಡ್ಡ ಹಾಗೂ ಅನಕ್ಷರಸ್ಥ ಜನ ಸಂಖ್ಯೆಯನ್ನುಳ್ಳ ಸಮಾಜಗಳಿಗಿಂತ ಸಾರ್ವತ್ರಿಕ ಶಾಲಾ ಶಿಕ್ಷಣವುಳ್ಳ ಸಮಾಜಗಳು ಹೆಚ್ಚು ಉತ್ತಮವಾದ ಆರೋಗ್ಯ ಸೂಚ್ಯಂಕಗಳನ್ನು ಹೊಂದಿರುತ್ತದೆ.**




ದೊರೆತ ಶಾಲಾ ಶಿಕ್ಷಣದ ಅವಧಿಗೆ ಅನುಗುಣವಾಗಿ ಶಿಶು ಮರಣದ ಪ್ರಮಾಣವೂ ತಗ್ಗುವುದೆಂದು ಹೆಚ್ಚಿನ ಅಧ್ಯಯನಗಳು ತೋರಿಸಿಕೊಟ್ಟಿವೆ. ಶಾಲಾ ಶಿಕ್ಷಣದ ಪ್ರಭಾವವು, ಮಹಿಳೆ ಮತ್ತು ಶಿಶುಆರೋಗ್ಯ ಹಾಗೂ ಫಲವಂತತೆಯ ನಿಯಂತ್ರಣದ ಮೇಲೆ ಹೆಚ್ಚಾಗಿ ಆಗುತ್ತದೆ ಇದು ಪ್ರಾಯಶ: ವಿವಾಹ ಯೋಗ್ಯ ವಯಸ್ಸಿನ ಏರಿಕೆ, ಮತ್ತು ವಿದ್ಯಾವಂತ ಮಹಿಳೆಯರು ತಮ್ಮ ದೇಹದ ವಿಷಯವಾಗಿ ಸ್ವನಿರ್ಧಾರ ತೆಗೆದುಕೊಳ್ಳುವಲ್ಲಿ ಚಲಾಯಿಸಬಲ್ಲ ಹೆಚ್ಚಿನ ನಿಯಂತ್ರಣ ಸಾಮರ್ಥ್ಯದ ಫಲ.

ಶಿಕ್ಷಣದಿಂದಾಗಿ ಮಾಹಿತಿಯು ಸುಸೂತ್ರವಾಗಿ ದೊರೆಯುತ್ತದೆ ಎಂಬ ಕಾರಣಕ್ಕಾಗಿ ಆರೋಗ್ಯದ ಮೇಲೆ ಶಿಕ್ಷಣ ಬೀರುವ ಪ್ರಭಾವ ಕೇವಲ ಆಂಶಿಕವಾದದ್ದು. ಶಾಲಾ ಶಿಕ್ಷಣ ದೊರೆತವರು ರೋಗದ ಹುಟ್ಟು, ಹಾಗೂ ಅದನ್ನು ತಡೆಯುವ ಅಥವಾ ನಿಭಾಯಿಸುವ ಬಗ್ಗೆ ಹೆಚ್ಚು ಮಾಹಿತಿಯನ್ನು ಹೊಂದಿರುತ್ತಾರೆ. ಆದರೆ ಇದು ಸುದೀರ್ಘ ವಿವರಣೆಯ ಸಣ್ಣ ಭಾಗವಷ್ಟೆ. ಶಾಲಾ ಶಿಕ್ಷಣದಿಂದಾಗಿ ವ್ಯಕ್ತಿಯೊಬ್ಬನು ತನ್ನ ಸ್ವಂತ ವಿಷಯವಾಗಿ ಮತ್ತು ಸ್ವಾಭಾವಿಕ ಮತ್ತು ಸಾಮಾಜಿಕ ಪರಿಸರದ ಬಗೆಗೆ ಹೊಂದಿರುವ ಧೋರಣೆಯು ಬದಲಾಗುತ್ತದೆ. ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಬದುಕಿನ ಸ್ವಾಭಾವಿಕ ಕ್ರಮವೆಂದೋ, ಹಣೆಬರಹವೆಂದೋ ಒಪ್ಪಿಕೊಳ್ಳದೆ ಅವುಗಳಿಗೆ ಸ್ಪಂದಿಸುವ ಮತ್ತು ಅನಾರೋಗ್ಯಕ್ಕೆಡೆ ಮಾಡಿಕೊಡುವ



ಸನ್ನಿವೇಶವನ್ನು ಬದಲಾಯಿಸುವ ಸಾಮರ್ಥ್ಯ ಶಾಲಾಶಿಕ್ಷಣದಿಂದ ಹೆಚ್ಚುತ್ತದೆ. ಸುಸೂತ್ರವಾಗಿ ದೊರೆಯುತ್ತದೆ ಎಂಬ ಕಾರಣದಿಂದಾಗಿ ಆರೋಗ್ಯದ ಮೇಲೆ ಶಿಕ್ಷಣ ಬೀರುವ ಪ್ರಭಾವ ಕೇವಲ ಆಂಶಿಕವಾದದ್ದು. ಶಿಕ್ಷಣದಿಂದಾಗಿ ಮಾಹಿತಿಯ ತಿಳುವಳಿಕೆಯು ಶಾಲಾ ಶಿಕ್ಷಣ ಹೊಂದಿದವರು ರೋಗದ (ಮೂಲಕಾರಣ) ಹುಟ್ಟು ಹಾಗೂ ಅದನ್ನು ತಡೆ ಅಥವಾ ನಿಭಾಯಿಸುವ ಮಾಹಿತಿಯನ್ನು ಹೆಚ್ಚಾಗಿ ಹೊಂದಿರುತ್ತಾರೆ. ಶಾಲಾ ಶಿಕ್ಷಣವು ಆರೋಗ್ಯ ಸಂವರ್ಧನೆಯಲ್ಲಿ ಹೇಗೆ ಪ್ರವರ್ತಿಸುತ್ತದೆ ಎಂಬುದನ್ನು ಅಲಕ್ಷಿಸಿದರೂ ಅದು ಆರೋಗ್ಯ ಹೆಚ್ಚಿಸುತ್ತದೆಂಬುದನ್ನು ಅಲ್ಲಗಳೆಯಲಾಗದು. ಅಲ್ಲದೆ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವೆಂಬುದು ಯಾವುದೇ ಆಧುನಿಕ ಸಮಾಜಕ್ಕೆ ಸ್ವತಂತ್ರ ಗುರಿಯಾಗಿದೆ.

## ಶಾಲಾ ಶಿಕ್ಷಣದಲ್ಲಿ ಪ್ರಸ್ತುತ ಬಿಕ್ಕಟ್ಟು


ಕಳೆದ 5 ದಶಕಗಳಲ್ಲಿ ಶಾಲಾಶಿಕ್ಷಣದ ಲಭ್ಯತೆ ಗಣನೀಯವಾಗಿ ಹೆಚ್ಚಿರುವುದು ನಿರ್ವಿವಾದ. ಶಾಲೆಗಳಿಲ್ಲದ ಹಳ್ಳಿಗಳ ಸಂಖ್ಯೆ ಸಾಪೇಕ್ಷವಾಗಿ ಕಡಿಮೆಯೇ. ಆಂದರೆ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಸಾಧನೆಯ ಗುರಿ ಮುಟ್ಟಿದ್ದೇವೆಂದು ಇದರ ಅರ್ಥವಲ್ಲ. ಅಂಥ ಸಾಧನೆಯ ಗುರಿ ನಮ್ಮಿಂದ ಬಹುದೂರದಲ್ಲಿದೆ. ಶಾಲಾ ಶಿಕ್ಷಣದ ಪ್ರಸ್ತುತ ಕೇಂದ್ರೀಯ ಸಮಸ್ಯೆಗಳೆಂದರೆ ಅರ್ಥದಲ್ಲಿ ಶಾಲೆ ತೊರೆಯುವವರ ಮತ್ತು ಕಲಿಕೆಯ ಸಾಧನೆಯ ಸಮಸ್ಯೆಗಳು.

ಭಾರತದಲ್ಲಿ ಶಿಕ್ಷಣದ ವಿಷಯವಾಗಿ ನಡೆಯಬೇಕಾದ ಯಾವುದೇ ಚರ್ಚೆಯು, ಶಾಲಾಶಿಕ್ಷಣದ ಆರಂಭಿಕ ವರ್ಷಗಳಲ್ಲಿ ಓದನ್ನು ನಿಲ್ಲಿಸುವವರ ಪ್ರಮಾಣದ ತೀವ್ರ ಏರಿಕೆ ಎಂಬ ಗಾಬರಿಗೊಳಿಸುವ ಅಂಶವನ್ನು ಎದುರಿಸಬೇಕಾಗಿದೆ. ಎಲ್ಲರಿಗೂ ಮೂಲಭೂತ ಶಿಕ್ಷಣವನ್ನು ಒದಗಿಸುವ ಮಾರ್ಗದಲ್ಲಿ ಶಾಲೆಯನ್ನು ತೊರೆಯದಂತೆ ಮಕ್ಕಳನ್ನು ಉಳಿಸಿಕೊಳ್ಳಬಲ್ಲ ಸಾಮರ್ಥ್ಯವಿಲ್ಲದ ಶಿಕ್ಷಣ ವ್ಯವಸ್ಥೆಯೇ ದೊಡ್ಡ ಅಡಚಣೆಯಾಗಿದೆ. ಪ್ರಾಥಮಿಕ ಶಾಲೆಗೆ ಸೇರಿದ ಎಲ್ಲ ಮಕ್ಕಳೂ ಎಂಟು ವರ್ಷಗಳ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಲು ಮುಂದಾದರೆ ಭಾರತೀಯ ಸಂವಿದಾನದ ಕರ್ತೃಗಳು ಬಯಸಿದಂತೆ ವಾಸ್ತವವಾಗಿ ಮಾಧ್ಯಮಿಕ ಶಾಲೆಗಳಿಗೆ ಅವರೆಲ್ಲರಿಗೂ ಅವಕಾಶ ಮಾಡಿಕೊಡ ಬೇಕಾದ ಗಂಭೀರ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಮಾಧ್ಯಮಿಕ ಶಾಲೆ ಮತ್ತು ಪ್ರೌಢ ಶಾಲೆಗಳ ನಡುವಣ ಪರಿವರ್ತನ ಉತ್ತೇಜಕವಾಗಿದೆ.



ಇದರರ್ಥವೇನೆಂದರೆ ಎಂಟು ವರ್ಷಗಳ ಕಾಲ ಶಾಲಾ ಶಿಕ್ಷಣವನ್ನು ಮುಂದುವರೆಸುವವರು ಶಿಕ್ಷಣವನ್ನು ಮುಂದುವರೆಸುವ ಸಾಧ್ಯತೆ ಹೆಚ್ಚು. ಹೆಚ್ಚಿನ ಮಕ್ಕಳು ಆರಂಭಿಕ ಹಂತಗಳಲ್ಲಿಯೇ ಶಾಲೆಯನ್ನು ತೊರೆಯುತ್ತಾರೆ.


### ಭಾರತದ 100 ಮಕ್ಕಳಲ್ಲಿ




1ನೇ ವರ್ಗಕ್ಕೆ ಸೇರಿದ ಮಕ್ಕಳಲ್ಲಿ 44%ರಷ್ಟು ಮಕ್ಕಳು 5ನೆಯ ವರ್ಗ ತಲಪುವ ಮೊದಲೇ ಶಾಲೆ ಬಿಡುತ್ತಾರೆ ಮೂಲತ: ದಾಖಲಾದವರಲ್ಲಿ ಶೇಕಡಾ 63ರಷ್ಟು ಮಕ್ಕಳು 8ನೆಯ ವರ್ಗವನ್ನು ತಲಪುವುದೇ ಇಲ್ಲ. ಕಳೆದ ಮೂರು ದಶಕಗಳಲ್ಲಿ ಈ ಶಾಲೆ ತೊರೆಯುವವರ ದೊಡ್ಡ ಪ್ರಮಾಣವು ಸ್ಥಿರವಾಗಿದೆ.


ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ವರ್ಷಗಳಲ್ಲಿ ಶಾಲೆ ತೊರೆಯುವವರ ಶೇಕಡಾವಾರು ಪ್ರಮಾಣ


| ವರ್ಷ | 1-5ನೇ ವರ್ಗ | 5-8 ನೇ ವರ್ಗ |
|---|---|---|
| 1960-61 | 64.9 % | 78.3% |
| 1970-71 | 67.0 % | 77.9% |
| 1980-81 | 58.7 % | 72.7% |
| 1990-91 | 44.3 % | 63.4% |




ಆಯ್ದ ಶೈಕ್ಷಣಿಕ ಅಂಕಿ ಸಂಖ್ಯೆಗಳು, ಭಾರತ ಸರ್ಕಾರ 1995-96.








ಕೆಲಸಕ್ಕೆ (ಮುಖ್ಯವಾಗಿ ಸಂಬಳವಿಲ್ಲದ ಮನೆಗೆಲಸಕ್ಕೆ) ಹೆಣ್ಣು ಮಕ್ಕಳ ಸೇರ್ಪಡೆ ಹೆಚ್ಚು ಎಂಬುದನ್ನು ಅಧ್ಯಯನಗಳು ತೋರಿಸಿಕೊಟ್ಟಿವೆ. ತಮಿಳುನಾಡಿನ ಗ್ರಾಮೀಣ ಪ್ರದೇಶದಲ್ಲಿ ನಡೆಸಿದ ಅಧ್ಯಯನವೊಂದು, ಹೆಣ್ಣು ಮಕ್ಕಳು, ಗಂಡುಮಕ್ಕಳು ಕೆಲಸದಲ್ಲಿ ಕಳೆಯುವ ಸಮಯದ ಎರಡು ಪಟ್ಟು ಸಮಯ ಕೆಲಸದಲ್ಲಿ ಕಳೆಯುವರೆಂದು ಸೂಚಿಸಿದೆ. ಉತ್ತರ ಪ್ರದೇಶದ ಬಲಿಯಾದಲ್ಲಿ ನಡೆಸಿದ ಮತ್ತೊಂದು ಅಧ್ಯಯನವು ತೋರಿಸಿಕೊಟ್ಟಂತೆ 10-14 ವರ್ಷ ವಯೋಮಾನದ ಗುಂಪಿನಲ್ಲಿ




15.8% ರಷ್ಟು ಗಂಡುಮಕ್ಕಳೂ ಮತ್ತು 34.7% ರಷ್ಟು ಹೆಣ್ಣು ಮಕ್ಕಳೂ ಸಂಬಳ ರಹಿತ ಮನೆಗೆಲಸದಲ್ಲಿ ತೊಡಗಿದ್ದರೆ, 1.8%ರಷ್ಟು ಗಂಡುಮಕ್ಕಳೂ 1.6ರಷ್ಟು ಹೆಣ್ಣುಮಕ್ಕಳೂ ಸಂಬಳ ಸಹಿತ ಕೆಲಸದಲ್ಲಿ ತೊಡಗಿದ್ದರು. ಆದ್ದರಿಂದ ತೀವ್ರತರವಾದ ಶಾಲಾ ತೊರೆಯುವಿಕೆಯ ಪ್ರಮಾಣವು ಮಕ್ಕಳ ದುಡಿಮೆಯ ಕಾರಣದಿಂದ ಮಾತ್ರವೇ ಅಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.




ಏಕಿಲ್ಲ! ಗಣನೀಯ ಪ್ರಮಾಣದಲ್ಲಿದೆ. ಹೆಚ್ಚಿನ ಅಧ್ಯಯನಗಳು ಸೂಚಿಸುವಂತೆ ಶಿಕ್ಷಣ ವ್ಯವಸ್ಥೆಯ ಬಗ್ಗೆ ಇರುವ ಸಾಮಾನ್ಯ ಅತೃಪ್ತಿ ತಂದೆ ತಾಯಂದಿರನ್ನು ಶಾಲೆಯ ಬದಲು ಕೆಲಸಕ್ಕೆ ಕಳಿಸಲು ಪ್ರೋತ್ಸಾಹಿಸುತ್ತದೆಯೇ ಹೊರತು ಆರ್ಥಿಕ ಅಗತ್ಯವಲ್ಲ. ಅಲ್ಲದೆ ಹಾಲಿ ಶಿಕ್ಷಣದ ಪರಿಸಮಾಪ್ತಿಯು ಉದ್ಯೋಗದ ಸಾಧ್ಯತೆಯನ್ನು ಖಾತ್ರಿಗೊಳಿಸುವುದಾಗಲೀ ಹೆಚ್ಚಿಸುವುದಾಗಲಿ ಇಲ್ಲ ಎಂಬ ಅಭಿಪ್ರಾಯ ವ್ಯಾಪಕವಾಗಿದೆ.

ಎರಡು ಪ್ರಮುಖ ಅಂಶಗಳು ಮಕ್ಕಳ ವಿದ್ಯಾಭ್ಯಾಸದ ನಿಲುಗಡೆಯ ಪ್ರಮಾಣಕ್ಕೆ ತಮ್ಮ (ಕೊಡುಗೆ) ಯೋಗದಾನ ನೀಡುತ್ತವೆ ಎನ್ನಿಸುತ್ತದೆ.



ಒಂದನೇ ಅಂಶ : ಸರ್ಕಾರದ ದಾವೆ ಈ ಸಂಗತಿಗೆ ವಿರುದ್ಧವಾಗಿದ್ದರೂ ಬಡಕುಟುಂಬಗಳು ಸಹ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲು ಪ್ರಾಥಮಿಕ ಹಂತದಲ್ಲಿಯೇ ಹಣ ಖರ್ಚು ಮಾಡಬೇಕಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಶೇಕಡಾ 14.4ರಷ್ಟು ಮತ್ತು ನಗರ ಪ್ರದೇಶಗಳಲ್ಲಿ ಶೇಕಡಾ 49ರಷ್ಟು ವಿದ್ಯಾರ್ಥಿಗಳು ಇತರ ಶುಲ್ಕಗಳು ಮತ್ತು ಶುಲ್ಕೇತರ ವೆಚ್ಚದೊಂದಿಗೆ ಬೋಧನಾ ಶುಲ್ಕವನ್ನು ತೆರುತ್ತಾರೆ. ಒಂದು ಅಧ್ಯಯನ ಸೂಚಿಸುವಂತೆ ವಿದ್ಯಾಭ್ಯಾಸಕ್ಕಾಗಿ ಕುಟುಂಬವೊಂದು ಮಾಡುವ ವಾರ್ಷಿಕ ಖರ್ಚಿನ ವ್ಯಾಪ್ತಿ ಮಹಾರಾಷ್ಟ್ರದಲ್ಲಿ 385 ರೂಪಾಯಿಗಳಾಗಿದ್ದರೆ ಕರ್ನಾಟಕದಲ್ಲಿ 1200 ರೂಪಾಯಿಗಳು. ಹಾಗಾದರೂ ಎಲ್ಲರಿಗೂ 14ವರ್ಷ ವಯಸ್ಸಿನವರೆಗೆ ಉಚಿತ ಶಿಕ್ಷಣ ಒದಗಿಸುವ ಸಂವಿಧಾನದ ಪ್ರಾವಧಾನಕ್ಕೆ ಅರ್ಥವಾದರೂ ಏನು?

ಎರಡನೇ ಅಂಶ : ವಿಧ್ಯಾರ್ಥಿಗಳು ಶಾಲೆ ತೊರೆಯುವ ಪ್ರಮಾಣದ ಮೇಲೆ ಪ್ರಭಾವ ಬೀರುವ ಮತ್ತೊಂದು ಅಂಶವೆಂದರೆ ಶಾಲೆಗಳಲ್ಲಿ ನೀಡಲಾಗುವ ಶಿಕ್ಷಣದ ಗುಣಮಟ್ಟ, ಅಧ್ಯಾಪಕರ ಸೇವಾನಿಯಮಗಳು, ವೇತನೇತರ ವೆಚ್ಚಗಳ ದೀರ್ಘಕಾಲಿಕ ಕೊರತೆ ಮತ್ತು ಸರ್ಕಾರಿ ಶಾಲೆಗಳಲ್ಲಿ ಒದಗಿಸಲಾಗುವ ಸೌಲಭ್ಯಗಳು. 5ನೆಯ ಅಖಿಲ ಭಾರತ ಶೈಕ್ಷಣಿಕ ಸಮೀಕ್ಷೆ ತಿಳಿಸುವಂತೆ

1. ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಕೇವಲ ಶೇಕಡಾ 50 ರಷ್ಟು ಮಾತ್ರ ಪಕ್ಕಾ ಕಟ್ಟಡಗಳನ್ನು ಹೊಂದಿವೆ.
2. ಅವುಗಳಲ್ಲಿ ಶೇಕಡಾ 42ರಷ್ಟು ಶಾಲೆಗಳು ಒಂದೇ ಕೊಠಡಿಯ ವರ್ಗಗಳನ್ನು ಹೊಂದಿದ್ದರೆ. ಅರ್ಧಕ್ಕಿಂತ ಸ್ವಲ್ಪವೇ ಹೆಚ್ಚಿನ ಶಾಲೆಗಳಲ್ಲಿ ಬರೆಯಲಾಗುವಂಥ ಕಪ್ಪು ಹಲಗೆಗಳಿವೆ. ಅರ್ಧಕ್ಕಿಂತಲೂ ಕಡಿಮೆ ಶಾಲೆಗಳಲ್ಲಿ ಕುಡಿಯುವ ನೀರಿನ ಸೌಲಭ್ಯವಿದೆ.
3. ಶಿಕ್ಷಣದಲ್ಲಿ ಲಿಂಗಾಧಾರಿತ ಅಸಮಾನತೆಯು ಮಹಿಳೆಯರ ಕಡಿಮೆ ಸಾಕ್ಷರತಾ ಮಟ್ಟದಲ್ಲಿ ಪ್ರತಿಫಲಿಸಿದೆ. 1991ರ ಗಣತಿಯಂತೆ ಪುರುಷ ಸಾಕ್ಷರತಾ ಪ್ರಮಾಣವು ಶೇಕಡಾ 64.1 ರಷ್ಟಿದ್ದರೆ ಮಹಿಳೆಯರಲ್ಲಿ 39.3 ರಷ್ಟಿತ್ತು. ಪ್ರಾಥಮಿಕ ಹಂತಗಳಲ್ಲಿಯೂ ಹೆಣ್ಣು ಮಕ್ಕಳ ದಾಖಲಾತಿಯು ಇನ್ನೂ ಕಡಿಮೆಯಾಗಿದ್ದು ಈ ಪ್ರವೃತ್ತಿ ಮುಂದುವರೆದಿದೆ. (ಕೆಳಗಿನ ಕೋಷ್ಟಕ ನೋಡಿ)

### ಪ್ರಾಥಮಿಕ ಹಂತದವರೆಗಿನ ದಾಖಲಾತಿ (ಮಿಲಿಯನ್‌ಗಳಲ್ಲಿ)

| ವರ್ಷಗಳು | ಹುಡುಗಿಯರು | ಹುಡುಗರು |
|---|---|---|
| 1990-91 | 40.4 | 57.0 |
| 1991-92 | 42.3 | 59.0 |
| 1992-93 | 44.9 | 60.5 |
| 1993-94 | 46.4 | 61.8 |
| 1994-95 | 46.8 | 62.3 |

### ಪ್ರತಿಭಾ ಪಲಾಯನದ ಅತಿ ನಿಕೃಷ್ಟ ರೂಪದಲ್ಲಿ - ಶಾಲೆಗಳು



ಐದು ವರ್ಷಗಳ ಶಾಲಾ ಶಿಕ್ಷಣದ ನಂತರವೂ ಓದು ಬರಹ ಕಲಿಯದೆ ಸರಳ ಲೆಕ್ಕಾಚಾರವನ್ನೂ ಕಲಿಯದ ವಿದ್ಯಾರ್ಥಿಗಳನ್ನು ವರ್ಣಿಸಲು ಬರುವ ಪದವೆಂದರೆ ಸಾಧನಾಶೂನ್ಯತೆ. ಯಾರೇ ಆದರೂ 8-10 ವರ್ಷಗಳ ಶಿಕ್ಷಣವು ಮಗುವನ್ನು ಕೆಲವು ಮೂಲಭೂತ ನೈಪುಣ್ಯ ಮತ್ತು ತಿಳುವಳಿಕೆಗಳೊಂದಿಗೆ ಸಜ್ಜುಗೊಳಿಸಲು ಸಮರ್ಥರಾಗಿರುವುದೆಂದೇ ನಿರೀಕ್ಷಿಸುತ್ತಾರೆ. ಇದು ಸ್ವಲ್ಪವೂ ಸಾಧನೆಯಾಗದಿದ್ದರೆ ಹಾಲೀ ಶಿಕ್ಷಣದ ಉದ್ದೇಶವೇ ಬುಡಮೇಲಾಗುತ್ತದೆ. ಅನೇಕ ತಂದೆ ತಾಯಂದಿರು ತಮ್ಮ ಮಗುವು ಕಲಿಯಲು ಅಸಮರ್ಥವೆಂದು ಭಾವಿಸಿ ಮಗುವನ್ನು ಶಾಲೆ ಬಿಡಿಸುತ್ತಾರೆ. ಸಾಮಾಜಿಕ ಅಳತೆಗೋಲಿನಿಂದ ಇದು ಸಮಾಜದ ಶ್ರೇಣಿ ವ್ಯವಸ್ಥೆಯನ್ನು ಸಮರ್ಥಿಸುವ ಮತ್ತು ಕಾಯ್ದೆಬದ್ಧವಾಗಿಸುವ ಒಂದು ಪ್ರಕ್ರಿಯೆ.

ನಿಕೃಷ್ಟ ಶೈಕ್ಷಣಿಕ ಗುಣಮಟ್ಟವು ಮೂಲಭೂತವಾಗಿ, ಒದಗಿಸಿದ ಸೌಲಭ್ಯಗಳ ಕೃತ್ಯವಲ್ಲ. ಇದು ಬಹುತೇಕ ವ್ಯವಸ್ಥೆಯಲ್ಲಿ ಬಳಕೆಯಾದ ಶಿಕ್ಷಣ ಶಾಸ್ತ್ರದ ಪರಿಣಾಮವೇ ಆಗಿದೆ. ಪಠ್ಯಕ್ರಮ ಮತ್ತು ಶಾಲಾ (ಪಠ್ಯ) ಸಾಹಿತ್ಯವೂ ಒಂದು ರೀತಿಯ ಸ್ಪಷ್ಟ, ನಗರಪರವಾದ, ಮೇಲ್ವರ್ಗ ಮತ್ತು ಮೇಲ್ಜಾತಿ ಪರವಾದ ಒಲವನ್ನು ಹೊಂದಿವೆ. ವಾಸ್ತವವಾಗಿ ಇಂಥ ಶಿಕ್ಷಣವ್ಯವಸ್ಥೆಯಲ್ಲಿ ವಿದ್ಯೆ ಮುಂದುವರೆಸದ ಮಕ್ಕಳು ಹೆಚ್ಚಾಗಿ ಭೂರಹಿತ ಕೃಷಿ ಕಾರ್ಮಿಕರ ಮತ್ತು ಬಡರೈತರ ಕುಟುಂಬದವರೇ ಆಗಿರುತ್ತಾರೆ.

ಹೆಣ್ಣುಮಕ್ಕಳ ವಿಷಯದಲ್ಲಿ ಅವರು ಶಾಲೆಗೆ ದಾಖಲಾಗದಿರುವುದಕ್ಕೂ ಮತ್ತು ಶಾಲೆಯನ್ನು




ತೊರೆಯುವುದಕ್ಕೂ ಕಾರಣವಾಗುವ ಒಂದು ಅಂಶವೆಂದರೆ ಒಡಹುಟ್ಟಿದವರ ಶುಶ್ರೂಷೆ. ಇದನ್ನು ವಿಶೇಷವಾಗಿ ತಿಳಿಸಬೇಕಾಗಿದೆ. ಏಕೆಂದರೆ ಇಂದ ಸಂದರ್ಭದಲ್ಲಿ ಬಾಲವಾಡಿಗಳ ಮೂಲಕ ಸಮಸ್ಯಾ ನಿವಾರಣೆಗಾಗಿ ಸುಲಭ ಹಾಗೂ ಪರಿಣಾಮಕಾರಿ ಮಧ್ಯಪ್ರವೇಶ ಸಾಧ್ಯ. ಈ ಹಿನ್ನೆಲೆಯಲ್ಲಿ ಸರ್ಕಾರದ ಉದಾರೀಕರಣದ ಕಾರ್ಯಸೂಚಿಯ ಅಂಗವಾಗಿ ರೂಪಿಸಲಾಗುತ್ತಿರುವ ಹೊಸ ಕಾರ್ಯನೀತಿಗಳಿಂದಾಗಿ ಇಡಿಯ ಸಾಮಾಜಿಕ ಕ್ಷೇತ್ರವೇ ಅದರಲ್ಲೂ ಶಿಕ್ಷಣ ಕ್ಷೇತ್ರವು ದುಷ್ಪ್ರಭಾವಕ್ಕೀಡಾಗಿದೆ. ಈ ದುಷ್ಪ್ರಭಾವವು ಶಿಕ್ಷಣಕ್ಕಾಗಿ ಸರ್ಕಾರವು ಹೊಂದಿಸಿರುವ ಹಣದ ಕೊರತೆಯಲ್ಲಿ ವ್ಯಕ್ತವಾಗಿದೆ.



### ಉದಾರೀಕರಣದ ಫಲ




ಇದಕ್ಕೆ ಪ್ರತಿಯಾಗಿ ಪ್ರಭುತ್ವವೂ ಮತ್ತು ಅದರೊಡನೆ ಷರೀಕಾಗಿರುವ (ಕೈಗೂಡಿಸಿರುವ)ಬುದ್ಧಿ ಜೀವಿಗಳೂ ಆರ್ಥಿಕ ಉದಾರೀಕರಣಕ್ಕೂ ಮತ್ತು ಪ್ರಾಥಮಿಕ ಶಿಕ್ಷಣಕ್ಕೂ ನಡುವೆ ಒಂದು ಧನಾತ್ಮಕ (ಇತ್ಯಾತ್ಮಕ) ಸಂಬಂಧವನ್ನು ಚಿತ್ರಿಸುತ್ತಾರೆ.




(ಜಾಗತಿಕ ಜ್ಞಾನಯುದ್ಧಗಳ ಸಂದರ್ಭದಲ್ಲಿ) ನಮ್ಮ ರಾಷ್ಟ್ರೀಯ ಕಾರ್ಯನೀತಿಗೆ ಸಲಹೆ ಮಾಡಲ್ಪಟ್ಟ ಈ ನವ ಉದಾರವಾದಿ ಹಾದಿ ಏನೆಂದರೆ, ಪೈಪೋಟಿಗಳಿದ ಶಾಲಾ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಮಾರುಕಟ್ಟೆಯಲ್ಲಿ, ತಾಯ್ತಂದೆಯರ ಆಯ್ಕೆಯನ್ನು ನಿಯಂತ್ರಿಸುವ ಪ್ರಕ್ರಿಯೆಯನ್ನು ಆಧಾರವಾಗಿ ಹೊಂದಿರುವ ಮತ್ತು ಬಲಶಾಲಿಗಳು ಬದುಕುತ್ತಾರೆ ಎಂಬ ಪ್ರವೇಶಿಕೆ (approach), ಮೂಲಭೂತ ಶಿಕ್ಷಣಕ್ಕೆ ಬೇಕಾದ ನಿಧಿಯು ಅಗತ್ಯವಾಗಿ ಪ್ರಭುತ್ವದಿಂದಲೆ ದೊರೆಯಬೇಕಾದ್ದರಿಂದ ಶಾಲೆಗಳು ಪೈಪೋಟಿ ನಡೆಸುವಂಥ ಅರೆ ಮಾರುಕಟ್ಟೆಯನ್ನು ಸೃಷ್ಟಿಸುವುದೇ ಅದರ ಉದ್ದೇಶ. ಭಾರತದಂಥ ಬಡರಾಷ್ಟ್ರಗಳಲ್ಲಿ ಕೇವಲ ಕನಿಷ್ಠ ಲಭ್ಯತೆ ಇರುವಂತೆ, ಶಾಲಾ ಶಿಕ್ಷಣದ ಕಲ್ಪನೆಯನ್ನು ತೆಳುವಾಗಿಸಿ ಸರ್ಕಾರಿ ಖರ್ಚನ್ನು ಗಣನೀಯವಾಗಿ ತಗ್ಗಿಸುವುದೇ ಮುಖ್ಯ ಗುರಿ.




ಪರಿಣಾಮಗಳು

ಸಾಮಾಜಿಕ ವರ್ಗ ಮತ್ತು ಸಂಪನ್ಮೂಲಗಳಿಗೆ ಮಾತ್ರ ಸಂಬಂಧಿಸಿದಂತೆ ಶಾಲಾವ್ಯವಸ್ಥೆಯು ಇನ್ನೂ ಧ್ರುವೀಕೃತವಾಗುತ್ತಿದೆ.

ಮೂಲಭೂತ ಶಿಕ್ಷಣವನ್ನು ಬಾಹ್ಯ ಸಹಾಯಕ್ಕೆ ತೆರೆದಿಟ್ಟಿದ್ದು. 1998ರಲ್ಲಿ ಭಾರತವು ತನ್ನ ಸ್ಥೂಲ ದೇಶೀಯ ಉತ್ಪನ್ನದ ಶೇಕಡಾ 3ರಷ್ಟನ್ನು ಶಿಕ್ಷಣಕ್ಕಾಗಿ ಖರ್ಚು ಮಾಡುತ್ತಿತ್ತು. 1968ರ ಕೊಠಾರಿ ಆಯೋಗದ ವರದಿಯು ಕನಿಷ್ಠ ತನ್ನ ಸ್ಥೂಲ ದೇಶೀಯ ಉತ್ಪನ್ನದ ಶೇಕಡಾ 6 ರಷ್ಟನ್ನಾದರೂ ಶಿಕ್ಷಣಕ್ಕಾಗಿ ವ್ಯಯ ಮಾಡಬೇಕೆಂದು ಶಿಫಾರಸ್ಸು ಮಾಡಿದ್ದರೂ ಭಾರತದ ಪ್ರಭುತ್ವವು ಮತ್ತೆ ಮತ್ತೆ ಅದನ್ನು ದೃಢೀಕರಿಸಿದರೂ ವಾಸ್ತವ ಸ್ಥಿತಿ ಹೀಗಿದೆ.

1992ರಷ್ಟು ಇತ್ತೀಚೆಗೆ, ಉದಾರೀಕರಣ ಪ್ರಕ್ರಿಯೆಯ ಪ್ರಾರಂಭದ ಸಮಕಾಲದಲ್ಲಿಯೇ ನವದೆಹಲಿಯಲ್ಲಿ ನಡೆದ ಒಂಭತ್ತು ರಾಷ್ಟ್ರಗಳ ಶಿಕ್ಷಣ ಶೃಂಗಸಭೆಯಲ್ಲಿ 2000 ಇಸವಿಯ ಹೊತ್ತಿಗೆ ಶಿಕ್ಷಣಕ್ಕಾಗಿ ನಿಗದಿಪಡಿಸಲಾದ ಮೊತ್ತದ ಬಡತಿಯ ಹೆಚ್ಚಳವು ಶೇಕಡಾ 6ರ ಅಂಕಿಯನ್ನು ತಲುಪಲಿದೆಯೆಂಬ ದೃಢನಿರ್ಧಾರವನ್ನು ಒತ್ತು ಕೊಟ್ಟು ಮತ್ತೆ ಮತ್ತೆ ಹೇಳಲಾಯಿತು.

ಆದರೆ ಇನ್ನೂ ಕೇವಲ 3% ರಷ್ಟನ್ನು ವ್ಯಯಿಸಲಾಗುತ್ತಿದೆ.





ಕೇಂದ್ರ ಸರ್ಕಾರವು 1992ರಲ್ಲಿ ಈ ಹಣವನ್ನು ತೆಗೆದುಕೊಂಡು ವಿವಾದಾತ್ಮಕ DPEP ಕಾರ್ಯಕ್ರಮವನ್ನು ಸ್ಥಾಪಿಸಿತು. ಈ ನಿಧಿಯು ಪ್ರಾಥಮಿಕ ಶಿಕ್ಷಣದ ಒಟ್ಟು ವೆಚ್ಚದ 4-5% ರಷ್ಟಿದ್ದರೂ ಅದು ಮೂಲಭೂತ ಶಿಕ್ಷಣಕ್ಕಾಗಿ ಕಾರ್ಯಸೂಚಿಯನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಯಜಮಾನಿಕೆಯಲ್ಲಿ ತೊಡಗಿದೆ.




ಉದಾರೀಕರಣದ ಪ್ರಕ್ರಿಯೆ ಪ್ರಾರಂಭವಾದಾಗಿನಿಂದ ಭಾರತೀಯ ಪ್ರಭುತ್ವದ ಕಾರ್ಯನೀತಿ ಅಥವಾ ಧೋರಣೆಯನ್ನು ಅಂತರಾಷ್ಟ್ರೀಯ ಹಣಕಾಸು ನಿಧಿಯ / ಜಾಗತಿಕ ಬ್ಯಾಂಕಿನ ಷರತ್ತುಗಳು ಸ್ಪಷ್ಟವಾಗಿ ಮೂಲೆಗುಂಪು ಮಾಡಿವೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಹಾಯ ಮಾಡುವ ಸಲುವಾಗಿ ತನ್ನ ಸಾಂವಿಧಾನಿಕ ಮತ್ತು ಇತರ ಕರ್ತವ್ಯಗಳನ್ನು ಪೂರೈಸುವಲ್ಲಿ ಸರ್ಕಾರಕ್ಕಿರಬೇಕಾದ ಧೃಡಸಂಕಲ್ಪದಲ್ಲಿ ಶೋಚನೀಯ ಅಭಾವವಿದೆ. ಆದರೆ, ಜನರನ್ನು ಮರುಳು ಮಾಡುವ ವಾಕ್ಚಾತುರ್ಯ ಪ್ರದರ್ಶನ ತಡೆಯಿಲ್ಲದೆ ನಡೆದಿದೆ.




ಇದು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಧೃಡಸಂಕಲ್ಪದ ಅಭಾವವಿರುವುದನ್ನು ಸಾಬೀತು ಮಾಡುತ್ತದೆ. ಈ ಮಸೂದೆಯ ಕರಡು ವಿವಾದಾಸ್ಪದವಾಗಿದ್ದರೂ, ಒಬ್ಬ ಭಾರತೀಯ ಪ್ರಜೆಗೆ ಶಿಕ್ಷಣದ ಹಕ್ಕನ್ನು ನೀಡಲಿದ್ದು, ಪ್ರಾಥಮಿಕ ಹಂತದ ಶಿಕ್ಷಣಕ್ಕೆ ಸರ್ಕಾರ ಬದ್ಧವಾಗಿರುತ್ತದೆ. ಅದರ ವೈಫಲ್ಯಕ್ಕೆ ಸರ್ಕಾರವೇ ಕಾನೂನು ಬದ್ಧ ಹೊಣೆಗಾರವಾಗಲಿದೆ.





1960ರ ಹೊತ್ತಿಗೆ ಈ ಗುರಿಯನ್ನು ಸಾಧಿಸಬೇಕೆಂದು ಪ್ರಭುತ್ವಕ್ಕೆ ಆದೇಶ ನೀಡಲಾಯಿತು. ಆದರೆ 40 ವರ್ಷಗಳ ನಂತರ ಹತ್ತಿರ ಹತ್ತಿರ 50% ರಷ್ಟು (10 ಕೋಟಿ), 6-14 ವರ್ಷಗಳ ವಯೋಮಾನದ ಮಕ್ಕಳು ಇನ್ನೂ ಶಾಲೆಯಿಂದ ಹೊರಗುಳಿದಿದ್ದಾರೆ.

1997ರ ಸಂಯುಕ್ತ ರಂಗ ಸರ್ಕಾರದ ಅವಧಿಯಲ್ಲಿ ಸಿದ್ಧವಾದ ಈ ಮಸೂದೆಯನ್ನು ಮಂತ್ರಿಮಂಡಲವು ಪತನವಾಗುವುದಕ್ಕೂ ಮೊದಲೆ ಮಂಡಿಸಲಾಗಲಿಲ್ಲ. ಈ ಮಸೂದೆಯ ಜೊತೆಗೆ 9ನೇ ಯೋಜನಾವಧಿಯಲ್ಲಿ ಶಿಕ್ಷಣಕ್ಕಾಗಿ ರೂ. 40,000 ಕೋಟಿಯನ್ನು ಕಾಯ್ದಿರಿಸುವ ಆರ್ಥಿಕ ವಾಗ್ದಾನವು ಇತ್ತು. 8ನೆಯ ಯೋಜನೆಯು ಕೇವಲ 20,000 ಕೋಟಿ ರೂ.ಗಳನ್ನು ನಿಗದಿಪಡಿಸಿತ್ತು. ಅಂಥ ಆರ್ಥಿಕ ವಚನಬದ್ಧತೆಯನ್ನುಳ್ಳ ಮಸೂದೆಯ ಅನುಮೋದನೆಯು ಮೂಲಭೂತ ಶಿಕ್ಷಣದೆಡೆಗೆ ಸರ್ಕಾರದ ವಚನಬದ್ಧತೆಯ ಮುಖ್ಯ ಹೆಗ್ಗುರುತಾಗಿತ್ತು. ನಂತರ ಬಂದ ಮಂತ್ರಿಮಂಡಲಗಳು ಔಪಚಾರಿಕವಾಗಿ. ಉದ್ದಿಷ್ಟ ನಿಧಿಗೆ ವಚನಬದ್ಧರಾಗಲು ತಮ್ಮ ಅಸಾಮರ್ಥ್ಯ ಸೂಚಿಸುತ್ತಾ ಸದ್ದುಗದ್ದಲವಿಲ್ಲದೆ ಮಸೂದೆಯನ್ನು ಕೈಬಿಟ್ಟಿವೆ.

## ಕಾರ್ಯನೀತಿಯ ಶಿಫಾರಸ್ಸುಗಳು

ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಪ್ರತಿಷ್ಠಾಪಿಸುವುದು ಅದರ ಸಾಧನೆಗೆ ಅಗತ್ಯವಾದ ಎಲ್ಲ ಶಾಸನೀಯ ಆಡಳಿತಾತ್ಮಕ ಮತ್ತು ಹಣಕಾಸಿನ ಕೆಲಸಗಳ ಹೊಣೆ ಹೊತ್ತುಕೊಳ್ಳುವುದು.

ಇದರ ಅರ್ಥವೆಂದರೆ



ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡುವುದು

ಎಳೆವಯಸ್ಸಿನವರ ದುಡಿಮೆಯನ್ನು ನಿರ್ಮೂಲನ ಮಾಡುವುದು

ಇದರ ಮುಂದುವರೆದ ಅರ್ಥವೆಂದರೆ:

1. ಒಳ್ಳೆಯ ಗುಣಮಟ್ಟದ ಶಾಲೆಯ ಎಲ್ಲ ಕಡೆ ಲಭ್ಯತೆ.
2. ಬಡವರಿಗೂ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲು ಅನುಕೂಲವಾಗುವಂಥ ಮಧ್ಯಾಹ್ನ ಊಟದ ಯೋಜನೆ ಮತ್ತು ಉಚಿತ ಪಠ್ಯಪುಸ್ತಕಗಳ ಹಂಚಿಕೆಯೇ ಮೊದಲಾದ ಸಾಮಾಜಿಕ ಸುಭದ್ರತೆಯ ಯೋಜನೆಗಳ ಅನುಷ್ಠಾನ.
3. ಬಾಲ್ಯಕಾಲದ ಶಿಕ್ಷಣದ ಲಭ್ಯತೆ ಮತ್ತು ನಿಯಂತ್ರಣ, ಅದನ್ನು ಶಿಕ್ಷಣದ ಅವಿಭಾಜ್ಯ ಅಂಗವೆಂಬ ಮನ್ನಣೆ, ಕಲಿಕೆಯ ಕಲಿಕೆ, ಶಾಲಾ ಸಿದ್ಧತೆ ಮತ್ತು ಶಾಲೆ ತೊರೆಯದೆ ಮುಂದುವರೆಸುವುದು.




ಇಂಥ ತಿಳುವಳಿಕೆಯ ಭಾವೀ ರಾಜಕೀಯ ಹೊಳಹಂದರ

ಇರುವ ನಿಧಿಗೆ ತಕ್ಕಂತೆ ಶಿಕ್ಷಣವನ್ನು ಯೋಜಿಸದೆ, ಅಂಥ ಶಿಕ್ಷಣವನ್ನು ಒದಗಿಸಲು ಅಗತ್ಯವಾದ ನಿಧಿಯನ್ನು ಹೊಂದಿಸುವ ಉದ್ದೇಶದಿಂದ ಆರ್ಥಿಕ ನಿರ್ವಹಣೆಯನ್ನು ಯೋಜಿಸುವುದು.



## ಮೂಲಭೂತ ಶಿಕ್ಷಣಕ್ಕಾಗಿ ಜನತೆಯ ಮೊದಲ ಹೆಜ್ಜೆ

ಹಲವಾರು ವರ್ಷಗಳಿಂದ ಪ್ರಜಾಪ್ರಭುತ್ವ ನೆಲೆಯಲ್ಲಿ ನಡೆಯುತ್ತಿರುವ ಚಳುವಳಿಗಳು, ಕಾರ್ಯನೀತಿಯ ಶಿಫಾರಸ್ಸುಗಳನ್ನು, ಆಗಬೇಕಾದ ಕೆಲಸಗಳ ಪಟ್ಟಿಯಲ್ಲಿ ಉಳಿಯುವಂತೆ ಮಾಡಿವೆ. ಶಾಲಾ ಶಿಕ್ಷಣದ ವಿಸ್ತರಣೆ ಬಹುತೇಕ ಇಂಥ ಚಳುವಳಿಗಳ ಪರಿಣಾಮಗಳಾಗಿವೆ. ಈ ಕೆಲಸವನ್ನು ಉಳಿಸಿಕೊಂಡು ಬಲಪಡಿಸಬೇಕಾಗಿದೆ.

ಆದರೆ ಶಾಲಾ ಶಿಕ್ಷಣದ ಮುಖ್ಯ ಬಿಕ್ಕಟ್ಟುಗಳಾದ- ಶಿಕ್ಷಣದ ಗುಣಮಟ್ಟ ಮತ್ತು ಶಾಲೆಯನ್ನು ತೊರೆಯುವುದು - ಇವುಗಳ ಬಗ್ಗೆ ಕಾರ್ಯಪ್ರವೃತ್ತರಾಗಲು ಬೇರೆ ರೀತಿಯ ಜನೋಪಕ್ರಮದ ತುರ್ತು ಅಗತ್ಯವಿದೆ. ಸ್ವಲ್ಪ ವಿವರವಾಗಿಯೇ ಅಧ್ಯಯನ ಮಾಡಬೇಕಾದ ಉದಾಹರಣೆಗಳಿವೆ. ಆಂಧ್ರಪ್ರದೇಶ, ರಂಗಾರೆಡ್ಡಿ ಜಿಲ್ಲೆಯ ಎಂ.ವಿ. ಫೌಂಡೇಷನ್ ಮತ್ತು ಮಧ್ಯಪ್ರದೇಶದ ಏಕಲವ್ಯ ಇವೆರಡೂ ಜನೋಪಕ್ರಮಗಳ ಕೆಲಸದ ಉದಾಹರಣೆಗಳು. ಹೊಸ ರೀತಿಯ ಸರ್ಕಾರೀ ಯೋಜನೆಯಾದ ಲೋಕ್ ಜುಂಬಿಶ್‌ನಂತಹವು ಇತರ ಉದಾಹರಣೆಗಳು. ಬಿಜಿವಿಎಸ್. ಸಂಚಾಲಿತ ಜೀವನ್ ಶಾಲಾ ಯೋಜನೆಯು ಇನ್ನೂ ಶೈಶವಾವಸ್ಥೆಯಲ್ಲಿದೆ. ಈ ನಿಟ್ಟಿನಲ್ಲಿ ಕೆವಿಎಸ್‌ಎಸ್‌ಪಿ ಮತ್ತು ಟಿವಿಎಸ್‌ಎಫ್‌ಗಳೂ ಗಣನೀಯ ಕೆಲಸ ಮಾಡಿವೆ.

ಈ ಜನೋಪಕ್ರಮಗಳ ಕೆಲವು ಮುಖ್ಯ ಕಾರ್ಯದಿಶೆ ಮತ್ತು ಕಾರ್ಯಲಕ್ಷಣಗಳೆಂದರೆ:


1. ಶಿಕ್ಷಕರಿಗೆ ತರಬೇತಿಯನ್ನು ನೀಡುವುದೇ ಮುಖ್ಯ ಕಾರ್ಯಕ್ಷೇತ್ರವಾದ ಶಿಕ್ಷಣಶಾಸ್ತ್ರದ ಪುನಾರಚನೆಯತ್ತ ಗಮನವನ್ನು ಕೇಂದ್ರೀಕರಿಸುವುದು. ಈ ಪ್ರಕ್ರಿಯೆಯು ಹೆಚ್ಚು ನವ್ಯವಾದ, ಪ್ರಸ್ತುತವಾದ ಮತ್ತು ಸಾಂಸ್ಕೃತಿಕವಾಗಿ ಯೋಗ್ಯವಾದ ಪಠ್ಯಕ್ರಮವನ್ನು ರೂಪಿಸುವ ಜವಾಬ್ದಾರಿಯನ್ನೂ ಒಳಗೊಂಡಿರುತ್ತದೆ. ಈ ಮಧ್ಯಪ್ರವೇಶದ ಉಪಸಿದ್ಧಾಂತವೆಂದರೆ ಶಿಕ್ಷಣಶಾಸ್ತ್ರದ ನೀತಿಗೆ ಪರಿಚಿತರಾದ ಅಧ್ಯಾಪಕರ ಜಾಲವೊಂದನ್ನು ಸೃಷ್ಟಿಸಿ ಅವರು ಪರ್ಯಾಯ ಶಿಕ್ಷಣಶಾಸ್ತ್ರವನ್ನು ತಯಾರಿಸಿ ಬಳಸುವಂತೆ ಮಾಡುವುದು.
2. ಶಾಲೆ ಮತ್ತು ಅದರ ಬಿಕ್ಕಟ್ಟನ್ನು ಅರ್ಥಮಾಡಿಕೊಳ್ಳುವಲ್ಲಿ ವಿವಿಧ ಸಮುದಾಯಗಳು ಒಳಗೊಳ್ಳುವಂತೆ ಮಾಡುವುದು. ಸ್ಥಳೀಯ ಶಾಲೆಯನ್ನು ಅವರೇ ವಹಿಸಿಕೊಳ್ಳಲು, ಅದಕ್ಕಾಗಿ ತಮ್ಮ ಕೊಡುಗೆಯನ್ನು ನೀಡಲು, ಮತ್ತು ದಾಖಲಾತಿಯಲ್ಲಿ, ಮಕ್ಕಳು ಶಾಲೆ ಬಿಡದಂತೆ ಉಳಿಸಿಕೊಳ್ಳುವಲ್ಲಿ ಹಾಗೂ ಮಕ್ಕಳು ಅಪೇಕ್ಷಿತ ಸಾಧನೆಯನ್ನು ಸಾಧಿಸುವಂತೆ ಮಾಡುವಲ್ಲಿ. ಶಾಲೆಯು ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡಲು ಸಹಕರಿಸುವುದು.

ಇವೆರಡೂ ನಿಟ್ಟಿನಲ್ಲಿ ಪರಿಗಣಿಸಬೇಕಾದ ಒಂದು ಮುಖ್ಯ ಅಂಶವೆಂದರೆ:

ರಾಜಕೀಯ ಹಾಗೂ ಆಡಳಿತಾತ್ಮಕ ವ್ಯವಸ್ಥೆಯು ವಿಶಾಲ ಕಾರ್ಯಕ್ಷೇತ್ರದಲ್ಲಿ ಮೇಲ್ಕಾಣಿಸಿದ ಬದಲಾವಣೆಯನ್ನು ಜಾರಿಗೊಳಿಸುವಂತೆ ಮಾಡಬಲ್ಲ ಉತ್ತಮ ಪರ್ಯಾಯಗಳನ್ನು ನೀಡಬಲ್ಲ, ಮಾದರಿಗಳನ್ನು ಸೃಷ್ಟಿಸಬಲ್ಲ ಕಾರಣಕ್ಕಾಗಿ ನಾವು ಈ ದಿಕ್ಕುಗಳತ್ತ ನೋಡುತ್ತಿದ್ದೇವೆಯೇ?

ಅಥವಾ

ದೇಶದಾದ್ಯಂತ ನಡೆಯುವ ಜನಾಂದೋಲನಗಳ ಬೃಹತ್ ಪುನಾರಾವರ್ತನೆಯೇ ಅಂತಹ ಶೈಕ್ಷಣಿಕ ಬದಲಾವಣೆಯನ್ನುಂಟು ಮಾಡಬಲ್ಲಂಥ ಮುಖ್ಯ ನಮೂನೆ ಎಂಬ ದೃಷ್ಟಿಕೋನ ನಮ್ಮಲ್ಲಿದೆಯೇ? ಈ ಎರಡನೆ ಸಾಧ್ಯತೆಯನ್ನು ಕಲ್ಪಿಸಿಕೊಂಡಾಗ, ಈ ಪ್ರಕ್ರಿಯೆಯ ಪರವಾಗಿ ರೂಪುಗೊಂಡ ಜನಾಭಿಪ್ರಾಯದ ಭಾಗವೆಂದು ಭಾವಿಸಿ ಪ್ರಭುತ್ವವು ಇಂಥ ಜನಾಂದೋಲನಗಳ ಜೊತೆಗೆ ಸಹಕರಿಸುವ ಮನೋಬಲ ಬೆಳೆಸಿಕೊಳ್ಳುತ್ತದೆ ಎಂಬುದು ಊಹಿಸಬಹುದಾದ ಸಂಗತಿ.



# ರಂಗಾರೆಡ್ಡಿ ಜಿಲ್ಲಾ ಬಾಲಶ್ರಮ ನಿಷೇಧ ಮತ್ತು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ

## ಒಂದು ವಸ್ತುಸ್ಥಿತಿಯ ಅಧ್ಯಯನ

ಆಂಧ್ರ ಪ್ರದೇಶ ರಂಗಾರೆಡ್ಡಿ ಜಿಲ್ಲೆಯ 500 ಹಳ್ಳಿಗಳ ಒಂದು ಲಕ್ಷ ಮಕ್ಕಳನ್ನು ಕೆಲಸ ಬಿಡಿಸಿ ಶಾಲೆಗಳಿಗೆ ದಾಖಲು ಮಾಡಲಾಗಿದೆ. ಆ ಮಕ್ಕಳೊಂದಿಗೆ ಕೆಲಸ ಮಾಡುವ ಎಂ.ವಿ. ಫೌಂಡೇಷನ್‌ಗೆ ಇದಕ್ಕಾಗಿ ಕೃತಜ್ಞತೆ ಸಲ್ಲಬೇಕು.

ಆಂಧ್ರ ಪ್ರದೇಶದ ತೆಲಂಗಾಣಾ ಪ್ರಾಂತ್ಯದಲ್ಲಿರುವ ರಂಗಾರೆಡ್ಡಿ ಜಿಲ್ಲೆ ಹೈದರಾಬಾದ್‌ನಿಂದ ಸ್ವಲ್ಪ ದೂರದಲ್ಲಿದೆ. ಇದು ದೇಶದಲ್ಲೇ ಅತಿ ಹಿಂದುಳಿದ ಜಿಲ್ಲೆಗಳಲ್ಲಿ ಒಂದು. ಅಂಥ ಹೆಚ್ಚಿನ ಜಿಲ್ಲೆಗಳಲ್ಲಿರುವಂತೆ ಈ ಜಿಲ್ಲೆಯಲ್ಲೂ ಹೆಚ್ಚಿನ ಮಕ್ಕಳು ಶಾಲೆಯಿಂದ ವಂಚಿತರಾಗಿದ್ದರು. ಅಂಥವರಲ್ಲಿ 90% ಮಕ್ಕಳು ಕೃಷಿವಲಯದಲ್ಲಿ ದನ ಕಾಯುವವರಾಗಿಯೂ, ತೋಟ ಕಾಯುವವರಾಗಿಯೂ, ಮನೆಗೆಲಸ ಮಾಡುವವರಾಗಿಯೂ ಇದ್ದರು. ಹುಡುಗರಲ್ಲಿ ಹೆಚ್ಚಿನವರು ಜೀತದಾಳುಗಳಾಗಿ ದುಡಿಯುತ್ತಿದ್ದರು. 10% ಮಕ್ಕಳು ನಗರದ ಕೊಳೆಗೇರಿಗಳಲ್ಲಿದ್ದು ಬಿಸ್ಕತ್ ಕಾರ್ಖಾನೆಗಳಲ್ಲಿ, ಪ್ಲಾಸ್ಟಿಕ್ ಮತ್ತು ಬಣ್ಣ ತಯಾರಿಸುವ ಕಾರ್ಖಾನೆಗಳಲ್ಲಿ ದುಡಿಯುತ್ತಾರೆ.


ಮುಖ್ಯವಾಗಿ ಸಮುದಾಯದ ಉಪಕ್ರಮವನ್ನೇ ಅವಲಂಬಿಸಿ ಎಂ.ವಿ.ಎಫ್. ಕಾರ್ಯಕ್ರಮವು ಮಕ್ಕಳ ಪ್ರಗತಿಯ ಮಾಧ್ಯಮವಾಗಿ ಸಾಂಪ್ರದಾಯಿಕ ಶಾಲೆಯನ್ನೇ ಬಳಸಿಕೊಳ್ಳಬೇಕೆಂದು ಮಕ್ಕಳನ್ನೂ, ತಂದೆ-ತಾಯಂದಿರನ್ನೂ ಪ್ರೇರೇಪಿಸಿತು. ಶಾಲೆಯಿಂದ ಹೊರಗಿರುವ ಪ್ರತಿಯೊಬ್ಬ ಬಾಲಕನೂ ದುಡಿಯುವ ಬಾಲಕನೇ ಎಂಬ ತತ್ವವನ್ನು ಆಧರಿಸಿ ಈ ಕಾರ್ಯಕ್ರಮವು ವಿವಿಧ ರೀತಿಯ ಮಕ್ಕಳ ದುಡಿಮೆಗಳಲ್ಲಿ ಭೇದವೆಣಿಸುವುದಿಲ್ಲ. ಈ ಕಾರ್ಯಕ್ರಮದ ಒಂದಂಶದ ಕಾರ್ಯಸೂಚಿ ಎಂದರೆ ಎಲ್ಲ ಮಕ್ಕಳೂ ಶಾಲೆಗೆ ಹೋಗುವಂತೆ, ಯಾವುದೇ ಮಗುವೂ ಕೆಲಸಕ್ಕೆ ಹೋಗದಂತೆ ನೋಡಿಕೊಳ್ಳುವುದು.

**ಇದಕ್ಕೆ ಬಳಸಲಾದ ಕಾರ್ಯನೀತಿ** (ಮುಖ್ಯವಾಗಿ ವಯೋಮಾನದ ಗುಂಪು ಮತ್ತು ಲಿಂಗಾಧಾರಿತ)

9-14 ವರ್ಷ ವಯೋಮಾನದ ಗುಂಪಿನ ದೊಡ್ಡ ಮಕ್ಕಳು ಸೇತುಬಂಧ ಕಾರ್ಯಕ್ರಮದಡಿ ಬರುವಂತೆ ಮಾಡಲಾಗುತ್ತದೆ. ಈ ಕಾರ್ಯಕ್ರಮವು ತಮಗಾಗಲೇ ತಿಳಿದ ವಿಷಯವನ್ನು ಬಳಸಿಕೊಂಡು ಮಾಮೂಲಿನಂತೆ ಶಾಲೆಗೆ ಹೋಗುವ ತಮ್ಮದೇ ವಯಸ್ಸಿನ ಮಕ್ಕಳ ಜ್ಞಾನದ ಮಟ್ಟ ತಲುಪಲು ಈ ಮಕ್ಕಳಿಗೆ ಸಹಾಯ ಮಾಡುತ್ತದೆ.

6-8 ವರ್ಷ ವಯೋಮಾನದ ಗುಂಪಿನ ಮಕ್ಕಳನ್ನೂ ನೇರವಾಗಿ ಶಾಲೆಗೆ ಸೇರಿಸಲಾಗುತ್ತದೆ. ಎಲ್ಲ ವಿಷಯದಲ್ಲಿಯೂ ಪರಿಣಾಮ ಮತ್ತು ಯಶಸ್ಸಿನ ಬಗ್ಗೆ ವಿವರವಾದ ಅನುಗಾಮಿ ಕಾರ್ಯಕ್ರಮ ಇರುತ್ತದೆ. ಇದರಿಂದ ಶಾಲೆ ಬಿಡುವವರ ಸಂಖ್ಯೆ ಕನಿಷ್ಠವಾಗಿರುತ್ತದೆ. ಹೆಣ್ಣುಮಕ್ಕಳ ವಿಷಯದಲ್ಲಿ ಕಾರ್ಯಕ್ರಮದ ಪ್ರವೇಶಿಕೆ ಸ್ಥೂಲವಾಗಿ ಮೇಲಿನಂತೆಯೇ ಇದ್ದರೂ ಹೆಚ್ಚು ತೀವ್ರವಾಗಿರುತ್ತದೆ.


ಹಲವಾರು ವರ್ಷಗಳ ಅವಧಿಯಲ್ಲಿ ಈ ಕಾರ್ಯಕ್ರಮವು ಸ್ಥಳೀಯ ಸಮುದಾಯದ ಹೆಚ್ಚು ಹೆಚ್ಚು ಭಾಗಗಳನ್ನು ಒಳಗೊಂಡಿದೆ. ಪ್ರಸ್ತುತ ಇದು ತಂದೆತಾಯಂದಿರು ಮತ್ತು ಮಕ್ಕಳನ್ನಲ್ಲದೆ, ಆಯ್ದ ಪ್ರತಿನಿಧಿಗಳು, ವಿವಿಧ ಸಂಸ್ಥೆಗಳ ಒಡೆಯರನ್ನಲ್ಲದೆ ಸರ್ಕಾರಿ ಶಾಲೆಗಳ ಅಧ್ಯಾಪಕರನ್ನೂ ಒಳಗೊಂಡಿದೆ.







## ಎಂ.ವಿ.ಎಫ್.ನ ಸಾಧನೆಗಳು

- ಈ ಕಾರ್ಯಕ್ರಮ ಜಿಲ್ಲೆಯ 2000 ಹಳ್ಳಿಗಳಲ್ಲಿ ಜಾರಿಯಲ್ಲಿದೆ.
- 160 ಹಳ್ಳಿಗಳು ಮಕ್ಕಳ ದುಡಿಮೆಯಿಂದ ಮುಕ್ತವಾಗಿದೆ. 400 ಹಳ್ಳಿಗಳಲ್ಲಿ 11 ವರ್ಷ ವಯಸ್ಸಿಗಿಂತ ಕಿರಿಯರಾದ ಎಲ್ಲಾ ಮಕ್ಕಳೂ ಸಾಂಪ್ರದಾಯಿಕ ಶಾಲೆಗಳಲ್ಲಿದ್ದಾರೆ.
- 4000ಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಜೀತದಾಳುಗಳನ್ನು ಬಿಡುಗಡೆ ಮಾಡಲಾಗಿದೆ.
- 10,000 ಕ್ಕೂ ಮಿಕ್ಕಿನ ಯುವಕರು ಈ ಕಾರ್ಯಕ್ರಮದಲ್ಲಿ ಸ್ವಯಂಸೇವಕರಾಗಿ ಭಾಗವಹಿಸುತ್ತಿದ್ದಾರೆ.




## ಸೇತುಬಂಧ ಶಿಕ್ಷಣ

ಈ ಕಾರ್ಯಕ್ರಮ ಎಂ.ವಿ.ಎಫ್‌ನ ಕಾರ್ಯನೀತಿಗೆ ಕೇಂದ್ರವೆನಿಸಿದೆ. ಜೀತದಾಳುಗಳಂತೆ ಕೆಲಸ ಮಾಡುತ್ತಿದ್ದ ಮಕ್ಕಳನ್ನು ಕೆಲಸದಿಂದ ಬಿಡಿಸಿದಾಗ ಅವರಿಗಾಗಿ, ವಿಶೇಷ ತರಬೇತಿ ಪಡೆದ ಯುವಕರು ನಡೆಸುವ, 2-3 ತಿಂಗಳು ಅವಧಿಯ ವಸತಿ ಶಿಬಿರದ ಏರ್ಪಾಡಾಗಿರುತ್ತದೆ. ಇಲ್ಲಿ ಅವರಿಗೆ ಹೊಸರೀತಿಯ ಸೇತುಬಂಧ ಶಿಕ್ಷಣ ನೀಡಲಾಗುತ್ತದೆ. ಹೆಚ್ಚಿನ ಮಕ್ಕಳು ಈ ಅವಧಿಯ ನಂತರ ಮಾಮೂಲಿ ಶಾಲೆಗಳ 4ನೇ ಅಥವಾ 5ನೇಯ ವರ್ಗ ಸೇರುತ್ತಾರೆ. ಈ ಮಕ್ಕಳು 9 ರಿಂದ 12 ವರ್ಷ ವಯೋಮಾನದ ಗುಂಪಿನಲ್ಲಿರುತ್ತಾರೆ. 6 ರಿಂದ 8 ವರ್ಷಗಳ ಗುಂಪಿನ ಮಕ್ಕಳನ್ನೂ ಸೇತುಬಂಧ ಶಿಕ್ಷಣವಿಲ್ಲದೆಯೇ ಶಾಲೆಗೆ ಮತ್ತೆ ದಾಖಲು ಮಾಡಬಹುದು. ಏಕೆಂದರೆ, ಮಕ್ಕಳ ವಯಸ್ಸಿನ ಅಂತರ ಹೆಚ್ಚಿರುವುದಿಲ್ಲ.




ಅಲ್ಲದೆ ಅಧ್ಯಾಪಕರಿಗೂ ಅಂಥ ತರಗತಿಗಳನ್ನು ನಡೆಸುವುದು ಕಷ್ಟ. ದಿನವಿಡಿಯ ಚಾಕರಿಯ ನಂತರ ಸಂಜೆ ಎಂ.ವಿ.ಎಫ್ ಕೇಂದ್ರದಲ್ಲಿ ಕುಳಿತು, ಕೆಲಸ ಮಾಡುವ ಮಕ್ಕಳಿಗೆ ಬೋಧಿಸಲು ಪ್ರಯತ್ನ ಮಾಡುವುದು ಯಾರೂ ಇಷ್ಟಪಡುವ ಆಯ್ಕೆಯಲ್ಲ. ಆದ್ದರಿಂದಲೇ ಸೇತುಬಂಧ ಶಿಕ್ಷಣದ ಮೂಲಕ ಮಗುವಿನ ತಿಳುವಳಿಕೆ ಹೆಚ್ಚಿಸಿ ಅದನ್ನು ಸಾಂಪ್ರದಾಯಿಕ ಶಾಲೆಗೆ ಸೇರಿಸುವುದೇ ದಾರಿ.

3 ತಿಂಗಳ ಸೇತುಬಂಧ ಶಿಕ್ಷಣದ ನಂತರ 12-14 ವರ್ಷ ವಯೋಮಾನದ ಮಕ್ಕಳನ್ನು 5ನೇ ತರಗತಿಗೆ ಸೇರಿಸಬಹುದು. ಆದರೆ 12 ರಿಂದ 15 ತಿಂಗಳ ಕಾಲ ವಸತಿ ಶಿಬಿರದಲ್ಲಿದ್ದು ನಂತರ ಏಳನೆಯ ತರಗತಿ ಸೇರಿ ನೇರವಾಗಿ ಪಬ್ಲಿಕ್ ಪರೀಕ್ಷೆ ಎದುರಿಸುವುದಕ್ಕೇ ಹೆಚ್ಚಿನ ಒಲವು.





ಇದಕ್ಕೆ ಕೆಲವು ತಿಂಗಳ ಕಾಲ ಅನೌಪಚಾರಿಕ ಶಿಕ್ಷಣ (NFE) ಕೇಂದ್ರದ ಕಾರ್ಯಕ್ರಮದ ರೂಪದಲ್ಲಿ ನೆರವೂ ದೊರೆಯಿತು. ಆದರೆ ಎನ್.ಎಫ್.ಇ. ಕೇಂದ್ರಗಳಲ್ಲಿ ಕಲಿಕೆಯನ್ನು ಪ್ರೇರೇಪಿಸುವಂಥ ಆಟ ಮತ್ತು ಹಾಡುಗಳಿಗೆ ಒತ್ತು ನೀಡಲಾಗುತ್ತದೆ. ಇದರಿಂದಾಗಿ ಕೆಲವು ತಿಂಗಳ ನಂತರ ಸೇತುಬಂಧ ಶಿಕ್ಷಣ ಪಡೆದು ನಂತರ ಶಾಲೆಗೆ ಹೋಗಲು ಸಹಾಯವಾಗುತ್ತದೆ.

## ಸರ್ಕಾರಿ ಶಾಲೆಯ ಅಧ್ಯಾಪಕರು

ಅಂಥ ಸಾವಿರಾರು ಮಕ್ಕಳು ಸರ್ಕಾರಿ ಶಾಲೆಗೆ ಸೇರುವದರೊಂದಿಗೆ ಕಾಲಕ್ರಮೇಣ ಸರ್ಕಾರಿ ಶಾಲೆಗಳ ಅಧ್ಯಾಪಕರೂ ಇಂಥ ಶಿಬಿರಗಳಲ್ಲಿ ನಡೆಯುವ, ಕಲಿಸುವ ಮತ್ತು ಕಲಿಯುವ ಪ್ರಕ್ರಿಯೆಯಲ್ಲಿ ಆಸಕ್ತಿ ತಾಳತೊಡಗಿದರು. ಇದರ ಪರಿಣಾಮವಾಗಿ ಸಾಂಪ್ರದಾಯಿಕ ಶಾಲೆಗಳಲ್ಲೇ ಹಿರಿಯ ಮಕ್ಕಳಿಗಾಗಿ ಸೇತುಬಂಧ ಶಿಕ್ಷಣ ಜಾರಿಗೆ ಬಂದಿದೆ. ಜೊತೆಜೊತೆಗೆ ಸರ್ಕಾರಿ ಶಾಲೆಗಳ ಅಧ್ಯಾಪಕರಿಗೆ ಈ ರೀತಿಯಲ್ಲಿ, ಶಾಲೆಯ ಹೊರಗಿರುವ ಮಕ್ಕಳನ್ನೂ ಸೇರಿಸಿಕೊಳ್ಳುವ ಸಲುವಾಗಿ ವಿಸ್ತೃತ ಕಾರ್ಯಕ್ಷೇತ್ರ ದೊರೆತಿದೆ. ಮಕ್ಕಳ ದುಡಿಮೆಯನ್ನು ನಿಷೇಧಿಸುವ, ಕೆಲಸ ಮಾಡಲು ಉದ್ದೇಶ ಹೊಂದಿರುವ, 1300 ಅಧ್ಯಾಪಕರ ಸದಸ್ಯತ್ವ ಹೊಂದಿರುವ ಒಂದು ವೇದಿಕೆಯೂ ರೂಪುಗೊಂಡಿದೆ. ಮಕ್ಕಳನ್ನು ಶಾಲೆಗೆ ದಾಖಲಿಸುವ ಮತ್ತು ಶಾಲೆಯಲ್ಲಿ ಮಕ್ಕಳನ್ನು ಉಳಿಸಿಕೊಳ್ಳುವ ಉದ್ದೇಶದಿಂದ ನವೀನ ಕಲಿಕೆಯ ವಿಧಾನವನ್ನು ಪರಿಚಯಿಸುವ ಕೆಲಸದಲ್ಲಿ ಅಧ್ಯಾಪಕರ ಸಕ್ರಿಯ ಭಾಗವಹಿಸುವಿಕೆ ಶಿಕ್ಷಕರ ಆತ್ಮಾಭಿಮಾನವನ್ನು ಹೆಚ್ಚಿಸಿರುವುದಲ್ಲದೆ ಅವರಿಗೆ ನೈಜ ಅಧಿಕಾರ ನೀಡಿದೆ. ಸುಸಂಘಟಿತವಾದ, ಆಧಾರಭೂತವಾದ ಸಮುದಾಯ ಜೊತೆಗೆ ತಾತ್ಕಾಲಿಕವಾಗಿ ಹೆಚ್ಚುವ ವಿದ್ಯಾರ್ಥಿ ಸಂಖ್ಯೆಯನ್ನು ನಿಭಾಯಿಸುವ ಸಲುವಾಗಿ ಹೆಚ್ಚುವರಿ, ತಾತ್ಕಾಲಿಕ ಶಿಕ್ಷಕರ ಸ್ಥಳೀಯ ನೇಮಕಾತಿ ಇವೆಲ್ಲಾ ಸೇರಿ ಈಗ ಸರ್ಕಾರಿ ಶಾಲೆಗಳು ತಮ್ಮ ಕರ್ತವ್ಯನಿರ್ವಹಣೆಗೆ ಸಮರ್ಥವಾಗಿರುವುದನ್ನು ಖಾತ್ರಿಪಡಿಸಿವೆ.

## ತಾಯಿ-ತಂದೆಯರು

ಈ ಕಾರ್ಯಕ್ರಮವು, ಅತ್ಯಂತ ಕಡುಬಡವರೂ ಸಹ ತಮ್ಮ ಮಕ್ಕಳನ್ನು ಸುಶಿಕ್ಷಿತರನ್ನಾಗಿ ಮಾಡುವ ತೀವ್ರ ಅಭಿಲಾಷೆ ಹೊಂದಿರುತ್ತಾರೆಂಬ ಸತ್ಯವನ್ನು ತೋರಿಸಿಕೊಟ್ಟಿದೆ.




ಹೆಚ್ಚಿನ ಕುಟುಂಬಗಳಲ್ಲಿ ಮಕ್ಕಳ ಗಳಿಕೆ ನಿಂತರೆ ಅದೊಂದು ದೊಡ್ಡ ಆರ್ಥಿಕ ಹೊರೆಯಾಗುವುದಿಲ್ಲ. ಹಾಗಾದ ಸಂದರ್ಭದಲ್ಲಿಯೂ ಸಾಮಾನ್ಯವಾಗಿ ತಂದೆ-ತಾಯಂದಿರು ಹೆಚ್ಚಿನ ತ್ಯಾಗಕ್ಕೆ ಸಿದ್ಧರಾಗಿಯೇ ಇರುತ್ತಾರೆ. ಮಕ್ಕಳನ್ನು ಶಾಲೆಗೆ ಸೇರಿಸಿದ ನಂತರ ಕುಟುಂಬದ ಆರ್ಥಿಕ ಆಧಾರವಾದ ದನಕರುಗಳನ್ನು ಮಾರಿರುವ ದೃಷ್ಟಾಂತಗಳೂ ಕೆಲವಿವೆ.

ತಂದೆ-ತಾಯಂದಿರು ಇದನ್ನು ಮೊದಲೇ ಏಕೆ ಮಾಡಿರಲಿಲ್ಲ?

ಈ ಕಾರ್ಯಕ್ರಮವು ತಂದೆ-ತಾಯಂದಿರಿಗೆ ತಮ್ಮ ಮಕ್ಕಳು ಕಲಿಯಬಲ್ಲರೆಂದು ತೋರಿಸಿಕೊಟ್ಟಿತು. ತಮ್ಮ ಮಕ್ಕಳ ಸಾಮರ್ಥ್ಯದ ಬಗೆಗೆ ಅವರಲ್ಲಿ ಅಪಾರವಾಗಿ ಹೆಚ್ಚಿದ ನಂಬಿಕೆಯೂ. ಈ ಕಾರ್ಯಕ್ರಮದ ಯಶಸ್ಸಿಗೆ ಕಾರಣವಾದ ಬಹು ಮುಖ್ಯ ಅಂಶವಾಗಿದೆ. ವಾಸ್ತವವಾಗಿ ತಮ್ಮ ಮಕ್ಕಳು ವಿದ್ಯಾರ್ಥಿಗಳಾಗುತ್ತಿರುವ ಈ ಪ್ರಕ್ರಿಯೆಯಲ್ಲಿ ತಾಯಿ-ತಂದೆಯರು ತಮ್ಮ ಹಿರಿತನದ ಆನಂದ ಪಡೆಯಲು ಆರಂಭಿಸಿದ್ದಾರೆ.



## ಯುವ ಕಾರ್ಯಕರ್ತ

ಶಾಲೆಯ ಕಡೆಗೆ ಸಾಗುವ ಪ್ರತಿಯೊಂದು ಮಗುವಿನ ಪ್ರಯಾಣದಲ್ಲೂ ಭಾಗಿಯಾಗುವ ಪ್ರಯತ್ನ ಮಾಡುತ್ತಾ ಯುವ ಕಾರ್ಯಕರ್ತರು ಮಹತ್ವದ ಪಾತ್ರ ವಹಿಸಿದರು. ಒಂದು ಲಕ್ಷ ಮಕ್ಕಳನ್ನು ಕೆಲಸದಿಂದ ಬಿಡಿಸುವಲ್ಲಿ, ಅವರನ್ನು ಶಾಲೆಗೆ ಕರೆದೊಯ್ಯುವ ಸಂಧಾನದಲ್ಲಿ, ತಮ್ಮನ್ನು ಸಾಮಾಜಿಕ ಕಾರ್ಯಕರ್ತನೆಂದೋ/ಳೆಂದೋ, ಸಾಮಾಜಿಕ ಚಳುವಳಿಯ ಸದಸ್ಯರೆಂದೋ, ತಮ್ಮನ್ನು ಪರಿಚಯಿಸಿಕೊಂಡ ಯುವ ಕಾರ್ಯಕರ್ತರು ಮಹತ್ವದ ಪರಿಣಾಮ ಬೀರಿದರು. ಮಕ್ಕಳ ದುಡಿಮೆ ಮತ್ತು ಶಾಲಾ ಶಿಕ್ಷಣದ ಬಗೆಗೆ ಇರುವ ಎಲ್ಲ ದಂತಕಥೆಗಳನ್ನು ಬಯಲು ಮಾಡಿದರು. ಯಾರನ್ನೇ ಆಗಲಿ ಪ್ರಶ್ನಿಸಲು ಅವರಿಗಿದ್ದ ಸಾಮರ್ಥ್ಯ, ಅಧಿಕಾರಿ ವರ್ಗದವರ ಮೇಲೂ ಮಕ್ಕಳ ದುಡಿಮೆಯನ್ನು ಬಳಸಿಕೊಳ್ಳುವವರ ಮೇಲೂ ಒತ್ತಡ ತರಬಲ್ಲ ಸಾಮರ್ಥ್ಯ ಈ ಯೋಜನೆಗೆ ಒಂದು ತೆರನಾದ ಹೋರಾಟದ ಸ್ವರೂಪವನ್ನು ನೀಡಿತ್ತು.

## ಸಮುದಾಯ

ಈ ಯೋಜನೆಯು ಶಾಲಾಶಿಕ್ಷಣದ ಪ್ರಕ್ರಿಯೆಯಲ್ಲಿ ಹಿಂದೆಂದೂ ಕಂಡರಿಯದಂತಹ ಮತ್ತು ಅರ್ಥಗರ್ಭಿತವಾದ ಸಾಮುದಾಯಿಕ ಪಾಲ್ಗೊಳ್ಳುವಿಕೆಯನ್ನು ಕಂಡಿತು. ವೈಯುಕ್ತಿಕವಾಗಿ ತಂದೆ-ತಾಯಂದಿರು ಮತ್ತು ಅಧ್ಯಾಪಕರನ್ನು ನಿರಂತರ ಪ್ರೋತ್ಸಾಹಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದಲ್ಲದೆ ಮಹತ್ವದ ಆರ್ಥಿಕ ಕೊಡುಗೆಯನ್ನು ನೀಡಿತು. ಹೆಚ್ಚಿನ ಶಾಲೆಗಳಲ್ಲಿ ಮೂಲಸೌಲಭ್ಯಕ್ಕಾಗಿ ಸರ್ಕಾರದ ಕೈಕಾಯದೆ ಹೆಚ್ಚುವರಿ ಶಿಕ್ಷಕರ ಸಹಾಯ ನೀಡುವಲ್ಲಿ ಮತ್ತು ಶಾಲಾ ಕಟ್ಟಡವನ್ನು ವಿಸ್ತರಿಸುವಾಗ ಧನ ಸಹಾಯ ಮಾಡಲೂ ಸಮುದಾಯ ಮುಂದೆ ಬಂದಿತು. ಈ ಕಾರ್ಯಕ್ರಮದ ಹೆಚ್ಚಿನ ಯಶಸ್ಸು ಕಾರ್ಯಕ್ರಮದ ನಿರ್ವಹಣೆಯಲ್ಲಿ ಸಮುದಾಯ ವಹಿಸಿದ ಸಕ್ರಿಯ ಪಾತ್ರದ ಪರಿಣಾಮವಾಗಿದೆ.

ಮಕ್ಕಳ ವಿಷಯವಾಗಿ ಉದ್ಯೋಗದಾತರ ಧೋರಣೆಯನ್ನು ಬದಲಿಸುವಲ್ಲಿ ಸಾಮುದಾಯಿಕ ಒತ್ತಡವೂ ಬಹು ಮುಖ್ಯವಾಗಿತ್ತು. ಕೆಲಸಗಾರರಾಗಿ ಮಕ್ಕಳ ಪಾತ್ರಕ್ಕೆ ಸಮುದಾಯಿಕ ಒಪ್ಪಿಗೆ ಕಡಿಮೆಯಾಗುತ್ತಾ ಬಂದಂತೆ ಉದ್ಯೋಗದಾತರಿಗೆ ಮಕ್ಕಳನ್ನೂ ಕೆಲಸಕ್ಕಿಟ್ಟುಕೊಳ್ಳುವುದು ಹೆಚ್ಚು ಕಷ್ಟಕರವಾಗತೊಡಗಿತು. ವಾಸ್ತವವಾಗಿ ಸಮುದಾಯದ ಒತ್ತಡ ಎಂಥ ಪರಿಣಾಮ ಬೀರಿತ್ತೆಂದರೆ ಉದ್ಯೋಗದಾತರು ತಮ್ಮಲ್ಲಿ ಕೆಲಸ ಮಾಡುವ ಮಕ್ಕಳನ್ನು ಶಾಲಾ ಸೇರ್ಪಡೆ ಮತ್ತು ಸೇತುಬಂಧ ಕಾರ್ಯಕ್ರಮಕ್ಕೆ ಹಣ ನೀಡಿ ಪ್ರಾಯೋಜಿಸಲು ತಾವಾಗಿಯೇ ಮುಂದೆ ಬಂದಿದ್ದರು. ತಮ್ಮ ಹೊಲಗದ್ದೆಗಳಲ್ಲಿ ಕೆಲಸಕ್ಕಾಗಿ ದೊರೆಯುವ ಮಕ್ಕಳ ಸಂಖ್ಯೆ ಇಳಿಮುಖವಾಗುತ್ತಿದ್ದಂತೆಯೇ ದೊಡ್ಡ ಜಮೀನ್ದಾರರು ತಮ್ಮ ಬೆಳೆ ನಮೂನೆಯನ್ನು ಬದಲಾಯಿಸಬೇಕಾದ ಪ್ರಮೇಯ ಬಂದಿದೆ.

## ಇತರ ಸಂಸ್ಥೆಗಳು ಮತ್ತು ವಿಭಾಗಗಳು

ಈ ಯೋಜನೆಯು, ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಆಲೋಚನಾ ವಿಧಾನದಲ್ಲಿ ಮಹತ್ವದ ಬದಲಾವಣೆಯನ್ನುಂಟು ಮಾಡುವಷ್ಟು ಪರಿಣಾಮಕಾರಿಯಾಗಿದೆ.


ಮೊದಲನೆಯದಾಗಿ, ಈ ಯೋಜನೆಯು ತಂದೆ-ತಾಯಂದಿರ ನಿರೀಕ್ಷೆಗೂ ಶೈಕ್ಷಣಿಕ ಮೂಲಸೌಲಭ್ಯಗಳಿಗೂ (ವಿಶೇಷವಾಗಿ ಅಧ್ಯಾಪಕರ) ಕಂದರವಿದೆಯೆಂಬ ತಿಳುವಳಿಕೆಯನ್ನು ಆಂಧ್ರಪ್ರದೇಶದಲ್ಲಿ ಮೂಡಿಸಿದೆ. ಗ್ರಾಮೀಣ ಪ್ರದೇಶದಲ್ಲಿ ಮಕ್ಕಳ ದುಡಿಮೆಯ ಅಸ್ತಿತ್ವದ ಕುರಿತಾಗಿ, ಅದು, ಯಾವುದೂ ಅನಿವಾರ್ಯವಲ್ಲವೆಂಬ, ಮತ್ತು ಈ ಸಮಸ್ಯೆಯು ಹೆಚ್ಚಾಗಿ ಕೆಟ್ಟ ನಿರ್ವಹಣೆ ಮತ್ತು ಅಪರ್ಯಾಪ್ತ ಪ್ರೇರೇಪಣೆಗಳಿಂದಾದುದು ಎಂಬ ವಾಸ್ತವಾಂಶವನ್ನು ಒತ್ತಿ ಹೇಳಿದೆ. ಆಂಧ್ರಪ್ರದೇಶ ಸರ್ಕಾರವು ಜಾರಿಗೊಳಿಸಿದ ಮರಳಿ ಶಾಲೆಗೆ ಎಂಬ ಬೃಹತ್ ಪ್ರಮಾಣದ ಕಾರ್ಯಕ್ರಮವನ್ನು ಪ್ರೇರೇಪಿಸಲು - ಸೇತುಬಂಧ ದಂತಹ ಯೋಜನೆಗಳಿಗೆ ಒತ್ತು ನೀಡುವ ಎಂ.ವಿ.ಎಫ್. ಮಾದರಿಯೇ ಸಾಧನವಾಗಿದೆ.

ಎಂ.ವಿ.ಎಫ್. ಮಾದರಿಯು ಈ ಹಿಂದೆ ಹೆಚ್ಚಿನ ಸರ್ಕಾರಿ ಧೋರಣೆಯನ್ನು ಸಂಕೇತಿಸುವ ಅಸಾಂಪ್ರದಾಯಿಕ ಶಿಕ್ಷಣ ಮಾರ್ಗದ ತೀವ್ರತರವಾದ ಮಿತಿಯನ್ನು ಎತ್ತಿ ತೋರಿಸಿದೆ. ಈ ಕಾರ್ಯಕ್ರಮವು ಮಕ್ಕಳನ್ನು ಕೆಲಸದಿಂದ ಬಿಡಿಸಲು ಸಹಾಯ ಪಡೆಯುವ ಅತ್ಯುತ್ತಮ ಮಾರ್ಗವೆಂದರೆ ಅವರನ್ನು ಪೂರ್ಣಾವಧಿಯ ಸಾಂಪ್ರದಾಯಿಕ ಶಾಲೆಗಳಿಗೆ ಸೇರಿಸುವುದು ಎಂಬುದನ್ನೂ ಎತ್ತಿ ತೋರಿಸಿದೆ. ಶಿಕ್ಷಣದ ಭದ್ರವಾದ ಘಟಕವನ್ನು ಹೊಂದಿರುವ ಎನ್.ಸಿ.ಎಲ್.ಪಿ. ಕಾರ್ಯಕ್ರಮದಡಿಯಲ್ಲಿ ರೂಪಿಸಿದ, ಮಕ್ಕಳ ದುಡಿಮೆಯ ವಿಷಯವಾದ ಕಾರ್ಯಕ್ರಮದಿಂದ ಈ ವಿಷಯ ಸ್ಪಷ್ಟವಾಗುತ್ತದೆ.

ಎಂ.ವಿ.ಎಫ್. ಮಾದರಿಯು ತಮಿಳುನಾಡು, ಕರ್ನಾಟಕ, ಒರಿಸ್ಸಾ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಇಂಥದೇ ಪ್ರಯತ್ನಗಳಿಗೆ ಸ್ಫೂರ್ತಿ ನೀಡಿದೆ.

## ಜೀವನ ಶಾಲಾ ಕಾರ್ಯಕ್ರಮ - ಒಂದು ವಾಸ್ತವ ಅಧ್ಯಯನ


### ಸಾಕ್ಷರತಾ ಆಂದೋಲನ ನಡೆಯುತ್ತಿದ್ದ ಸಂದರ್ಭದಲ್ಲಿ.......





ಸಾಕ್ಷರತಾ ತರಗತಿಗಳಲ್ಲಿ ಉತ್ತಮ ಶಾಲಾ ಮತ್ತು ಶಿಕ್ಷಣ ಸೇವೆಗಾಗಿ ಬರುವ ಈ ಬಗೆಯ ಬೇಡಿಕೆಗೆ ಸ್ಪಂದಿಸಿ ಬಿಜಿವಿಎಸ್ ಶಾಲಾ ಶಿಕ್ಷಣದಲ್ಲಿ ಗುಣಮಟ್ಟದ ಸುಧಾರಣೆಗಾಗಿ ಮತ್ತು ಶಾಲೆ ತೊರೆದವರ ಹಾಗೂ ದುಡಿಯುವ ಮಕ್ಕಳ ಅಗತ್ಯಗಳಿಗೆ ಯಾವುದಾದರೂ ರೀತಿಯಲ್ಲಿ ಸ್ಪಂದಿಸಲು ಹಲವಾರು ಪ್ರಯತ್ನಗಳನ್ನು ನಡೆಸಿದೆ.

### ಶಾಲಾ ಶಿಕ್ಷಣದ ಗುಣಮಟ್ಟದ ಸುಧಾರಣೆ

1994 ರಲ್ಲಿ ಬಿ.ಜಿ.ವಿ.ಎಸ್. ದೇಶಾದ್ಯಂತ ''ಸಂತಸ ಕಲಿಕೆ'' ಎಂಬ ಹೆಸರಿನ ಚಳುವಳಿಯನ್ನು ಪ್ರಾರಂಭಿಸಿತು. ಅದರೊಡನೆ ಶಿಕ್ಷಕ ಪ್ರಶಿಕ್ಷಣ ಕಾರ್ಯಾಗಾರಗಳನ್ನೂ ಪ್ರಾರಂಭಿಸಿತು. ಹಲವಾರು ವರ್ಷಗಳಿಂದ ಜನ ವಿಜ್ಞಾನ ಚಳುವಳಿಗಳು ಗಳಿಸಿ ಇಟ್ಟ ಅಧ್ಯಾಪಕ ಪ್ರಶಿಕ್ಷಣ ಮತ್ತು ಶಿಕ್ಷಣಶಾಸ್ತ್ರದ ನವೀನ ಪ್ರಯೋಗಗಳ ಸಮೃದ್ಧ ಅನುಭವದಿಂದ ಈ ಕಾರ್ಯಕ್ರಮದ ರೂಪರೇಷೆ ಸಿದ್ಧಗೊಂಡಿತು.







ಏಕಲವ್ಯ ಕಾರ್ಯಕ್ರಮವು ಸ್ವತಃ ಈ ಮೊದಲಿನ ಹೋಷಂಗಾಬಾದ್ ವಿಜ್ಞಾನ ಭೋಧನಾ ಕಾರ್ಯಕ್ರಮ.

ಏಕಲವ್ಯವನ್ನು ಮಧ್ಯಪ್ರದೇಶದ ಸರ್ಕಾರಿ ಶಾಲೆಗಳ ಶಿಕ್ಷಕರ ತರಬೇತಿಗಾಗಿ ಸಂಪನ್ಮೂಲ ಕೇಂದ್ರವಾಗಿ ಸ್ಥಾಪಿಸಲಾಯಿತು. ಮೊದಲು ಒಂದು ಜಿಲ್ಲೆಯಲ್ಲಿ ಪ್ರಾರಂಭವಾದ ಈ ಕಾರ್ಯಕ್ರಮವನ್ನು ನಂತರ ಸುಮಾರು 15 ಜಿಲ್ಲೆಗಳಿಗೆ ವಿಸ್ತರಿಸಲಾಯಿತು.









ಶಿಕ್ಷಕ ತರಬೇತಿ ಶಿಬಿರಗಳು ಶಿಕ್ಷಕರಿಗಾಗಿ ತಯಾರಿಸಿದ ಪುಸ್ತಕಗಳು ಮತ್ತು ಅಭಿವೃದ್ಧಿಪಡಿಸಿದ ಪಠ್ಯ ಇವೆಲ್ಲವೂ ಶಿಕ್ಷಣದ ಗುಣಮಟ್ಟವನ್ನು ಗಣನೀಯವಾಗಿ ಸುಧಾರಿಸಿದ್ದಲ್ಲದೆ ವಿಷಯಗಳ ಅಭಿವೃದ್ಧಿ ಮತ್ತು ಶಿಕ್ಷಣಶಾಸ್ತ್ರದ ನವೀನ ಕಲ್ಪನೆ ಶಿಕ್ಷಕ ತರಬೇತಿ ಮತ್ತು ನಂತರದ ಅನೇಕ ಕಾರ್ಯಕ್ರಮಗಳಿಗೂ ಮಾದರಿಯಾದವು.






ಈ ಶಾಲೆಗಳು ಶಿಕ್ಷಣ ಶಾಸ್ತ್ರದ ನವೀನ ಕಲ್ಪನೆ ಮತ್ತು ವಿಷಯಾಭಿವೃದ್ಧಿಯ ದೃಷ್ಟಿಯಲ್ಲಿ ಬೃಹತ್ ಮೂಲಗಳಾಗಿವೆ. ಚಿತ್ತೂರು ಜಿಲ್ಲೆಯ ನರಸಿಂಹನ್ಸ್ ಮತ್ತು ಜಯಪುರದ ದಿಗಂತರ್ ಶಾಲೆಗಳು ಇದರ ಕೆಲ ಉದಾಹರಣೆಗಳು.

ಬಿ.ಜಿ.ವಿ.ಎಸ್. ಈ ಅನುಭವಗಳನ್ನೂ ಬಳಸಿಕೊಂಡಿತು. ಇಂದು ದೇಶಾದ್ಯಂತ, ವಿಜ್ಞಾನ ಚಳುವಳಿ ಅನುಸರಿಸಿದ ಉಪಕ್ರಮಗಳಾದ ಶಿಕ್ಷಕ ತರಬೇತಿ ಹೆಚ್ಚುವರಿ ತರಬೇತಿ ಸಾಮಗ್ರಿಯ ತಯಾರಿಕೆ, ಚಿಣ್ಣರ ಮೇಳಗಳಂಥ ಹೆಚ್ಚುವರಿ ಶೈಕ್ಷಣಿಕ ಚಟುವಟಿಕೆಗಳು - ಇವೆಲ್ಲ ಶಾಲಾ ಶಿಕ್ಷಣದ ಗುಣಮಟ್ಟದ ಸುಧಾರಣೆಗೆ ತಮ್ಮ ಕೊಡುಗೆಯನ್ನು ನೀಡಿವೆ. ಈ ಸ್ಥಿತಿ ಶೀಲ ಮತ್ತು ವಿಸ್ತರಣ ಶೀಲ ಪ್ರಯತ್ನಗಳ ಹಿಂದಿನ ಪ್ರೇರಕಶಕ್ತಿ ಯಾವುದೆಂದರೆ ಗುಣಮಟ್ಟದ ಚರ್ಚಾವಿಷಯದ ಹಿಂದೆ - ಶಿಕ್ಷಣವನ್ನು ನಾವು ಮಕ್ಕಳ ಸೃಜನಶೀಲ ಪ್ರತಿಭೆಯನ್ನು ಸಬಲಗೊಳಿಸುವ, ಅಭಿವೃದ್ಧಿ ಪಡಿಸುವ ಶಕ್ತಿಯೆಂದು ಪರಿಭಾವಿಸುತ್ತೇವೋ ಅಥವಾ ಶಿಕ್ಷಣವು ಅಸಮಾನ ಮತ್ತು ಅನ್ಯಾಯದ ಸಮಾಜದಲ್ಲಿ ಯಾವುದನ್ನೂ ಪ್ರಶ್ನಿಸದ ಮೂಕ ಪ್ರಜೆಗಳನ್ನು ತಯಾರಿಸಲು ಸನ್ನದ್ಧವಾಗಿದೆಯೇ ಎಂಬ ಶಿಕ್ಷಣದ ಗುರಿಯನ್ನು ಕುರಿತ ದೊಡ್ಡ ಪ್ರಶ್ನೆ ಅಡಗಿದೆ ಎಂಬ ತಿಳುವಳಿಕೆ.


### ಅನೌಪಚಾರಿಕ ಶಿಕ್ಷಣ - ಜೀವನ ಶಿಕ್ಷಣ ಮಾದರಿ


ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ''ವಿಭಿನ್ನ ರೀತಿಯ ಅನೌಪಚಾರಿಕ ಶಿಕ್ಷಣ''ವನ್ನು ಸಲಹೆ ಮಾಡಲಾಯಿತು. ಜೀವನಶಾಲಾದ ಮುಂದೆ ಎರಡು ಗುರಿಗಳಿದ್ದವು. ಮೊದಲನೆಯದಾಗಿ ಶಾಲೆಗೆ ಹೋಗದ ಮಕ್ಕಳಿಗಾಗಿ ಬದುಕನ್ನು ಆಧರಿಸಿದ ಶಿಕ್ಷಣ ಒದಗಿಸುವುದು. ಎರಡನೆಯದಾಗಿ ಅವರು ಕ್ರಮಬದ್ಧವಾಗಿ ಶಾಲೆಗಳಿಗೆ ಹೋಗುವುದನ್ನು ಖಚಿತಪಡಿಸಿಕೊಳ್ಳುವುದು. ಈ ಕಾರ್ಯಕ್ರಮವು ಬ್ಲಾಕ್‌ಗಳನ್ನು ಒಂದು ಘಟಕವೆಂದು ಪರಿಗಣಿಸಿದರೂ ಅದನ್ನು ಜಾರಿಗೊಳಿಸುವಲ್ಲಿ ಸಾಮೂಹಿಕ ಚಳುವಳಿಯ ಉತ್ಸಾಹವೇ ಅದರ ಕೇಂದ್ರಬಿಂದುವಾಗಿತ್ತು. ಆರಂಭಿಕ ಕಾರ್ಯಕ್ರಮಗಳು ಆಂಧ್ರಪ್ರದೇಶದ ವೈರಾ, ಹರ್‍ಯಾಣದ ಸಮಲ್ಖಾ, ಬಿಹಾರದ ನವಾದಾ ಮತ್ತು ಮಹಾರಾಷ್ಟ್ರದ ಅಕ್ಕಲ್ಕುವಾದಲ್ಲಿ ನಡೆದವು. ಗ್ರಾಮಮಟ್ಟದ ಸಮೀಕ್ಷೆಗಳು ಶಾಲೆ ಬಿಟ್ಟ ಮಕ್ಕಳನ್ನೂ ಮತ್ತು ಅವರ ಪ್ರಸ್ತುತ ಶಿಕ್ಷಣ ಮಟ್ಟವನ್ನೂ ಗುರುತಿಸಿದವು. ನಂತರ ಪಂಚಾಯಿತಿಗಳೊಂದಿಗೆ ಸಂವಾದ ಮತ್ತು ಕಲಾಜಾಥಾ ಹಾಗೂ ಊರಹಬ್ಬ ಮತ್ತು ಚಿಣ್ಣರ ಮೇಳಗಳ ಮೂಲಕ ಸಾಮೂಹಿಕ ಸಿದ್ಧತೆ ನಡೆದವು. ಇದು ಸಮುದಾಯಕ್ಕೆ ಉತ್ಸಾಹವನ್ನೂ, ಈ ಉಪಕ್ರಮದಲ್ಲಿ ಭಾಗವಹಿಸುವ ಆತ್ಮವಿಶ್ವಾಸವನ್ನೂ ನೀಡಿತು. ಗ್ರಾಮವು ಭಾಗವಹಿಸಬಹುದಾದಂತಹ ಸಾಂಸ್ಥಿಕ ರಚನೆಗಳನ್ನು ಮಾಡಲಾಯಿತು. ನಂತರ ಎನ್.ಎಫ್.ಇ ಕೇಂದ್ರಗಳು ಕಾರ್ಯಾರಂಭ ಮಾಡಿದವು. ಕೆಲವು ಹಳ್ಳಿಗಳಲ್ಲಿ ಪಂಚಾಯಿತಿಗಳು ಜೀವನ ಶಾಲಾಗಳಿಗೆ ಸಂಪೂರ್ಣ ಬೆಂಬಲ ನೀಡಿದವು. ಮೇಲೆ ಉಲ್ಲೇಖಿಸಲಾದ ನಾಲ್ಕು ಬ್ಲಾಕ್ ಗಳಲ್ಲಿ 1000-2000 ವಿದ್ಯಾರ್ಥಿಗಳು ಎನ್.ಎಫ್.ಇ. ಕೇಂದ್ರಗಳಿಗೆ ಹಾಜರಾಗುತ್ತಾರೆ. ಈ ಚಳುವಳಿಯ ಪ್ರಾರಂಭದಲ್ಲಿ ಮತ್ತು ನಂತರವೂ ನಿಯತ ಕಾಲದಲ್ಲಿ ಸಾಂಪ್ರದಾಯಿಕ ಶಾಲೆಗಳಿಗೆ ಹೋಗಬಲ್ಲವರನ್ನು ಶಾಲೆಗೆ ಮತ್ತೆ ಸೇರಿಸಲಾಯಿತು. ಯಾರಿಗೆ ಎನ್.ಎಫ್.ಇ. ಕೇಂದ್ರದಲ್ಲಿ ಮುಂದುವರಿಯಬೇಕಾದ ಅಗತ್ಯವಿತ್ತೋ ಅವರು ಅಲ್ಲಿಯೇ ಮುಂದುವರೆದರು.

ಅಧ್ಯಾಯ - 5

# ಜನರ ಜೀವನೋಪಾಯದ ಭದ್ರತೆ

## ಜೀವನೋಪಾಯದ ಮೇಲೆ ರಾಚನಿಕ ಹೊಂದಾಣಿಕಾ ನೀತಿಯ ಪರಿಣಾಮ.





ಒಂದು ಆರೋಗ್ಯಕರ ಬದುಕಿಗೆ ಅಗತ್ಯವಾದ ಸರಿಯಾದ ಪೋಷಕ ಆಹಾರ, ನೀರು, ನೈರ್ಮಲ್ಯ, ಆರೋಗ್ಯ ಸೌಲಭ್ಯಗಳು ಸಾಧ್ಯವಾಗುವುದು ನಿರಂತರ ಉದ್ಯೋಗ ಮತ್ತು ಆದಾಯದಿಂದ. ಈ ಆದಾಯ ಬೆಲೆಗಳ ಹೆಚ್ಚಳವನ್ನು ಸರಿದೂಗಿಸುವಂತಿರಬೇಕು.

ಹಣ ಆರೋಗ್ಯಯುತ ಬದುಕಿಗೆ ಅಗತ್ಯವಾದ ಅಂಶಗಳಲ್ಲೊಂದು ಮಾತ್ರ. ಕೆಲಸದ ಸ್ವರೂಪ ಮತ್ತು ಸನ್ನಿವೇಶಗಳು ಜನರ ದೈಹಿಕ ಮತ್ತು ಮಾನಸಿಕ ಆರೋ... ಮೇಲೆ ಗಾಢ ಪ್ರಭಾವ ಬೀರುತ್ತವೆ.








ಜೀವನೋಪಾಯದ ಭದ್ರತೆ, ಕೆಲಸದ ಸ್ವರೂಪ ಮತ್ತು ಸನ್ನಿವೇಶ, ಪರಿಸರ ಹಾಗೂ ಸಮಗ್ರ ಆರ್ಥಿಕ ಅಂಶಗಳನ್ನು (Macro - economic factors) ಅವಲಂಬಿಸಿದೆ. ಆರ್ಥಿಕ ಸುಧಾರಣೆಯ ನೀತಿ, ದಿನಗೂಲಿ ಕೆಲಸಗಳನ್ನೂ ಅಸಂಘಟಿತ ವಲಯದ ಕಾರ್ಮಿಕರ ಸಂಖ್ಯೆಯನ್ನೂ ಹೆಚ್ಚಿಸಿದೆ. ಪರಿಣಾಮವಾಗಿ, ಜನ ಸಂಖ್ಯೆಯ ಹೆಚ್ಚು ಪಾಲು ಮಂದಿ ಸಾಮಾಜಿಕ ಭದ್ರತೆಯಿಂದ ವಂಚಿತರಾಗಿ ಅನಿಶ್ಚಿತ ಪರಿಸ್ಥಿತಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇದು ಜೀವನದ ಪರಿಸ್ಥಿತಿಯ ಮೇಲೆ ಪರಿಣಾಮ ಮಾಡಿದೆ.

ರಚನಾತ್ಮಕ ಹೊಂದಾಣಿಕಾ ನೀತಿಯ ಪರಿಣಾಮ ಬೆಲೆಗಳ ಹೆಚ್ಚಳ ಎಲ್ಲಾ ಸೇವೆಗಳ ಖಾಸಗೀಕರಣ. ಆದಾಯದ ಸ್ಥಿರತೆ ಇಲ್ಲದ ಕಾರಣ ಜೀವನದ ಪರಿಸ್ಥಿತಿ ಹದಗೆಡುತ್ತಿದೆ.

ಪ್ರಾಕೃತಿಕ ಸಂಪನ್ಮೂಲಾಧಾರಗಳ ದುರ್ಬಳಕೆಯಿಂದ ನೆಲ ಹಾಗೂ ಜಲದ ಕಲುಷಿತತೆ ಉಂಟಾಗಿದೆ. ಒಳ್ಳೆಯ ಆಹಾರ ಹಾಗೂ ನೀರಿನ ಲಭ್ಯತೆಯ ಮೇಲೆ ಇದು ದುಷ್ಪರಿಣಾಮ ಉಂಟುಮಾಡಿದೆ. ಅರಣ್ಯನಾಶದಿಂದ ವಾತಾವರಣದ ಉಷ್ಣತೆ ಹಾಗೂ ಪ್ರದೂಷಣೆ(ಮಾಲಿನ್ಯ) ಹೆಚ್ಚಿದೆ.

ಈ ಅಧ್ಯಾಯ ಜೀವನೋಪಾಯದ ಸಮಸ್ಯೆಗಳನ್ನೂ ಹಾಗೂ ಅದು ಆರೋಗ್ಯದ ಮೇಲೆ ಉಂಟುಮಾಡುವ ಪರಿಣಾಮವನ್ನೂ ಪರಿಶೀಲಿಸುತ್ತದೆ.

## ಉದ್ಯೋಗದ ಅಭದ್ರತೆ

1991ರಲ್ಲಿದ್ದ ಉದ್ಯೋಗ ನಿರ್ಮಾಣದ ವಾರ್ಷಿಕ ದರ ಶೇಕಡಾ 1.44%. ಇದು 1997 ರಲ್ಲಿ ಶೇಕಡಾ 0.67 ಕ್ಕೆ ಇಳಿದಿದೆ. ಆರ್ಥಿಕ ಸುಧಾರಣೆಯ ನಂತರ ಅಸಂಘಟಿತ ಕ್ಷೇತ್ರದ ಬೆಳವಣಿಗೆಯಿಂದಾಗಿ ಉದ್ಯೋಗದ ಅಭದ್ರತೆಯಲ್ಲಿ ಹೆಚ್ಚಳವಾಗಿದೆ.


### ಯಶಸ್ವೀ ಆರ್ಥಿಕತೆ ಎಂದರೇನು?

ಅನೇಕ ಮಂದಿ ಅರ್ಥಶಾಸ್ತ್ರಜ್ಞರಿಗೆ ಆರ್ಥಿಕತೆ ಯಶಸ್ಸಿನ ಮಾನದಂಡ ಆರ್ಥಿಕ ಬೆಳವಣಿಗೆ. ಇದರ ಅರ್ಥ ಹೆಚ್ಚು ಉತ್ಪಾದನೆ ಮತ್ತು ಹೆಚ್ಚಾದ ನಿವ್ವಳ ಆದಾಯ. ಇದರ ಅಳತೆಗೋಲು ಜಿ.ಡಿ.ಪಿ. (Gross Domestic Product) ಜಿ.ಡಿ.ಪಿ ರಾಷ್ಟ್ರದ ಎಲ್ಲರ ಆದಾಯದ ಮೊತ್ತ.

ಹೆಚ್ಚು ಮಂದಿ ಸಾಮಾನ್ಯ ಜನರಿಗೆ ಯಶಸ್ವೀ ಆರ್ಥಿಕತೆ ಎಂದರೆ ಜೀವನೋಪಾಯದ ಭದ್ರತೆ ಮತ್ತು ಉದ್ಯೋಗಾವಕಾಶಗಳ ಹೆಚ್ಚಳ.

ಒಂದು ಎಣ್ಣೆ ಗಿರಣಿ ತೆರೆದರೆ ಅದು ಎಣ್ಣೆಯ ಉತ್ಪಾದನೆಯನ್ನು ಹತ್ತು ಪಟ್ಟು ಹೆಚ್ಚಿಸಿ ಜಿಡಿಪಿಯ ಹೆಚ್ಚಳಕ್ಕೆ ಕಾರಣವಾಗಬಹುದು. ಆದರೆ ಅದು ಎಷ್ಟೋ ಗಾಣಿಗರ ಉದ್ಯೋಗವನ್ನು ಕಸಿದು ಕೊಳ್ಳುವುದರಿಂದ ಅಂತಹ ಬೆಳವಣಿಗೆ ಅವರ ಪಾಲಿಗೆ ಮಾರಕ.


ಐಷಾರಾಮೀ ಕಾರುಗಳ ತಯಾರಿಕೆಯಿಂದ ರಾಷ್ಟ್ರೀಯ ಉತ್ಪನ್ನದ ಹೆಚ್ಚಳವಾಗುತ್ತದೆ - ನಿಜ. ಒಂದು ಆಧುನಿಕ ಕಾರು ಕಾರ್ಖಾನೆ ಆರುನೂರು ಮಂದಿಗೆ ಕೆಲಸ ನೀಡಿದರೆ ಅದಕ್ಕಿಂತ ಹೆಚ್ಚು ಮಂದಿ ರೈತ ಕುಟುಂಬಗಳ ಜೀವನೋಪಾಯವನ್ನು ಕಸಿದುಕೊಳ್ಳುತ್ತದೆ. ಈ ಕಾರು ಕಾರ್ಖಾನೆಗಾಗಿ ರೈತರಿಂದ ಜಮೀನನ್ನು ವಶಪಡಿಸಿಕೊಳ್ಳಲಾಗುತ್ತದೆ. ಕೆಲವರಿಗೇನೋ ಚಾಲಕರಾಗಿ, ಮೆಕ್ಯಾನಿಕ್‌ಗಳಾಗಿ ಕೆಲಸ ಸಿಗಬಹುದು. ಕೆಲವರಿಗೆ ಕಾರಿನಲ್ಲಿ ನೇತು ಹಾಕುವ ಗೊಂಬೆಗಳನ್ನು ಮಾಡುವ ಅವಕಾಶ ಸಿಗಬಹುದು. ಆದರೆ ಈ ಕೆಲಸಗಳು ಅವರು ಕಳೆದುಕೊಂಡ ಕೆಲಸಗಳಂತಲ್ಲ. ಅಲ್ಲದೆ ಇಂದು ಉದ್ಯೋಗಗಳೂ ಸಹ ಕೆಲವೇ ಕೆಲವರ ಐಷಾರಾಮಾ ಬಳಕೆಗೆ ಪೂರಕವಾಗಿ ಮಾತ್ರ ಇರುತ್ತವೆ.





ಉದ್ಯೋಗ ಭದ್ರತೆಯ ಕೆಲವು ಲಕ್ಷಣಗಳೆಂದರ

**ಸಂಘಟಿತ ವಲಯದ ಕುಗ್ಗುವಿಕೆ:** ಕಳೆದ ಎರಡು ದಶಕಗಳಲ್ಲಿ ಸಂಘಟಿತ ವಲಯ ಬೆಳವಣಿಗೆಯಲ್ಲಿ ಭಾರೀ ಹಿನ್ನಡೆಯಾಗಿದೆ. ಈ ವಲಯದಲ್ಲಿ ಬೆಳವಣಿಗೆಯ ದರ 1970ರಲ್ಲಿ ಶೇಕಡಾ 2.5 ರಷ್ಟಿದ್ದದ್ದು 1980ರ ದಶಕದಲ್ಲಿ ಶೇಕಡಾ 1.5ಕ್ಕಿಳಿದು, 1990ರ ಆರ್ಥಿಕ ಸುಧಾರಣೆಗಳ ನಂತರ ಇದು ಶೇಕಡಾ 1 ಕ್ಕಿಳಿಯಿತು. 1990 ಮತ್ತು 1998ರ ನಡುವೆ ಸಂಘಟಿತ ಕ್ಷೇತ್ರದ ಉದ್ಯೋಗದ ಪ್ರಮಾಣ ಶೇಕಡಾ 9.4 ರಿಂದ ಶೇಕಡಾ 8.5ಕ್ಕೆ ಇಳಿಯಿತು. ಇದರ ಅರ್ಥವೆಂದರೆ ಭವಿಷ್ಯ ನಿಧಿ, ವೈದ್ಯಕೀಯ ಮತ್ತು ವೇತನ ಸಹಿತ ರಜೆ, ಹೆರಿಗೆ ಸೌಲಭ್ಯ ಮುಂತಾದ ಸಾಮಾಜಿಕ ಸೌಲಭ್ಯಗಳನ್ನು ಪಡೆಯುತ್ತಿದ್ದ ಉದ್ಯೋಗಿಗಳ ಸಂಖ್ಯೆ ಶೇಕಡಾ 10ಕ್ಕಿಂತ ಕಡಿಮೆ.








ಬಾಡಿಗೆ ಮತ್ತು ದೀಪದ ಖರ್ಚು ಅವಳದ್ದೇ.



## ಶ್ರಮದ ಸಾಂದರ್ಭೀಕರಣ

ರಾಷ್ಟ್ರದ ಶೇ.90ರಷ್ಟು ಮಂದಿ ಉದ್ಯೋಗಕ್ಕಾಗಿ ಅಸಂಘಟಿತ ವಲಯವನ್ನೇ ಆಶ್ರಯಿಸುತ್ತಾರೆ. ಈ ವಲಯದಲ್ಲಿಯೂ ಸಹ ಕೆಲಸಗಾರರನ್ನು ಕೆಲಸದ ಭದ್ರತೆ ಮತ್ತು ಅವಧಿಯ ಆಧಾರದ ಮೇಲೆ ವಿಂಗಡಿಸಬೇಕಾಗುತ್ತದೆ. ನ್ಯಾಷನಲ್ ಸ್ಯಾಂಪಲ್ ಸರ್ವೇ (NSSO) ಎಂಬ ಸಂಸ್ಥೆ ಕೆಲಸಗಾರರನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸುತ್ತದೆ. ನಿತ್ಯ ಕಾರ್ಮಿಕರು, ವಾರದ ಕಾರ್ಮಿಕರು, ದಿನಗೂಲಿಗಳು. ನಿತ್ಯ ಕಾರ್ಮಿಕರೆಂದರೆ ವರ್ಷದ 365 ದಿನಗಳಲ್ಲಿ ಹೆಚ್ಚಿನ ಅವಧಿಯಲ್ಲಿ ಕೆಲಸ ಮಾಡುವವರು. ಇವರಲ್ಲಿಯೂ ಎರಡು ಗುಂಪು. ಪ್ರಧಾನ ಕಾರ್ಮಿಕರು ಮತ್ತು ಉಪಕಾರ್ಮಿಕರು. ಪ್ರಧಾನ ಕಾರ್ಮಿಕರು ವರ್ಷವಿಡಿ ಸ್ಥಿರ ಉದ್ಯೋಗವನ್ನು ಹೊಂದಿರುತ್ತಾರೆ. ಇವರ ಕೆಲಸವನ್ನು ಮೂರು ರೀತಿಯಾಗಿ ವಿಂಗಡಿಸಬಹುದು. ಸ್ವಉದ್ಯೋಗಸ್ಥರು, ಸಾಂದರ್ಭಿಕ ಕಾರ್ಮಿಕರು ಮತ್ತು ಪೂರ್ಣ ಉದ್ಯೋಗಿಗಳು.

ಸಾಂದರ್ಭಿಕ ಉದ್ಯೋಗವೆಂದರೆ ಪ್ರತಿ ನಿತ್ಯ ಪೂರ್ಣಾವಧಿ ಕೆಲಸವೇ ಆದರೂ ವೇತನ ಮಾತ್ರ ಕೆಲಸದ ಗುತ್ತಿಗೆ ಆಧಾರದ ಮೇಲೆ. ಆರ್ಥಿಕ ಸುಧಾರಣೆಗಳ ನಂತರ ಶ್ರಮದ ಸಾಂದರ್ಭೀಕರಣದಲ್ಲಿ ಹೆಚ್ಚಳವಾಗಿದೆ. 1972 ರಿಂದ 94ರ ವರೆಗಿನ ಅವಧಿಯಲ್ಲಿ ನಿರಂತರ ಉದ್ಯೋಗಿಗಳ ಸಂಖ್ಯೆ ಶೇಕಡಾ 61.4 ರಿಂದ 54.8ಕ್ಕೆ ಇಳಿದಿದೆ. ಸಾಂದರ್ಭಿಕ ಉದ್ಯೋಗದ ಪ್ರಮಾಣ ಶೇಕಡಾ 23.2ಕ್ಕೆ ಇಳಿದಿದೆ. ಸಾಂದರ್ಭಿಕ ಉದ್ಯೋಗದ ಪ್ರಮಾಣ ಶೇಕಡಾ 23.2 ರಿಂದ ಶೇಕಡಾ 32ಕ್ಕೆ ಏರಿದೆ. ಅಂದರೆ ಹೆಚ್ಚು ಹೆಚ್ಚು ಮಂದಿ ಉದ್ಯೋಗಿಗಳು ಉದ್ಯೋಗದೊಟ್ಟಿಗೆ ದೊರಕಬೇಕಾದ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ.




## ಮಹಿಳಾ ಕಾರ್ಮಿಕರ ನೇಮಕ

ಶ್ರಮದ ಸಾಂದರ್ಭೀಕರಣ ಮಹಿಳಾ ಕಾರ್ಮಿಕರ ವಿಷಯದಲ್ಲಿ ಹೆಚ್ಚಿನ ದರದಲ್ಲಿ ಸಾಗಿದೆ. ಮಹಿಳೆಯರಲ್ಲಿ ಶೇಕಡಾ 60ರಷ್ಟು ಮಂದಿ ಸಾಂದರ್ಭಿಕ ಕಾರ್ಮಿಕರು 1991ರಿಂದ 97ರ ಅವಧಿಯಲ್ಲಿ ಶ್ರಮದಲ್ಲಿ (ಉದ್ಯೋಗದಲ್ಲಿ) ಮಹಿಳೆಯ ಪಾಲು ಶೇಕಡಾ 22ರಿಂದ ಶೇಕಡಾ 28ಕ್ಕ ಏರಿತು. ಭಾರತ, ಮಲೇಷಿಯಾ, ಶ್ರೀಲಂಕಾ ಮತ್ತಿತರ ದೇಶಗಳಲ್ಲಿ ಕಡಿಮೆ ವೇತನದ ಕೆಲಸಗಳಲ್ಲಿ ಮಹಿಳೆಯರನ್ನೇ ಹೆಚ್ಚು ಹೆಚ್ಚು ನೇಮಕ ಮಾಡಿಕೊಂಡಿರುವುದು ಕಂಡುಬಂದಿದೆ. ಈ ಕೆಲಸಗಳು ಮನೆಗಳಲ್ಲಿ ಮಾಡುವ ಉತ್ಪಾದನೆ ಮತ್ತು ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದವು. ಆರ್ಥಿಕ ಸುಧಾರಣೆಯ ನಂತರ ಯಾವುದೇ ಇತರ ಸೌಲಭ್ಯಗಳಿಲ್ಲದೇ ಅಸಮರ್ಪಕವಾದ ಕೆಲಸದ ವಾತಾವರಣದಲ್ಲಿ, ಕಡಿಮೆ ವೇತನಕ್ಕೆ ಮಹಿಳೆಯರನ್ನು ನೇಮಿಸಿಕೊಳ್ಳುವ ಪ್ರವೃತ್ತಿ ಹೆಚ್ಚಿದೆ.



ಸಂಘಟಿತ ವಲಯ
(ಪುರುಷರಿಗೆ ಮಾತ್ರ)
ಹೆರಿಗೆ ಸೌಲಭ್ಯಗಳನ್ನು ಕೊಡಬೇಕಿಲ್ಲ.



ಅಸಂಘಟಿತ ವಲಯ
(ಮಹಿಳೆಯರಿಗೆ ಮಾತ್ರ)
ಪುರುಷರು ಇಷ್ಟು ಕಮ್ಮಿಗೆ ಕೆಲಸ ಮಾಡುವುದಿಲ್ಲ.

1991ರ ಜನಗಣತಿಯ ಪ್ರಕಾರ ಗೃಹಕೇಂದ್ರಿತ ಉದ್ಯೋಗಗಳಲ್ಲಿರುವ ಮಹಿಳೆಯರ ಸಂಖ್ಯೆ ಒಂದು ದಶ ಲಕ್ಷ ಮಾತ್ರ. ಆದರೆ ವಾಸ್ತವವಾಗಿ 2.5 ದಶಲಕ್ಷ ಮಹಿಳೆಯರು ಬೀಡಿ ಉದ್ಯಮದಲ್ಲೂ, ನಾಲ್ಕು ದಶ ಲಕ್ಷ ಮಹಿಳೆಯರು ಕೈಮಗ್ಗ ಗಳಲ್ಲೂ ಕೆಲಸ ಮಾಡುತ್ತಾರೆ. ಇಷ್ಟಲ್ಲದೇ ಕೋಟ್ಯಾಂತರ ಮಹಿಳೆಯರು ರೆಡಿಮೇಡ್, ವಸ್ತ್ರ ತಯಾರಿಕೆ, ಎಲೆಕ್ಟ್ರಾನಿಕ್ಸ್, ಹಪ್ಪಳ, ಅಗರಬತ್ತಿ, ಉಪ್ಪಿನಕಾಯಿ ಮುಂತಾದ ಉದ್ಯಮಗಳಲ್ಲಿ ದುಡಿಯುತ್ತಾರೆ. ದಾಖಲೆಗಳೇ ಇಲ್ಲದ ಕಾರಣ ಇವರ ಸೇವೆ ಪರಿಗಣನೆಗೆ ಬರುವುದಿಲ್ಲ.
ಸಂಘಟಿತ ವಲಯದಲ್ಲಿ ಅತಿ ಹೆಚ್ಚು ಮಹಿಳೆಯರಿಗೆ ಉದ್ಯೋಗ ನೀಡಿರುವ ಸಂಸ್ಥೆ ಎಂದರೆ ಸರ್ಕಾರವೇ. ಆದರೆ ಉದ್ಯೋಗ ನೇಮಕಾತಿಯನ್ನು ನಿಲ್ಲಿಸುವುದರ ಪರಿಣಾಮ ಮಹಿಳೆಯರಿಗೆ ಇಲ್ಲಿ ಉದ್ಯೋಗವಿಲ್ಲ. ಕೋಕಾ-ಕೋಲಾದಂತಹ ಸಂಸ್ಥೆ ಮಹಿಳಾ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕುತ್ತಿದೆ.
ಖಾಸಗೀಕರಣದಿಂದಾಗಿ ಶ್ರಮದ ಸಾಂದರ್ಭೀಕರಣವಾಗುತ್ತಿದೆ. ನೈರ್ಮಲ್ಯ ಕ್ಷೇತ್ರದಲ್ಲಿ ಶೇಕಡಾ 30 ರಿಂದ 40 ರಷ್ಟು ಮಂದಿ ಮಹಿಳೆಯರು ಇದ್ದಾರೆ. ಒಂದು ದಶಲಕ್ಷ ಮಹಿಳೆಯರು ಅಂಗನವಾಡಿಗಳಲ್ಲಿ ಕೆಲಸ ಮಾಡುತ್ತಾರೆ. ಇವರನ್ನು ಪೂರ್ಣಾವಧಿ ಕೆಲಸಗಾರರೆಂದು ಪರಿಗಣಿಸುವುದರ ಬದಲು ಈ ಸಂಸ್ಥೆಗಳನ್ನು ಖಾಸಗಿಯವರಿಗೆ ವಹಿಸುವ ಯೋಜನೆ ಮಾಡಲಾಗುತ್ತಿದೆ. ಮಹಿಳೆಯರೇ ಹೆಚ್ಚಿರುವ ಶಿಕ್ಷಣ ಮತ್ತು ಶುಶ್ರೂಷೆಯ ಕ್ಷೇತ್ರಗಳಲ್ಲಿ ಕೆಲಸದ ಪರಿಸ್ಥಿತಿ ಶೋಚನೀಯ. ಐವರು ರೋಗಿಗಳಿಗೆ ಒಬ್ಬ ದಾದಿ ಇರಬೇಕಾದ ಕಡೆಯಲ್ಲಿ ನಲವತ್ತು ರೋಗಿಗಳಿಗೆ ಒಬ್ಬ ದಾದಿ ಮಾತ್ರ ಇರುವ ಸ್ಥಿತಿಯಿದೆ.

ಆಧಾರ: ಬದಲೀ ಆರ್ಥಿಕ ಸಮೀಕ್ಷೆ : 1998 -99




## ಉದ್ಯೋಗದ ಹಿನ್ನಡೆ

ಅಸ್ಥಿರ ಜೀವನಕ್ರಮ ಹಾಗೂ ಅನಾರೋಗ್ಯಕ್ಕೆ ಉದ್ಯೋಗದ ಭದ್ರತೆಯಿಲ್ಲದಿರುವುದು ಒಂದು ಪ್ರಧಾನ ಕಾರಣ. ಔದ್ಯಮಿಕ ಮತ್ತು ಕೃಷಿ ಕ್ಷೇತ್ರಗಳಲ್ಲಿ ಉದ್ಯೋಗದ ಅವಕಾಶಗಳ ಕುಸಿತದಿಂದಾಗಿ ಅಭದ್ರತೆಯುಂಟಾಗುತ್ತದೆ. ಜೀವನೋಪಾಯದ ನಷ್ಟಕ್ಕೆ ಹಲವು ಮುಖ್ಯ ಕಾರಣಗಳನ್ನು ನೋಡೋಣ.

1. ರೈತರು ವ್ಯವಸಾಯ ಮಾಡಲಾರರು

ಏಕೆಂದರೆ ಅವರು ಜಮೀನನ್ನು ಕಳೆದುಕೊಂಡಿದ್ದಾರೆ ಅಥವಾ ವ್ಯವಸಾಯವನ್ನು ನಿಲ್ಲಿಸಿದ್ದಾರೆ.




- ಉದಾರೀಕರಣದಿಂದಾಗಿ 800 ವಸ್ತುಗಳು ಮುಕ್ತ ಆಮದು ಪರವಾನಗಿ (open general licence) ಯಲ್ಲಿ ಬರುತ್ತವೆ. ಇನ್ನೂ 714 ವಸ್ತುಗಳ ಆಮದಿನ ಮೇಲೆ ನಿಯಂತ್ರಣವನ್ನು ತೆಗೆಯಲಾಗಿದೆ. ಇದು ರೈತರ ಮೇಲೆ ತುಂಬಾ ಪರಿಣಾಮ ಮಾಡಿದೆ.
- ರಬ್ಬರ್‌ನ ಆಮದಿನಿಂದಾಗಿ ಬೆಲೆಗಳು ಶೇ. 50ರಷ್ಟು ಇಳಿದಿದ್ದರಿಂದ ರಬ್ಬರ್ ತೆಗೆಯುವವರು ಕೆಲಸವಿಲ್ಲದವರಾಗಿದ್ದಾರೆ. ಶ್ರೀಮಂತರು ಗಿಡಗಳಿಂದ ರಬ್ಬರ್ ತೆಗೆಯುವುದನ್ನು ನಿಲ್ಲಿಸಿದ್ದರಿಂದ ಕೂಲಿಗಾರರು ತಮ್ಮ ಕೆಲಸ ಕಳೆದುಕೊಂಡಿದ್ದಾರೆ.
- ಮಾರುಕಟ್ಟೆಗೆ ಬಂದಿರುವ ಚೀನಿ ಬೆಳ್ಳುಳ್ಳಿ ತಮಿಳುನಾಡು ಹಾಗೂ ರಾಜಾಸ್ಥಾನದ ಬೆಳ್ಳುಳ್ಳಿ ಬೆಳೆಗಾರರನ್ನು ಕಂಗೆಡಿಸಿದೆ.
- ತಮಿಳುನಾಡಿನ ನಾಮಕ್ಕಲ್ ಹಾಗೂ ಇತರೆಡೆಗಳಲ್ಲಿನ ಕೋಳಿ ಸಾಕಣಿದಾರರು ಅಮೆರಿಕದಿಂದ ಆಮದಾಗುವ ಕೋಳಿ ಕಾಲಿನ ಮುಂದೆ ಸ್ಪರ್ಧಿಸಲಾಗದೆ ತಮ್ಮ ಕೇಂದ್ರಗಳನ್ನು ಮುಚ್ಚಿದ್ದಾರೆ ಸ್ಥಳೀಯವಾಗಿ ಒಂದು ಕೆ.ಜಿ. ಕೋಳಿ ಮಾಂಸದ ಉತ್ಪಾದನಾ ಬೆಲೆಯೇ ರೂ.32 ಆಗಿರುವಾಗಿ ಆಮದಾದ ಮಾಂಸ ಕೆ.ಜಿ.ಗೆ ರೂ 28ಕ್ಕೇ ಸಿಗುತ್ತದೆ.
- ಸೇಬು, ಕಿತ್ತಳೆ ಬೆಳೆಗಾರರಿಗೂ ಇದೇ ಸ್ಥಿತಿ ಬರಲಿದೆ. ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್‌ನಿಂದ ಈ ಹಣ್ಣುಗಳು ಆಮದಾಗಲಿವೆ.
- ಚಹಾದ ಆಮದಿನ ಪ್ರಾರಂಭದೊಂದಿಗೆ ಅಸ್ಸಾಮಿನ ಚಹಾ ಕಾರ್ಮಿಕರು ಕಷ್ಟಕ್ಕೊಳಗಾಗಲಿದ್ದಾರೆ. 2000ದ ಏಪ್ರಿಲ್ ನಲ್ಲಿ ನೀಲಗಿರಿಯಲ್ಲಿ ಲಕ್ಷ ಕಾರ್ಮಿಕರು ಚಹಾ ಆಮದನ್ನು ರದ್ದು ಮಾಡಲು ಕೋರಿ ಪ್ರತಿಭಟಿಸಿದ್ದಾರೆ.
- ಹೀಗೆಯೇ ಮೀನು, ಕಾಫಿ, ಹಾಲು, ಸಾಂಬಾರ ಪದಾರ್ಥಗಳು ತರಕಾರಿ ಮುಂತಾದ ವಸ್ತುಗಳ ಮೇಲಿನ ಆಮದು ನಿರ್ಬಂಧ ರದ್ದಾಗಿದೆ. ಕ್ಷೀರ ಕ್ಷೇತ್ರದಲ್ಲೇ ಲಕ್ಷಾಂತರ ಮಹಿಳೆಯರು ಉದ್ಯೋಗ ಕಳೆದುಕೊಳ್ಳಲಿದ್ದಾರೆ.


## 2. ಕೃಷಿಯೇತರ ಗ್ರಾಮೀಣ ಉದ್ಯೋಗಗಳ ಮಾಯ

ಹಿಂದೆ ಗ್ರಾಮೀಣ ಪ್ರದೇಶಗಳಲ್ಲಿ ಹಲವಾರು ರೀತಿಯ ಕರಕುಶಲ ಕಸುಬುದಾರರಿರುತ್ತಿದ್ದರು. ಆದರ್ೆ ಅವರು ಇನ್ನಿಲ್ಲ. ಗ್ರಾಮೀಣ ಸಣ್ಣ ಗಿರಣಿಗಳು, ಗಾಣಗಳು, ಚಮ್ಮಾರರ ಕುಲುಮೆಗಳು, ರೊಟ್ಟಿಯಂಗಡಿಗಳು, ಬೇಕರಿ ತಿನಿಸುಗಳ ತಯಾರಿಕಾ ಘಟಕಗಳು, ಹಾಲಿನ ಉತ್ಪನ್ನ ತಯಾರಿಕಾ ಘಟಕಗಳು ಅದೃಶ್ಯವಾಗುತ್ತಿವೆ. ಇಂದು ಆಸ್ಟ್ರೇಲಿಯಾದ ಗೋಧಿಯನ್ನೂ, ಹಣ್ಣಿನ ರಸವನ್ನೂ, ಯೂರೋಪಿನ ಬ್ರೆಡ್ಡು ಬಿಸ್ಕತ್ತುಗಳನ್ನೂ ನಾವು ಪಡೆಯಬಹುದು... ಆದರೆ ಗ್ರಾಮೀಣ ಕುಟುಂಬಗಳ ಜೀವನೋಪಾಯದ ವೆಚ್ಚದಲ್ಲಿ!.

## 3. ಈ ಗೃಹ ಕೈಗಾರಿಕೆಗಳಿಗೆ ಬದಲೀ ಉದ್ಯಮಗಳು ನಗರದಲ್ಲೂ ಇಲ್ಲ

ಆರ್ಥಿಕ ಸುಧಾರಣೆಗಳು ಪ್ರಾರಂಭವಾದಾಗ ಇನ್ನು ಐದು ವರ್ಷದಲ್ಲಿ ಆರ್ಥಿಕತೆ ಪ್ರಗತಿ ಸಾಧಿಸುತ್ತದೆ ಎಂಬ ಆಶ್ವಾಸನೆ ನೀಡಲಾಗಿತ್ತು. ಆದರೆ ಪ್ರಗತಿ ಸಾಧಿಸುತ್ತಿರುವುದು ಬಹು ರಾಷ್ಟ್ರೀಯ ಕಾರ್ಪೊರೇಷನ್‌ಗಳು ಹಾಗೂ ಈ ದೇಶದ ಶ್ರೀಮಂತರು. ಹಾಗೆಯೇ ದೇಶದ ಮೇಲ್ವರ್ಗದ ಶೇಕಡ 10 ಜನರು. ಪೆಪ್ಸಿ, ಕೋಕಾ ಕೋಲಾ ಕಂಪೆನಿಗಳು ಸ್ಥಳೀಯ ಪೇಯ ತಯಾರಕರಿಗೆ ಕೊಕ್ ಕೊಟ್ಟಿವೆ. ಜಿಲ್ಲೆಟ್ ಕಂಪನಿ ಮಲ್ಹೋತ್ರಾರನ್ನು ಓಡಿಸಿದೆ. ಹಿಂದೂಸ್ತಾನ್ ಲಿವರ್ ಲಿಕಿಸಾನ್‌ಳಿ ನ್ನು ತೆರವು ಮಾಡಿಸಿದೆ. ಈಗ ಬಹು ರಾಷ್ಟ್ರೀಯ ಕಂಪೆನಿಗಳು 15,000 ಕೋಟಿ ರೂ.ಗಳ ವಹಿವಾಟಿನ ಬಳಕೆದಾರ ವಸ್ತುಗಳ ಉದ್ಯಮವನ್ನು ತಮ್ಮದಾಗಿಸಿಕೊಂಡಿವೆ. ಸಾರ್ವಜನಿಕ ವಲಯದ ಮಾಡರ್ನ್ ಬ್ರೆಡ್ ಕಂಪನಿಯೂ ನುಂಗಿ ಹಾಕಲ್ಪಟ್ಟಿದೆ. ಸ್ಮಿತ್ ಲೈನ್ ಬೀಚೆಮ್, ವಿವಾ ಮತ್ತು ಮಾಲ್ಟೋವ ಕಂಪನಿಗಳನ್ನು ಕಬಳಿಸಿದೆ.

### ನಗರೀಕರಣ ಮತ್ತು ವಲಸೆ



ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ನಾಶವಾಗಿ ಶ್ರಮ ಸಾಂದರ್ಭೀಕರಣ ಗೊಳ್ಳು ವುದರೊಂದಿಗೆ ನಗರೀಕರಣವೂ ಚುರುಕುಗೊಂಡಿದೆ. ನಗರೀಕರಣಕ್ಕೆ ಕಾರಣ ನಗರಗಳಲ್ಲಿ ಉದ್ಯಮಗಳು ಹೆಚ್ಚುತ್ತಿರುವುದಲ್ಲ. ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶ ಇಲ್ಲದೆ ಕಟ್ಟಡ ನಿರ್ಮಾಣ ಮುಂತಾದ ಕೆಲಸಗಳಿಗೆ ದಿನಗೂಲಿಗಳಾಗಿ ತೆರಳುವ ಪ್ರಕ್ರಿಯೆ ಇದು. ಹೀಗೆ ನಗರೀಕರಣವೆಂದರೆ ನಗರ ಪ್ರದೇಶದ ಬಡವರ ಹೆಚ್ಚಳ. ನಗರ ವಿಷಯಗಳ ರಾಷ್ಟ್ರೀಯ ಸಂಸ್ಥೆ (National Institute of Urban Affairs) 1998ರಲ್ಲಿ ಪ್ರಕಟಿಸಿರುವ ವರದಿಯ ಪ್ರಕಾರ, ಕಳೆದ ಎರಡು ದಶಕಗಳಲ್ಲಿ ನಗರೀಕರಣದ ಪ್ರಮಾಣ ಆತಂಕಕಾರಿಯಾಗಿದೆ. 1971 ರಿಂದ 1991ರ ವೇಳೆಗೆ ವಲಸೆಯ ಪ್ರಮಾಣ ಶೇ. 15.2 ರಿಂದ 17.4ಕ್ಕೆ ಏರಿದೆ. ಈ ಸಂಖ್ಯೆ ಏರುತ್ತಲೇ ಇದೆ. ನಗರವಾಸಿಗಳ ಸಂಖ್ಯೆ 78.9 ದಶಲಕ್ಷದಿಂದ 159.5 ದಶಲಕ್ಷಕ್ಕೇರಿದೆ. ಆರ್ಥಿಕ ಸುಧಾರಣೆಯ ನಂತರದ ಅವಧಿಯ ಬಗೆಗೆ ವರದಿಗಳಿಲ್ಲವಾದಲೂ ಈ ಸಂಖ್ಯೆ ಹೆಚ್ಚುತ್ತಲೇ ಇದೆ ಎನ್ನುವುದರಲ್ಲಿ ಸಂಶಯವಿಲ್ಲ. ನಗರ ವಾಸಿಗಳ ಸಂಖ್ಯೆಯ ಹೆಚ್ಚಳ ಹಾಗೂ ಆರ್ಥಿಕತೆಯ ಹಿನ್ನಡೆ ಜೀವನೋಪಾಯದ ಅಭದ್ರತೆಗೆ ಎಡೆ ಮಾಡಿಕೊಟ್ಟಿದೆ. ಪರಿಣಾಮವಾಗಿ ಬಡವರು ಅತ್ಯಂತ ಕಡಿಮೆ ದಿನಗೂಲಿಗೆ ಕೆಲಸ ಒಪ್ಪಿಕೊಳ್ಳುತ್ತಾ ಬಡತನ ರೇಖೆಯಿಂದ ಕೆಳಗೆ ಸರಿಯುತ್ತಿದ್ದಾರೆ.




## ಪ್ರಾಕೃತಿಕ ಸಂಪನ್ಮೂಲಗಳು ಮತ್ತು ಉದ್ಯೋಗ ಭದ್ರತೆ

ಪರಿಸರ ವಿನಾಶದೊಂದಿಗೆ ಪ್ರಾಕೃತಿಕ ಸಂಪನ್ಮೂಲಗಳು ದುರ್ಲಭವಾಗಿ, ಅವುಗಳ ಬಳಕೆಯ ವಿಧಾನದಲ್ಲಿ ವ್ಯತ್ಯಯವಾಗಿ ಉದ್ಯೋಗಾವಕಾಶಗಳ ಮೇಲೆ ಪರಿಣಾಮವಾಗುತ್ತದೆ. ಕೆಲವು ಉದಾಹರಣೆಗಳನ್ನು ನೋಡೋಣ.

### ಕೃಷಿ

ಆರ್ಥಿಕ ಸುಧಾರಣೆಗಳ ನಂತರ ಕೃಷಿ ಉತ್ಪಾದನೆ ಕುಂಠಿತವಾಗಿದೆ. 1980-81 ರಿಂದ 90-91 ರವರೆಗಿನ ಅವಧಿಯಲ್ಲಿ ಆಹಾರ ಧಾನ್ಯದ ಉತ್ಪಾದನೆಯಲ್ಲಿ ಶೇ.3.4ರ ದರದಲ್ಲಿ ವೃದ್ಧಿಯಾಯಿತು. 1990-91 ರಿಂದ 97-98 ರವರೆಗೆ ಈ ದರ ಶೇಕಡಾ 1.4ಕ್ಕೆ ಇಳಿಯಿತು. ದ್ವಿದಳ ಧಾನ್ಯಗಳು ಹಾಗೂ ಜೋಳ, ನವಣೆ ಮುಂತಾದ ಬಡವರ ಆಹಾರ ಧಾನ್ಯಗಳ ಉತ್ಪಾದನೆ, ನಕಾರಾತ್ಮಕ ಬೆಳವಣಿಗೆ ಕಂಡು 1.3 ರಿಂದ 0.7 ಕ್ಕೆ ಇಳಿಯಿತು. ಈ ಬೆಳೆಗಳ ಬದಲು ದುಬಾರಿಯಾದ ಹೂಡಿಕೆ ಅಗತ್ಯವಾದ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಯಿತು. ಈ ಬದಲಾವಣೆ ಸಣ್ಣ ರೈತರಿಗೆ ಅಸಾಧ್ಯವಾದ್ದರಿಂದ ಅವರು ತಮ್ಮ ಜಮೀನನ್ನು ಕಳೆದುಕೊಳ್ಳಬೇಕಾಯಿತು.





ಆರ್ಥಿಕ ಸುಧಾರಣಾ ನಂತರದಲ್ಲಿ ಶ್ರಮದ ಸಾಂದರ್ಭೀಕರಣಕ್ಕೆ ಈ ಮೇಲಿನದು ಮುಖ್ಯ ಕಾರಣ. ಬಡ ರೈತರು ಹೊಸ ತಂತ್ರಜ್ಞಾನದ ಪ್ರಯೋಗಗಳನ್ನು ಮಾಡಲಾರರು. ಅಂತರ್ಜಲದ ಮಟ್ಟ ಕುಸಿದು ನೀರೂ ಸಹ ವ್ಯವಸಾಯಕ್ಕೆ ದುರ್ಲಭ. ಶೇಕಡಾ 40ರಷ್ಟು ಸಣ್ಣ ಹಿಡುವಳಿದಾರರ ಭೂಮಿ ಅಪಮೌಲ್ಯವಾಗಿ ರೈತರು ಕೆಲಸಕ್ಕಾಗಿ ವಲಸೆ ಹೋಗಬೇಕಾಗಿದೆ.

### ಕಾಡುಗಳು ಮತ್ತು ನೀರೊಡ್ಡುಗಳು



ಅರಣ್ಯಗಳು ಬಡಜನರಿಗೆ ಉರುವಲು, ಪಶು ಆಹಾರ ಮತ್ತು ಇತರ ಸಂಪನ್ಮೂಲಗಳನ್ನು ಒದಗಿಸುವುದಲ್ಲದೇ ದೇಶದ ಪರಿಸರ ಸಮತೋಲನವನ್ನು ಕಾಪಾಡುತ್ತವೆ. ಭೂಮಿಯಲ್ಲಿ ನೀರನ್ನು ಹಿಡಿದಿಟ್ಟು ಮಣ್ಣಿನ ಸವಕಳಿಯನ್ನು ತಪ್ಪಿಸುತ್ತವೆ. ಆದ್ದರಿಂದ ಮೈದಾನ ಪ್ರದೇಶದಲ್ಲಿ ಶೇಕಡಾ 33 ರಷ್ಟು ಭೂಮಿಯಲ್ಲಿ ಹಾಗೂ ಬೆಟ್ಟ ಪ್ರದೇಶಗಳಲ್ಲಿ ಶೇಕಡಾ 66 ರಷ್ಟು ಅರಣ್ಯಗಳಿರಬೇಕೆಂಬ ತಜ್ಞರ ಸಲಹೆಯಿದೆ. ಆದರೆ ಇದು ನಮ್ಮ ದೇಶದಲ್ಲಿ ಸಾಧ್ಯವಾಗಿಲ್ಲ. 1987 ರಲ್ಲಿ ಶೇಕಡಾ 23.8 ರಷ್ಟು ಭೂ ಭಾಗ ಅರಣ್ಯವೆಂದು ದಾಖಲಾಗಿದ್ದರೆ 1990ರಲ್ಲಿ ಈ ಪ್ರಮಾಣ ಶೇಕಡಾ 19.7ಕ್ಕೆ ಇಳಿಯಿತು.

ಭಾರತ ಅಂಚಿನ ಅರಣ್ಯದಲ್ಲಿ ಶೇಕಡಾ 90 ಭಾಗವನ್ನು ಕಳೆದುಕೊಂಡಿದೆ. ಜಂಟೀ ಅರಣ್ಯ ನಿರ್ವಹಣಾ ಯೋಜನೆಗಳಿದ್ದರೂ ಸಹ ಶೇಕಡಾ 57ರಷ್ಟು ಅರಣ್ಯ ಅಪಾಯದ ಅಂಚಿನಲ್ಲಿದೆ. ಅರಣ್ಯ ವಿನಾಶದ ತಡೆಗೆ ಕಾರ್ಯಕ್ರಮಗಳನ್ನು ರೂಪಿಸದಿದ್ದರೆ ಅದರಿಂದ ನೀರಿನ ಮೂಲ, ವಾತಾವರಣ, ಕೃಷಿ ಭೂಮಿ ಮತ್ತು ಉತ್ಪಾದಕತೆಯ ಮೇಲೆ ಪರಿಣಾಮ ಬೀರುತ್ತದೆ. ಅರಣ್ಯ ನಾಶದಿಂದ ಬಡವರ ಇಂಧನ ಹಾಗೂ ಮೇವಿನ ಸಂಪನ್ಮೂಲದ ಆಧಾರ ತಪ್ಪಿ ಆದಾಯದ ಮೂಲವೊಂದು ಇಲ್ಲವಾಗುತ್ತದೆ.




## ನಿಜವಾದ ವೇತನದ ಇಳಿಕೆ ಮತ್ತು ಹೆಚ್ಚಿದ ಬಡತನ

ಸುಧಾರಣಾ ನಂತರದ ದಿನಗಳಲ್ಲಿ ಕಾರ್ಮಿಕರ ನಿಜ ಆದಾಯದಲ್ಲಿ ಕುಸಿತವಾಗಿದೆ. ಅಂದರೆ ಬಡತನ ಹೆಚ್ಚಿದೆ. ಈಗ ಕೆಲ ಅಂಕಿ ಅಂಶಗಳನ್ನು ನೋಡೋಣ.

1975 : ಶೇಕಡಾ 50ರಷ್ಟು ಮಂದಿ ಬಡತನ ರೇಖೆಗಿಂತ ಕೆಳಗೆ

1997 : ಶೇ.37.2 ರಷ್ಟು ಮಂದಿ ಬಡತನ ರೇಖೆಗಿಂತ ಕೆಳಗೆ

ಏಕೆ?

ಅಂದರೆ ವಾರ್ಷಿಕ ಬಡತನ ನಿವಾರಣೆಯ ಪ್ರಮಾಣ ಕೇವಲ ಶೇಕಡಾ 0.9%. ಇದು ಏಕೆಂದರೆ 1995-97ರ ಅವಧಿಯಲ್ಲಿ ಬಡತನದ ಇಳಿಕೆ ಪ್ರಮಾಣ ಕಡಿಮೆಯಾಯಿತು. ವಾಸ್ತವವಾಗಿ ಬಡತನದ ಹೆಚ್ಚಳವಾಯಿತು. ಈ ಅಂಶಕ್ಕೂ ನಿಜ ಆದಾಯಕ್ಕೂ ಇರುವ ಸಂಬಂಧವನ್ನು ನೋಡೋಣ.

ಇದು ನಿಜವಾದ ಕೂಲಿಗೆ ಯಾವ ರೀತಿ ಸಂಬಂಧ ಕಲ್ಪಿಸುತ್ತದೆ ನೋಡೋಣ

ಇತ್ತೀಚಿನ ಆರ್ಥಿಕ ಸಮೀಕ್ಷೆಯ ಪ್ರಕಾರ 1989-93 ರ ನಡುವೆ ಕೃಷಿ ಕ್ಷೇತ್ರದಲ್ಲಿ ನಿಜ ಆದಾಯ ಶೇಕಡಾ 2.10 ರಷ್ಟು ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿ ಶೇಕಡಾ 2.45ರಷ್ಟು ಇಳಿಕೆ ಕಂಡಿದೆ.



**ಕಹಿ ಸತ್ಯಗಳು**

- ದೇಶದ ನಲವತ್ತು ಕೋಟಿ ಜನ ಬಡತನದಲ್ಲಿ ಬದುಕುತ್ತಾರೆ.
- ಆರು ಕೋಟಿ ಜನ (ದೇಶದ ಜನ ಸಂಖ್ಯೆಯ ಶೇ.16 ರಷ್ಟು) ಮಂದಿಯ ದೈನಂದಿನ ಆದಾಯ ಕೇವಲ ಮೂರು ರೂ.ಗಳು

-ಆಕರ. ಪ್ರಥಮ ಮಾನವ ಅಭಿವೃದ್ಧಿ ವರದಿ.


ಹಸಿವಿನಿಂದ ಸಾಯುವವರ ಸಂಖ್ಯೆ ಹೆಚ್ಚಾಗುತ್ತಿದೆ.

1. 1994 ರಲ್ಲಿ ಮಹಾರಾಷ್ಟ್ರದ ಅಮರಾವತಿಯಲ್ಲಿ 613 ಜನ ಹಸಿವಿನಿಂದ ಸತ್ತರು.
2. 1996 ರಲ್ಲಿ ಈ ಸಂಖ್ಯೆ 829 ಕ್ಕೇರಿತು.
3. ಈಚೆಗೆ ಮಹಾರಾಷ್ಟ್ರ, ಪಂಜಾಬ್ ಮುಂತಾದ ಕಡೆ ಹತ್ತಿ ಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡಿದ್ದು ಹೆಚ್ಚುತ್ತಿರುವ ಬಡತನದ ದ್ಯೋತಕ.





## ಅತ್ಯವಶ್ಯಕ ಸಾಮಗ್ರಿಗಳ ಬೆಲೆ ಹೆಚ್ಚಳ


ಆರ್ಥಿಕ ಸುಧಾರಣೆಯ ನಂತರದ ಅವಧಿಯಲ್ಲಿ ಕೆಳವರ್ಗದ ಬಳಕೆದಾರ ತನ್ನ ನಿಜ ವೇತನದಲ್ಲಿ ಕಡಿತವನ್ನೂ, ಬೆಲೆಗಳಲ್ಲಿ ಹೆಚ್ಚಳವನ್ನೂ ಏಕಕಾಲಕ್ಕೆ ಎದುರಿಸುತ್ತಿದ್ದಾನೆ. ಬಳಕೆದಾರರ ಬೆಲೆ ಸೂಚ್ಯಂಕದ ಪ್ರಕಾರ ಹಣದುಬ್ಬರ ದರ ಎರಡಂಕೆಗೆ ಏರಿದೆ. 1998-99 ರಲ್ಲಿ ಹಣದುಬ್ಬರ ದರ ಶೇ.13.2, ಶೇ.11 ಹಾಗೂ ಶೇ.11.3 ಇದ್ದಿತು. ಹಣದುಬ್ಬರದ ಕಹಿಯನ್ನು ಕಾರ್ಮಿಕರಿಗೆ ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುತ್ತಿದ್ದ ಸಾರ್ವಜನಿಕ ವಿತರಣಾ ವ್ಯವಸ್ಥೆ ಅನಿಶ್ಚಿತತೆಗೊಳಪಟ್ಟಿದೆ



## ಸಾರ್ವಜನಿಕ ವಿತರಣಾ ವ್ಯವಸ್ಥೆ ಬುಡಮೇಲುಗೊಳಿಸುವುದು




ಒಳ್ಳೆಯ ದಿನಗಳಲ್ಲೂ ಕೂಡ ಸಾರ್ವಜನಿಕ ವಿತರಣಾ ವ್ಯವಸ್ಥೆಯ ವ್ಯಾಪ್ತಿ ಮಿತವಾಗಿದ್ದು ಹಳ್ಳಿಗಾಡಿನಲ್ಲಿ ಬಹುತೇಕ ಮಂದಿಯನ್ನು ಅದು ಮುಟ್ಟುತ್ತಿರಲಿಲ್ಲ. 1951ರಲ್ಲಿ ಶೇ.15.3 ಮಂದಿಯನ್ನು ತಲುಪುತ್ತಿದ್ದ ಈ ವ್ಯವಸ್ಥೆ 1995ರಲ್ಲಿ ಕೇವಲ ಶೇ 9.1ರಷ್ಟು ಮಂದಿಗೆ ಮಿತಿಯಾಗಿದೆ. ಈಚೆಗೆ ಈ ವ್ಯವಸ್ಥೆಯ ಮೂಲಕ ಹಂಚಿಕೆಯಾಗುತ್ತಿದ್ದ ಆಹಾರಧಾನ್ಯಗಳ ಬೆಲೆ ಹೆಚ್ಚಿಸಿರುವುದು ಸಮಸ್ಯೆಯನ್ನು ಇನ್ನೂ ತೀವ್ರಗೊಳಿಸಿದೆ. ಈ ವ್ಯವಸ್ಥೆಯ ವ್ಯಾಪ್ತಿಯನ್ನು ಮಿತಿಗೊಳಿಸಲಾಗುತ್ತಿದೆ. ಬಡವರು ಹಸಿವಿನಿಂದ ಬಳಲುತ್ತಿರುವಾಗ ಆಹಾರ ನಿಗಮದ ಗೋದಾಮುಗಳು ಧಾನ್ಯಗಳಿಂದ ತುಂಬಿ ಹರಿಯುತ್ತಿವೆ.. ಗ್ರಾಮೀಣ ಜನರಲ್ಲಿ ಖರ್ಚಿನ ಶೇ. 64ರಷ್ಟು, ನಗರ ವಾಸಿಗಳಲ್ಲಿ ಶೇ.54ರಷ್ಟು ಆಹಾರಕ್ಕಾಗಿಯೇ ವ್ಯಯವಾಗುತ್ತದೆ. ಸೀಮೆಎಣ್ಣೆ, ಅಡಿಗೆ ಅನಿಲದ ಬೆಲೆ ಹೆಚ್ಚಳ ಗಾಯಕ್ಕೆ ಬರೆ ಎಳೆದಂತಾಗಿದೆ.




ಕೇಂದ್ರ ಸರ್ಕಾರ ಗುರಿನಿಗದಿತ ಸಾರ್ವಜನಿಕ ವಿತರಣಾ ಯೋಜನೆಯನ್ನು (Targetted Public Distribution Scheme) ಘೋಷಿಸಿತು. ಬಡತನದ ರೇಖೆಗಿಂತ ಕೆಳಗಿರುವವರಿಗೆ ಸಬ್ಸಿಡಿ ಮೂಲಕ ಆಹಾರ ಧಾನ್ಯಗಳನ್ನು ತಲುಪಿಸುವುದು ಇದರ ಗುರಿ. ರಾಜ್ಯ ಸರ್ಕಾರಗಳೇ ಈ ಮಿತಿಯಲ್ಲಿ ಬರುವ ಕುಟುಂಬಗಳನ್ನು ಗುರುತಿಸುವ ಸ್ವಾತಂತ್ರ್ಯ ಹೊಂದಿದ್ದವು. ಅಂದು ದೆಹಲಿಯಲ್ಲಿ ಮುಖ್ಯ ಮಂತ್ರಿಯಾಗಿದ್ದ ಸಾಹಿಬ್ ಸಿಂಗ್ ವರ್ಮಾ ಅವರ ಪ್ರಕಾರ ಇಡೀ ದೆಹಲಿಯಲ್ಲಿ ಒಂದೇ ಒಂದು ಕುಟುಂಬವೂ ಈ ಯೋಜನೆಗೆ ಅರ್ಹವಾಗಲಿಲ್ಲ. ಮಹಾರಾಷ್ಟ್ರದಲ್ಲಿ ಈ ಯೋಜನೆಗೆ ಅರ್ಹವಾಗಲು ಇರಬೇಕಾದ ವಾರ್ಷಿಕ ಆದಾಯವನ್ನು ರೂ 4,000ಕ್ಕೆ ಮಿತಿಗೊಳಿಸಲಾಯಿತು. ಏಷಿಯಾದ ಅತಿ ದೊಡ್ಡ ಕೊಳಚೆ ಪ್ರದೇಶವಾದ ಮುಂಬಯಿಯ ಧಾರವಿಯಲ್ಲಿ ಈ ಯೋಜನೆಗೆ ಅರ್ಹತೆ ಪಡೆದದ್ದು ಬೆರಳೆಣಿಕೆಯಷ್ಟು ಕುಟುಂಬಗಳು ಮಾತ್ರ. ಬೆಲೆಗಳು ಹೆಚ್ಚಳ ಹಾಗೂ ಹಣದುಬ್ಬರದಿಂದ ಹೆಚ್ಚು ಹೆಚ್ಚು ಜನರಿಗೆ ಕಡಿಮೆ ಬೆಲೆಯ ಆಹಾರಧಾನ್ಯ ಲಭ್ಯವಾಗಬೇಕಾದಾಗ ಹೆಚ್ಚು ಹೆಚ್ಚು ಮಂದಿಯನ್ನು ಈ ಯೋಜನೆಯಿಂದ ಹೊರಗಿಡಲಾಗುತ್ತಿದೆ. ಭಾರತದ ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಇದರ ಪರಿಣಾಮ ಸ್ಪಷ್ಟ. ಕುಟುಂಬದ ಮಹಿಳೆಯರು ಹೊಟ್ಟೆ ತುಂಬಾ ಊಟ ಮಾಡಲಾಗದೇ ಹಸಿವು ಮತ್ತು ಅಪೌಷ್ಟಿಕತೆಗೆ ಗುರಿಯಾಗುತ್ತಾರೆ.




## ಉಳಿತಾಯ ಮತ್ತು ಅನಿರೀಕ್ಷಿತ ಪರಿಸ್ಥಿತಿಗಳನ್ನೆದುರಿಸುವ ಸಾಮರ್ಥ್ಯ

ಬೆಲೆಗಳ ಹೆಚ್ಚಳ, ನಿಜ ಆದಾಯದಲ್ಲಿ ಇಳಿಕೆ, ಬಡತನದ ಇಳಿಕೆಯ ಪ್ರಮಾಣ ಕುಂಠಿತವಾಗುವುದು. ಇವುಗಳಿಂದಾಗಿ ಒಬ್ಬ ಸಾಮಾನ್ಯ ವ್ಯಕ್ತಿಯ ಉಳಿತಾಯದ ಸಾಮರ್ಥ್ಯ ಅತಿ ಕಡಿಮೆ. ಸಂಘಟಿತ ಕ್ಷೇತ್ರದಲ್ಲಿ ಭವಿಷ್ಯ ನಿಧಿಯ ರೂಪದಲ್ಲಿ ಕಡ್ಡಾಯ ಉಳಿತಾಯವಾದರೂ ಆಗುತ್ತದೆ. ಆದರೆ ಈ ಸಾಧ್ಯತೆ ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗಿಲ್ಲ. ಈ ಕ್ಷೇತ್ರದ ಕಾರ್ಮಿಕರ ಉಳಿತಾಯದ ಸರಿಯಾದ ಲೆಕ್ಕಾಚಾರವಿಲ್ಲ. ಬೆಲೆಗಳ ಹೆಚ್ಚಳ ಹಾಗೂ ನಿಜ ಆದಾಯದ ಇಳಿಕೆಯ ಸಂದರ್ಭದಲ್ಲಿ ಈ ಕ್ಷೇತ್ರದ ಕಾರ್ಮಿಕರಿಗೆ ಉಳಿತಾಯದ ಸಾಧ್ಯತೆ ಕಡಿಮೆ ಎಂದೇ ಹೇಳಬಹುದು.




ನಗರ ಪ್ರದೇಶಗಳಲ್ಲಿ ಬಡವರು ಆಸ್ಪತ್ರೆ ಖರ್ಚು ಔಷಧಗಳಿಗಾಗಿ ಸಾಲ ಮಾಡುತ್ತಾರೆ. ಸಂಘಟಿತ ಕ್ಷೇತ್ರದಲ್ಲೂ ಆರ್ಥಿಕ ಸುಧಾರಣೆಯ ಪರಿಣಾಮವಾಗಿ ಪೆನ್ಷನ್ ಹಾಗೂ ಭವಿಷ್ಯ ನಿಧಿ ಯೋಜನೆಗಳು ಅಪಾಯಕ್ಕೀಡಾಗಿವೆ.






ಉಳಿತಾಯವೂ ಇಲ್ಲದೆ, ಸಾಮಾಜಿಕ ಕ್ಷೇತ್ರವೂ ದುರ್ಬಲವಾದಾಗ ಬಡವರು ಅನಾರೋಗ್ಯ, ಪ್ರಾಕೃತಿಕ ಅವಘಡ, ಹಾಗೂ ಇತರ ಆಕಸ್ಮಿಕಗಳನ್ನು ನಿಭಾಯಿಸಲಾರರು. ಕ್ಷಾಮವಾಗಲೀ, ಚಂಡಮಾರುತವಾಗಲೀ, ಸಾಂಕ್ರಾಮಿಕವಾಗಲೀ ಬಡವರು ಬಹಳ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ.

## ಆರೋಗ್ಯದ ಮೇಲೆ ಈಚಿನ ಬೆಳವಣಿಗೆಗಳ ಪರಿಣಾಮ


ನಾವು ಆರ್ಥಿಕ ಸುಧಾರಣೆಯ ನಂತರದ ಅವಧಿಯಲ್ಲಿ ಜನರಿಗೆ ತಮ್ಮ ಕುಟುಂಬಕ್ಕೆ ಒಂದು ಸುಭದ್ರ ಹಾಗೂ ನೆಮ್ಮದಿಯ ಬದುಕನ್ನು ನೀಡುವುದು ಕಠಿಣವಾಗುತ್ತಿದೆ ಎಂಬುದನ್ನು ನೋಡಿದ್ದೇವೆ.

ಜನಗಳ ಹಾಗೂ ಸಮಾಜದ ಒಟ್ಟು ಆರೋಗ್ಯದ ಮೇಲೆ ಇದರ ಪರಿಣಾಮ ಏನು?

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ ಇದು. ಇಡೀ ಜನತೆಯ ಮೇಲೆ ಆರ್ಥಿಕ ಸುಧಾರಣೆಗಳ ಪ್ರತಿಕೂಲ ಪರಿಣಾಮವಾಗುತ್ತದೆಯಾದರೂ ಸುಧಾರಣೆಗಳ ಬಿಸಿ ಮಹಿಳೆಯರನ್ನು ತೀವ್ರವಾಗಿ ತಟ್ಟುತ್ತದೆ.

### ಪೌಷ್ಟಿಕತೆಯ ಮೇಲೆ ಪರಿಣಾಮ

ಉದ್ಯೋಗ ಹಾಗೂ ಗಳಿಕೆಯ ಭದ್ರತೆ ರಾಷ್ಟ್ರದ ಪೌಷ್ಟಿಕತೆಯ ಸ್ಥಿತಿಯ ಮೇಲೆ ಗಂಭೀರ ಪರಿಣಾಮವನ್ನುಂಟು ಮಾಡುತ್ತದೆ.




ಇದರ ಪರಿಣಾಮ ತುಂಬಾ ಕಡಿಮೆ ತೂಕದ, ದುರ್ಬಲ ಶಿಶುಗಳ ಜನನ.

> ಮಧುರಾ ಸ್ವಾಮಿನಾಥನ್ ಅವರ ಅಧ್ಯಯನ ವರದಿ.
> 1991-92ರಲ್ಲಿ ಶೇಕಡಾ 44.2 ಮಂದಿಗೆ ದಿನಕ್ಕೊಂದು ಹೊಟ್ಟೆ ತುಂಬುವ ಊಟ ಸಿಗುತ್ತಿರಲಿಲ್ಲ.
> 1993-94 ರಲ್ಲಿ ಈ ಸಂಖ್ಯೆ ಶೇಕಡಾ 47.7 ಕ್ಕೇರಿತು.

ತೀವ್ರ ಅಪೌಷ್ಟಿಕತೆಗೆ ಗುರಿಯಾದ ಗರ್ಭಿಣಿಯರಲ್ಲಿ ಶೇಕಡಾ 52 ರಷ್ಟು ಮಂದಿ, ಸಾಧಾರಣ ಅಪೌಷ್ಟಿಕತೆಗೆ ಗುರಿಯಾದವರಲ್ಲಿ ಶೇಕಡಾ 42.2 ರಷ್ಟು ಮಂದಿ, ಪೋಷಣೆಯ ಕೊರತೆಗೆ ಗುರಿಯಾದವರಲ್ಲಿ ಶೇಕಡಾ 37.1ರಷ್ಟು ಮಂದಿ ಅತಿ ಕಡಿಮೆ ತೂಕದ ಶಿಶುಗಳಿಗೆ ಜನ್ಮ ನೀಡುತ್ತಾರೆ.




ಶಾಲೆಗೆ ಸೇರುವ ಮುಂಚಿನ ಅವಧಿಯಲ್ಲಿ ನಗರ ಪ್ರದೇಶದಲ್ಲಿನ ಮಕ್ಕಳ ಪೋಷಣೆಯ ಪರಿಸ್ಥಿತಿಯ ಅಧ್ಯಯನದಿಂದ ತಿಳಿದು ಬರುವ ಅಂಶವೆಂದರೆ ಕೇವಲ ಶೇಕಡಾ 10ರಷ್ಟು ಮಕ್ಕಳಿಗೆ ಮಾತ್ರ ಸರಿಯಾದ ಪೋಷಕಾಂಶಗಳು ದೊರೆಯುತ್ತಿವೆ. ಉಳಿದ ಮಕ್ಕಳಿಗೆ ಸಾಮಾನ್ಯದಿಂದ ತೀವ್ರವಾದ ಪೋಷಣೆಯ ಕೊರತೆ ಕಂಡುಬರುತ್ತದೆ. ಸುಧಾರಣಾ ನಂತರದ ಅವಧಿಯಲ್ಲಿ ತೀವ್ರ ಅಪೌಷ್ಟಿಕತೆಯ ಇಳಿಕೆಯ ದರ ಶೇ.1.5 ಆಗಿದೆ. ಆದರೆ 1979 ರಿಂದ 1990ರವರೆಗೆ ಈ ದರ ಶೇ.4ರಷ್ಟಿತ್ತು.



## ಕೆಲಸದ ಪರಿಸ್ಥಿತಿಗಳು

ಆರ್ಥಿಕ ಸುಧಾರಣೆಯ ಅತ್ಯಂತ ವಿನಾಶಕಾರಿಯಾದ ಪರಿಣಾಮವೆಂದರೆ ಸರ್ಕಾರ ಸಾಮಾಜಿಕ ಕ್ಷೇತ್ರಗಳಿಂದ ಹಿಂದೆ ಸರಿದಿರುವುದು. ಇದರ ಒಟ್ಟು ಅರ್ಥವೆಂದರೆ

1. ಸರ್ಕಾರ ಸಂಘಟಿತ ವಲಯದ ಶ್ರಮಿಕರಿಗೆ ಯಾವುದೇ ಸಮಾಜ ಕಲ್ಯಾಣ ಸೇವೆಯನ್ನು ಒದಗಿಸುವುದಿಲ್ಲ.
2. ಸಂಘಟಿತ ಕ್ಷೇತ್ರದ ಕೆಲವೇ ಮಂದಿಗೆ ಮಾತ್ರ ಸಾಮಾಜಿಕ ಭದ್ರತಾ ಸೌಲಭ್ಯಗಳು ದೊರೆಯುತ್ತವೆ.
3. ದಾಖಲೆಗಳಿಗೊಳಪಡದ ಶ್ರಮಿಕರ ದುಡಿಮೆಯ ಅವಧಿ ಹಾಗೂ ವೇತನ ಕೆಲಸದ ಪರಿಸ್ಥಿತಿ ಇವುಗಳ ಮೇಲೆ ಯಾವುದೇ ನಿಯಂತ್ರಣವಿರುವುದಿಲ್ಲ.

ಕಾನೂನುಗಳ ಹೊರತಾಗಿಯೂ ಅಪಾಯಕಾರೀ ಉದ್ದಿಮೆಗಳಲ್ಲಿ ದುಡಿಯುವ ಬಾಲಕಾರ್ಮಿಕರ ಪರಿಸ್ಥಿತಿ ಆತಂಕಕಾರಿಯಾಗಿದೆ. ಬೆಂಕಿ ಅನಾಹುತ ಹಾಗೂ ರಾಸಾಯನಿಕಗಳಿಂದ ಬಾಲಕಾರ್ಮಿಕರು ಸಾಯುವ ವರದಿಗಳು ಆಗಾಗ ಬರುತ್ತಿರುತ್ತವೆ. ಆದ್ದರಿಂದ ಬೇಕಾಗಿರುವುದು ಸರ್ಕಾರೀ ನಿಯಂತ್ರಣದ ನಿರ್ಮೂಲವಲ್ಲ. ಇನ್ನೂ ಹೆಚ್ಚು ಮತ್ತು ಪರಿಣಾಮಕಾರಿಯಾದ ನಿಯಂತ್ರಣ.

ಅಸಂಘಟಿತ ವಲಯ ಹಿಗ್ಗುತ್ತಾ ಹೋದಂತೆ ಮಹಿಳೆಯರ ಬವಣೆಯೂ ಹೆಚ್ಚುತ್ತಿದೆ. ನಗರ ವ್ಯವಹಾರಗಳ ರಾಷ್ಟ್ರೀಯ ಸಂಸ್ಥೆಯ (National Institute of Urban Affairs) ಪ್ರಕಾರ ಮಹಿಳೆಯರು ಮನೆಯ ಹೊರಗೆ 7-8 ಗಂಟೆಗಳ ಕಾಲ ಹಾಗೂ ಮನೆಯೊಳಗೆ 4 ಗಂಟೆಗಳಿಗಿಂತ ಹೆಚ್ಚು ಕಾಲ ಹೀಗೆ ಒಟ್ಟು 12 ಗಂಟೆಗಳಿಗೂ ಹೆಚ್ಚು ಕಾಲ ಕೆಲಸ ಮಾಡುತ್ತಾರೆ. ಹೀಗೆ ಮಹಿಳೆಯರಿಗೆ ಮನೆಯ ಒಳಗೆ, ಹೊರಗೆ ಮತ್ತು ಮಕ್ಕಳ ಪಾಲನೆಯಲ್ಲಿ ಹೀಗೆ ಮೂರು ರೀತಿಯ ಕೆಲಸದ ಹೊರೆ ಬೀಳುತ್ತದೆ. ಎಷ್ಟೋ ಮಹಿಳೆಯರಿಗೆ ಹೆರಿಗೆ ರಜೆ ಸೌಲಭ್ಯವಿರುವುದಿಲ್ಲ. ಅವರು ಮಗು ಜನಿಸಿದ ಒಂದು ತಿಂಗಳೊಳಗೇ ದುಡಿಯಲು ಆರಂಭಿಸಬೇಕು. ಇದು ಮಗುವಿನ ಆರೋಗ್ಯಕ್ಕೂ ಹಾನಿಕರ. ಇಂದಿನ ಸಣ್ಣ ಕುಟುಂಬದ ವ್ಯವಸ್ಥೆಯಲ್ಲಿ, ಇತರ ಒತ್ತಡಗಳಲ್ಲಿ, ಮಹಿಳೆಯರಿಗೆ ಎಂದಿಗಿಂತ ಹೆಚ್ಚು ಸಾಂಸ್ಥಿಕ ಬೆಂಬಲ ಬೇಕಾಗುತ್ತದೆ.





ಉದ್ಯೋಗ ಮತ್ತು ವೇತನ ಭದ್ರತೆ ಒಂದು ರಾಷ್ಟ್ರದ ಮತ್ತು ಜನರ ಆರೋಗ್ಯದ ಮೇಲೆ ಯಾವ ರೀತಿಯ ಪರಿಣಾಮ ಉಂಟು ಮಾಡುತ್ತದೆನ್ನುವುದಕ್ಕೆ ಈ ಮೇಲಿನವು ಕೆಲವು ಉದಾಹರಣೆಗಳು ಅಷ್ಟೆ.

## ಬಡತನ ನಿವಾರಣೆ

### ಸರ್ಕಾರೀ ಯೋಜನೆಗಳು ಮತ್ತು ಧನವಿನಿಯೋಗ

1997ರವರೆಗೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಮತ್ತು ಜವಾಹರ್ ರೋಜ್ಗಾರ್ ಯೋಜನೆಗಳು ಬಡತನ ನಿವಾರಣೆಯ ಮುಖ್ಯ ಯೋಜನೆಗಳಾಗಿದ್ದವು. ಆದರೆ ಒಂದು ಕೇಂದ್ರೀಕೃತ ವ್ಯವಸ್ಥೆಯಿಂದಾಗಿ ಈ ಯೋಜನೆಗಳು ಗುರಿಯನ್ನು ಮುಟ್ಟಲಿಲ್ಲವೆಂದು ಭಾವಿಸಲಾಯಿತು. ಈ ಯೋಜನೆಗಳ ಮುಖ್ಯ ಗುರಿ ಉದ್ಯೋಗಗಳ ಸೃಷ್ಟಿಯ ಮೂಲಕ ಗ್ರಾಮೀಣ ಅಭಿವೃದ್ಧಿ ಯನ್ನು ಸಾಧಿಸುವುದು.




1997ರಲ್ಲಿ ಈ ಯೋಜನೆಗಳನ್ನು ಕ್ರೋಢೀಕರಿಸಿ ಸ್ವರ್ಣಜಯಂತಿ ರೋಜ್‌ಗಾರ್ ಯೋಜನಾ ಆರಂಭಿಸಲಾಯಿತು. ಇದರ ಗುರಿ ಸ್ವಸಹಾಯ ಗುಂಪುಗಳಿಗೆ ಆರ್ಥಿಕ ನೆರವು ನೀಡಿ ಅವುಗಳು ಸ್ವಾವಲಂಬಿಯಾದ ಸಣ್ಣ ಉದ್ಯಮಗಳನ್ನು ನಡೆಸುವುದು. ಇದರ ಮುಖ್ಯ ಗುರಿಯೆಂದರೆ ಸರ್ಕಾರ ಸಮಾಜ ಕಲ್ಯಾಣ ಕ್ಷೇತ್ರಗಳಿಂದ
ಹಿಂದೆಗೆದ ಮೇಲೆ ಜನಗಳು ಸ್ವಾವಲಂಬಿಗಳಾಗಿರಲು ಪ್ರೇರೇಪಿಸುವುದು. ಉದಾಹರಣೆಗೆ 1999-2000 ಮುಂಗಡ ಪತ್ರದಲ್ಲಿ ಗ್ರಾಮೀಣ ಅಭಿವೃದ್ಧಿಗೆ ಹಿಂದಿನ ಸಲ ನಿಗದಿಪಡಿಸಿದ ಹಣದಲ್ಲಿ ಶೇಕಡಾ ಆರರಷ್ಟು ಕಡಿತ ಮಾಡಲಾಯಿತು. ನಗರ ಪ್ರದೇಶದ ಬಡತನ ನಿವಾರಣಾ ಯೋಜನೆಗಳಿಗೆ ನೀಡುವ ಹಣದಲ್ಲಿ ಶೇಕಡಾ 13 ರಷ್ಟು ಖೋತಾ ಮಾಡಲಾಯಿತು.

> 1999-2000ದ ಬಜೆಟ್ ಪ್ರಕಾರ ಸರ್ಕಾರವು ಗ್ರಾಮೀಣ ಪರಿವರ್ತನೆಗಾಗಿ ಸಣ್ಣ ಉದ್ಯಮಗಳನ್ನು ರೂಪಿಸಲು ನಬಾರ್ಡ್ ಮೂಲಕ 50 ಕೋಟಿ ರೂಪಾಯಿಗಳನ್ನು ನೀಡಲಿದೆ.
>
> ಭಾರತ 5 ಲಕ್ಷ ಹಳ್ಳಿಗಳನ್ನೂ 40 ಸಾವಿರ ಪಂಚಾಯತಿಗಳನ್ನೂ ಹೊಂದಿದೆ. ಈ ಯೋಜನೆಯನ್ನು ಪ್ರಾರಂಭದಲ್ಲಿ ನೂರು ಜಿಲ್ಲೆಗಳಲ್ಲಿ ಜಾರಿಗೆ ತರಲಾಗುವುದು. ಅಂದರೆ ಸುಮಾರು 10 ಸಾವಿರ ಪಂಚಾಯ್ತಿಗಳಲ್ಲಿ ಹಾಗಾದರೆ ಪ್ರತಿ ಪಂಚಾಯ್ತಿಗೆ ಸಿಗುವ ಮೊತ್ತ ಕೇವಲ 50 ಸಾವಿರ ರೂಗಳು ಪಂಚಾಯಿತಿಯ ಪ್ರತಿ ಹಳ್ಳಿಗೆ ಸಿಗಬಹುದಾದ ಮೊತ್ತ 5 ಸಾವಿರದಿಂದ 10 ಸಾವಿರ ರೂಗಳು. ಇಷ್ಟು ಕಡಿಮೆ ಹಣದಿಂದ ಯಾವ ರೀತಿಯ ಯೋಜನೆಗಳು ಸಾಧ್ಯವಾಗಬಹುದು ಎಂಬುದು ಅರಿವಿಗೆ ಮೀರಿದ್ದು.
>
> ಆಕರ - ಬದಲಿ ಆರ್ಥಿಕ ಸಮೀಕ್ಷೆ 1999.




ಅಧ್ಯಾಯ - 6

# ಹಿಂತಿರುಗಿ ಹೋರಾಡೋಣ

## ಜೀವನೋಪಾಯಕ್ಕಾಗಿ ಪರ್ಯಾಯ ಮಾರ್ಗಗಳ ನಿರ್ಮಾಣ

### ಕೇಂದ್ರೀಕರಣ

ಜೀವನೋಪಾಯದ ರಂಗದಲ್ಲಿ ಸಮುದಾಯದ ಕ್ರಿಯೆಗಳಿಗೆ ಅಥವಾ ಜನರ ಸ್ವಯಂ ಪ್ರೇರಿತ ಕ್ರಿಯೆಗಳಿಗೆ ನಾವು ಯೋಜನೆಯನ್ನು ತಯಾರಿಸುವಾಗ ಅಂತಹ ಕ್ರಿಯೆಗಳು ಅಸಂಘಟಿತ ಕ್ಷೇತ್ರದಲ್ಲಿಯೇ ಕೇಂದ್ರೀಕರಣಗೊಳ್ಳುವುದು ಬಹು ಅವಶ್ಯವಾದುದು.



ಏಕೆ?

ಏಕೆಂದರೆ

ಕೈಗಾರಿಕೀಕರಣದ ಫಲವಾದ ಬೆಳವಣಿಗೆ ಅಥವಾ ಸಂಘಟಿತ ಕೈಗಾರಿಕಾ ಕ್ಷೇತ್ರದ ಬೆಳವಣಿಗೆ ಉದ್ಯೋಗದ ಬೆಳವಣಿಗೆಗೆ ಮೂಲವಾಗಿಲ್ಲ.

ತೊಂಬತ್ತರ ದಶಕದ ಔದ್ಯೋಗಿಕ ರಂಗದ ಚಿತ್ರವನ್ನು ನೋಡೋಣ. ಈ ಕಾಲದಲ್ಲಿ ಜನಸಂಖ್ಯೆ ಪ್ರತಿ ವರ್ಷ ಶೇಕಡಾ 1.8% ಹೆಚ್ಚಾದರೆ ಕಾರ್ಮಿಕರ ಸಂಖ್ಯೆ ಶೇಕಡಾ 2ರಷ್ಟು ಹೆಚ್ಚಾಯಿತು, ಆದರೆ ಎಲ್ಲಾ ಕ್ಷೇತ್ರಗಳಲ್ಲಿಯೂ ಉದ್ಯೋಗದ ಬೆಳವಣಿಗೆಯ ದರ ಶೇಕಡಾ 1ಕ್ಕಿಂತಲೂ ಕಡಿಮೆಯಾಗಿತ್ತು. 1998ರ ಹೊತ್ತಿಗೆ ಮುಖ್ಯ ಕಾರ್ಮಿಕರ ಸಂಖ್ಯೆ 33.3 ಕೋಟಿಯನ್ನು ತಲುಪಬೇಕಾಗಿತ್ತು, ಆದರೆ ಈ ಸಮಯದಲ್ಲಿ ಸಂಘಟಿತ ಕ್ಷೇತ್ರದಲ್ಲಿ ಉದ್ಯೋಗ 26.8 ಕೋಟಿಯಿಂದ 28.3 ಕೋಟಿಗೆ ಹೆಚ್ಚಾದ ಹಾಗೆ ಕಂಡು ಬಂದರೂ, ಒಟ್ಟು ಕಾರ್ಮಿಕ ಶಕ್ತಿ 9.4% ರಿಂದ 8.5%ಗೆ ಇಳಿಯಿತು. ತೊಂಭತ್ತರ ದಶಕ ಮಾರುಕಟ್ಟೆ ಪ್ರೇರಿತ ಜಾಗತೀಕರಣವನ್ನಾಧರಿಸಿದ ದಶಕವೆಂದು ಬೀಗಿದರೂ ಪರಿಸ್ಥಿತಿ ಹೀಗಿತ್ತು.

ಹಾಗಾದರೆ ಉಳಿದ ಕೋಟ್ಯಾಂತರ ಜನ ಎಲ್ಲಿ ಉದ್ಯೋಗವನ್ನು ಕಂಡುಕೊಂಡರು? ಅದು ಅಸಂಘಟಿತ ಕ್ಷೇತ್ರದಲ್ಲಿ. ಆದ್ದರಿಂದ ಅಭ್ಯುದಯಕ್ಕೆ ಪರ್ಯಾಯ ಮಾರ್ಗಗಳ ನಿರ್ಮಾಣಕ್ಕೆ ನಾವು ಈ ಕ್ಷೇತ್ರದಲ್ಲಿ ಕೆಲಸ ಮಾಡುವುದು ಅಗತ್ಯವಾಗಿದೆ. ಈ ಕ್ಷೇತ್ರ ಮಾತ್ರ ಪ್ರತಿಯೊಬ್ಬರಿಗೂ ಗೌರವಯುತವಾದ ಜೀವನೋಪಾಯವನ್ನು ನೀಡಬಲ್ಲದಾಗಿದೆ.

### ಸಣ್ಣ ಕ್ಷೇತ್ರಗಳ ಪುನರ್ ಪರಿಕಲ್ಪನೆ

1. ಜೀವನೋಪಾಯಗಳನ್ನು ಒದಗಿಸುವುದೆಂದರೆ ಅಸಂಘಟಿತ ಸಣ್ಣ ಕ್ಷೇತ್ರಗಳನ್ನು ಶಕ್ತಿಯುತವಾದ ಸಂಘಟಿತ ಕ್ಷೇತ್ರಗಳನ್ನಾಗಿ ಪರಿವರ್ತಿಸುವುದು. ಅಲ್ಲದೆ ಈ ಕ್ಷೇತ್ರಗಳು ಜಾಗತಿಕ ಬಹುರಾಷ್ಟ್ರೀಯ ಬಂಡವಾಳಶಾಹಿಗಳ ಸ್ಪರ್ಧೆಯನ್ನು ಅರಗಿಸಿಕೊಂಡು, ಇದನ್ನು ಹೊಟ್ಟೆಪಾಡಿಗಾಗಿ ನಂಬಿದ ಜನರಿಗೆ ಗೌರವಯುತವಾದ ಜೀವನವನ್ನು ನೀಡಲು ಸಮರ್ಥವಾಗುವುದು.
2. ವಸ್ತು ಮತ್ತು ಸೇವೆಗಳನ್ನು ಉತ್ಪಾದಿಸುವ ಸಣ್ಣ ಉದ್ಯಮಗಳನ್ನು ಕೇವಲ ಬಡತನವನ್ನು ನಿವಾರಿಸುವ ಕ್ಷೇತ್ರಗಳನ್ನಾಗಿ ನೋಡದೆ ಭವಿಷ್ಯದ ಆರ್ಥಿಕ ಬೆಳವಣಿಗೆಯ ಬೀಜಗಳನ್ನಾಗಿ ನೋಡುವುದು. ಸಣ್ಣ ಕ್ಷೇತ್ರಗಳು ದೊಡ್ಡ ಕ್ಷೇತ್ರಗಳಾಗಿ, ಕೊನೆಗೆ ಜಾಗತಿಕ ಕ್ಷೇತ್ರಗಳಾಗಿ ಬೆಳೆಯುವ ಸಾಧ್ಯತೆಗಳನ್ನು ಪರಿಶೀಲಿಸುವುದು.

3. ಸಣ್ಣ ಹೂಡಿಕೆಗಳ ಬೃಹತ್ ಜಾಲದ ಇಂತಹ ನಿರ್ಮಾಣಕ್ಕೆ ದೊಡ್ಡ ಪ್ರಮಾಣದ ಪರಿಣತಿಯ ಅಗತ್ಯವಿದೆ. ಉತ್ತಮ ಹಣಕಾಸಿನ ನಿರ್ವಹಣೆ, ಉತ್ತಮ ಮಾರುಕಟ್ಟೆ ಮತ್ತು ಉತ್ತಮ ತಾಂತ್ರಿಕತೆಗಾಗಿ ಉತ್ತಮ ಪರಿಣತಿಯನ್ನು ಹೇಗೆ ನಿರ್ಮಾಣಮಾಡಬಹುದೆಂಬುದೇ ನಮ್ಮ ಮುಂದಿರುವ ದೊಡ್ಡ ಸವಾಲು.
4. ಸಣ್ಣ ಕ್ಷೇತ್ರಗಳಿಗೆ ಮಾರುಕಟ್ಟೆಯನ್ನು ನಿರ್ಮಿಸಲು, ದೊಡ್ಡ ಬಂಡವಾಳದಾರರು ಅವುಗಳ ಮೇಲಿರಿಸಿರುವ ಹಿಡಿತವನ್ನು ತಪ್ಪಿಸುವುದು ಮತ್ತು ಹೊಸ ವಸ್ತುಗಳ ಪುನರ್ವಿಂಗಡನೆಯಿಂದ ಹೊಸ ಮಾರುಕಟ್ಟೆಗಳನ್ನು ನಿರ್ಮಾಣ ಮಾಡುವುದು ಅವಶ್ಯ. ದೊಡ್ಡ ಬಂಡವಾಳದಾರರ ಪರವಾಗಿರುವ ಮಾಧ್ಯಮಗಳ ನಿಲುವನ್ನು, ಗ್ರಾಹಕ ಶಿಕ್ಷಣ, ಉತ್ತಮ ಗುಣಮಟ್ಟ, ಸುಲಭ ಬೆಲೆ ಮತ್ತು ಉತ್ತಮ ಗ್ರಾಹಕ ಸೇವೆಯಿಂದ ಎದುರಿಸುವುದು.

### ಬಡತನ ನಿರ್ಮೂಲನ ಯೋಜನೆಗಳ ಪುನರ್ವಿನ್ಯಾಸ

ಬಡಜನರನ್ನು ಬಡತನ ರೇಖೆಯಿಂದ ಮೇಲೆತ್ತುವ ಹಲವಾರು ರಾಜ್ಯ ಮತ್ತು ಕೇಂದ್ರ ಸರ್ಕಾರದ ಬಡತನ ನಿರ್ಮೂಲನ ಯೋಜನೆಗಳನ್ನು ಪುನಶ್ಚೇತನಗೊಳಿಸುವುದು ಬಹು ಅವಶ್ಯವಾಗಿದೆ. ಈ ಯೋಜನೆಗಳಲ್ಲಿ ಹೂಡಿರುವ ಹಣ ಅತ್ಯಲ್ಪವೇನಲ್ಲ. ಆದರೆ ಈ ಯೋಜನೆಗಳನ್ನು ಜಾಣತನದಿಂದ ಅನುಷ್ಠಾನಗೊಳಿಸಿಲ್ಲವಷ್ಟೆ. ಹೀಗಾಗಿ ಕೆಲವೇ ಕೆಲವು ಜನರನ್ನು ಬಡತನದ ರೇಖೆಯಿಂದ ಮೇಲೆತ್ತುವುದು ಈ ಯೋಜನೆಗಳಿಗೆ ಸಾಧ್ಯವಾಗಿದೆ. ಸರ್ಕಾರದ ಸಬ್ಸಿಡಿಗಳು, ಬ್ಯಾಂಕ್ ಸಾಲಗಳು ಮತ್ತು ವೈಯುಕ್ತಿಕ ಬಳಕೆಗಳ ನ್ಯಾಯಯುತ ಮತ್ತು ಜಾಣತನದ ಬಳಕೆಯಿಂದ ಸಣ್ಣ ಮತ್ತು ಮಧ್ಯಮ ಸಮುದಾಯ ಹೂಡಿಕೆಗಳನ್ನು ವ್ಯವಸ್ಥೆಗೊಳಿಸುವುದು ಸಾಧ್ಯ. ಆದರೆ ಇದಕ್ಕೆ ಅವಶ್ಯಕವಾದ ತಾಂತ್ರಿಕ ಪರಿಣತಿ, ಮಾರುಕಟ್ಟೆ ಮತ್ತು ನಿರ್ವಹಣೆಯ ಸಹಾಯವನ್ನು ನೀಡುವುದು ಅಗತ್ಯ.


### ಸಂಘಟಿಸುವುದು ಮತ್ತು ಜಾಲಗಳನ್ನು ನಿರ್ಮಿಸುವುದು

ಈ ತರಹದ ಹೂಡಿಕೆಗಳ ದೊಡ್ಡ ಜಾಲದ ನಿರ್ಮಾಣಕ್ಕೆ ಸಂಘಟನೆಗಳ ಜಾಲದ ನಿರ್ಮಾಣದ ಅಗತ್ಯವಿದೆ. ಈ ಜಾಲಗಳು ಭೌಗೋಳಿಕವಾಗಿರಬಹುದು. ಸ್ತ್ರೀಯರು, ದಲಿತರು, ಕೃಷಿಕಾರ್ಮಿಕರು ಮತ್ತು ರೈತರು ಇಂತಹ ಜಾಲಗಳ ವೇದಿಕೆಯಾಗಬಹುದು. ಇತ್ತೀಚಿನ ದಿನಗಳಲ್ಲಿ ಸ್ತ್ರೀಯರ ಸಣ್ಣ ಉಳಿತಾಯದ ಗುಂಪುಗಳ ಮಹತ್ವ ಬೆಳಕಿಗೆ ಬಂದಿದೆ. ಈ ಗುಂಪುಗಳು ಸ್ತ್ರೀಯರ ಸಣ್ಣಪುಟ್ಟ ಕೌಟುಂಬಿಕ ಸಾಲದ ಅಗತ್ಯಗಳನ್ನು ಪೂರೈಸುವುದರ ಜೊತೆಗೆ ಗೃಹಕೈಗಾರಿಕೆಗಳಿಗೆ ಬೇಕಾದ ಧನಸಹಾಯ ನೀಡುತ್ತಿವೆ. ಬಡ ಸ್ತ್ರೀಯರು ತಮ್ಮದೇ ಆದ ರೀತಿಯಲ್ಲಿ ಸ್ವಾವಲಂಬಿಗಳಾಗಲು, ಹಣಕಾಸಿನ ಪರಿಣತಿಯನ್ನು ಗಳಿಸಲೂ ಈ ಗುಂಪುಗಳು ನೆರವಾಗಿವೆ. ಈ ಸಾಮಾನ್ಯ ತತ್ವಗಳನ್ನು ಆಧರಿಸಿದ ಇನ್ನೂ ಹಲವು ಇಂತಹ ಸಂಘಟನೆಗಳನ್ನು ಹುಟ್ಟುಹಾಕುವುದು ಸಾಧ್ಯವಿದೆ. ಗುಜರಾತ್ ಮತ್ತು ಇನ್ನಿತರ ರಾಜ್ಯಗಳಲ್ಲಿನ ಇಂತಹ ಮಾದರಿಗಳನ್ನು ಅಭ್ಯಾಸ ಮಾಡಿ ಅವುಗಳನ್ನು ಬೇರೆಕಡೆಗಳಲ್ಲೂ ಸೂಕ್ತ ಮಾರ್ಪಾಡಿನೊಂದಿಗೆ ಪ್ರಯೋಗಿಸುವುದು ಅವಶ್ಯ. ಅಮೂಲ್ ಇಂತಹ ಒಂದು ಪರಿಶೀಲನಾರ್ಹ ಪ್ರಯೋಗವಾಗಿದೆ.





### ಜೈವಿಕದ್ರವ್ಯದ ಅವಲಂಬನೆ



ಭಾರತದ ಶೇಕಡಾ 70 ಭಾಗದ ಜನಸಂಖ್ಯೆ ಇಂದು ವ್ಯವಸಾಯವನ್ನು ಆಧರಿಸಿದೆ. ಆದ್ದರಿಂದ ಅಭಿವೃದ್ಧಿಯ ಆಧಾರ ಜೈವಿಕದ್ರವ್ಯದ ಉತ್ಪಾದನೆಯ ಹೆಚ್ಚಳವನ್ನೇ ಅವಲಂಬಿಸಿದೆ. ಶಕ್ತಿಯ ಮೂಲವಾಗಿ ಮತ್ತು ಉತ್ಪಾದನೆಯ ಕಚ್ಚಾ ವಸ್ತುವಾಗಿ ಜೈವಿಕದ್ರವ್ಯದ ಸಾಮರ್ಥ್ಯ ಅಪಾರ. ಬೇರೆ ಕಚ್ಚಾವಸ್ತುಗಳಂತಲ್ಲದೆ, ಇದು ಪುನರ್ನವೀಕರಣಗೊಳಬಲ್ಲಂತಹುದು. ಜೈವಿಕದ್ರವ್ಯದಿಂದ ಆಹಾರ, ಮೇವು, ನೂಲು, ಶಕ್ತಿ, ರಾಸಾಯನಿಕ ವಸ್ತುಗಳು ಮುಂತಾದವುಗಳ ಉತ್ಪಾದನೆ ಇಂದು ತಾಂತ್ರಿಕವಾಗಿ ಸಾಧ್ಯವೂ, ಸಾಮಾಜಿಕವಾಗಿ ಅಪೇಕ್ಷಿತವೂ ಆಗಿದೆ. ಅಲ್ಲದೆ ಜೈವಿಕದ್ರವ್ಯದ ಹೆಚ್ಚಿನ ಉತ್ಪಾದನೆಯು ಕೋಟ್ಯಂತರ ಜನರ ಜೀವನಾಧಾರವಾಗಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಈ ದಿನ ನಾವು ನಮ್ಮ ನೆಲವನ್ನೆಲ್ಲಾ ಶಿಥಿಲಗೊಳಿಸುತ್ತಾ ಹೆಚ್ಚು ಭಾಗವನ್ನು ಹಾಳುಗೆಡವಿದ್ದೇವೆ. ಬಹುಭಾಗ ಬಂಜರಾಗಿಯೇ ಉಳಿದಿದೆ. ಇದು ಬದಲಾಗಬೇಕಾಗಿದೆ. ಸ್ಥಳೀಯ ಸಮುದಾಯವನ್ನು ತೊಡಗಿಸಿಕೊಂಡು ಜನರ ಜಾಣತನವನ್ನು ಮತ್ತು ವಿಜ್ಞಾನ ತಂತ್ರಜ್ಞಾನವನ್ನು ಬಳಸಿಕೊಂಡು ಎಂತಹ ಮರುಭೂಮಿಯನ್ನೂ ನಂದನವನವನ್ನಾಗಿ ಪರಿವರ್ತಿಸಬಹುದು. ಆಗ ಲಕ್ಷಾಂತರ ಜನ ಇದರಿಂದ ಆಹಾರ, ಇಂಧನ, ಮೇವು ಮುಂತಾದ ವಿವಿಧ ಜೀವನ ಸಾಮಗ್ರಿಗಳನ್ನು ಪಡೆದು ಗೌರವಯುತವಾಗಿ ಬಾಳಬಹುದು. ಅಣ್ಣಾ ಹಜಾರೆಯವರ ರಾಲೇಗನ್ ಸಿಧಿ ಇದಕ್ಕೊಂದು ನಿದರ್ಶನ. ಇನ್ನೂ ಅನೇಕ ಇಂತಹ ನಿದರ್ಶನಗಳೂ ಇವೆ - ಪಾಣಿ ಪಂಚಾಯಿತ್, ಕೇರಳ ನಿದರ್ಶನ, ಆರೋವಿಲ್ಲೆ ಪ್ರಯೋಗ ಇತ್ಯಾದಿ. ಇವತ್ತಿನ ಸವಾಲೆಂದರೆ ಇಂತಹ ನಿದರ್ಶನಗಳನ್ನು ನೂರ್ಮಡಿಗೊಳಿಸುವುದು. ಇದರೊಂದಿಗೆ ಇಂತಹ ಬೀಳುಭೂಮಿಯ ಅಭಿವೃದ್ಧಿ ಮತ್ತು ವ್ಯವಸಾಯದ ಅಭಿವೃದ್ಧಿಯನ್ನು ಜೀವನೋಪಾಯಕ್ಕಾಗಿ ಮಾತ್ರವಲ್ಲದೇ ಸಣ್ಣ ಪ್ರಮಾಣದ ಕೈಗಾರಿಕಾ ಉತ್ಪಾದನೆಯೊಂದಿಗೆ ಹೆಣೆಯುವುದೂ ಬಹುಮುಖ್ಯವಾದುದು. ಇದರಿಂದ ಭೂಮಿಯನ್ನು ಅವಲಂಬಿಸಿದ ಸಮುದಾಯವಲ್ಲದೇ ಉಳಿದ ಸಮುದಾಯದ ಜನಗಳಿಗೂ ಜೀವನಾಧಾರವನ್ನು ಕಲ್ಪಿಸಬಹುದು.

### ಪ್ರಾಕೃತಿಕ ಸಂಪನ್ಮೂಲಗಳ ಮೇಲೆ ಸಮುದಾಯದ ಹತೋಟಿ

ಜೀವನೋಪಾಯ ನಿರ್ಮಾಣದ ಇಂತಹ ಭಗೀರಥ ಪ್ರಯತ್ನಗಳು ಫಲಕಾರಿಯಾಗಲು ಪ್ರಾಕೃತಿಕ ಸಂಪನ್ಮೂಲಗಳು ಎಲ್ಲರಿಗೂ ಸರಿಸಮನಾಗಿ ದೊರೆಯುವುದು ಅಗತ್ಯ. ಬಹುಮುಖ್ಯವಾದ ಸಂಪನ್ಮೂಲಗಳೆಂದರೆ ಭೂಮಿ, ನೀರು, ಅರಣ್ಯ ಮತ್ತು ಸಮುದ್ರ. ಜೈವಿಕ ವೈವಿಧ್ಯವೂ ಇಂತಹ ಮತ್ತೊಂದು ಪ್ರಮುಖ ಸಂಪನ್ಮೂಲ. ಒಂದು ಕಾಲದಲ್ಲಿ ಈ ಸಂಪನ್ಮೂಲಗಳು ಎಲ್ಲರಿಗೂ ಸೇರಿದ ಸ್ವತ್ತಾಗಿ ಎಲ್ಲರ ಉಪಯೋಗಕ್ಕೂ ನಿಲುಕುತ್ತಿದ್ದವು. ಇವುಗಳನ್ನು ಯಾರೊಬ್ಬರೂ ಮಾರಲಾಗಲೀ, ಕೊಳ್ಳಲಾಗಲೀ ಸಾಧ್ಯವಿರಲಿಲ್ಲ. ಆದರೆ ನಿಧಾನವಾಗಿ ಈ ಸಂಪನ್ಮೂಲಗಳು ಕೆಲವೇ ಜನರ ಸ್ವತ್ತಾದವು. ಅರಣ್ಯವನ್ನೇ ಆಧರಿಸಿ ಅದನ್ನು ಕಾಪಾಡುತ್ತಿದ್ದ ಜನರನ್ನು ಅರಣ್ಯ ರಕ್ಷಣೆಯ ಹೆಸರಿನಲ್ಲಿ ಹೊರದಬ್ಬಲಾಗಿದೆ. ನದಿಗಳಿಗೆ ಅಣೆಕಟ್ಟುಗಳನ್ನು ನಿರ್ಮಿಸುವ ನೆವದಿಂದಲೂ ಅರಣ್ಯವನ್ನು ಜನರಿಂದ ಕಿತ್ತುಗೊಳ್ಳಲಾಗಿದೆ. ನಾಳಿನ ಯೋಚನೆಯಿಲ್ಲದೇ ದುರಾಸೆಯ ಕೈಗಾರಿಕೆಗಳು ಸಮುದ್ರವನ್ನೂ ಶೋಷಿಸಿವೆ. ಜೈವಿಕ ವೈವಿಧ್ಯಗಳ ಏಕಸ್ವಾಮ್ಯ ಅನೇಕ ಬಗೆಯ ಮತ್ತು ಪ್ರಾಣಿ ಸಂಕುಲಗಳ ಕಣ್ಮರೆಗೆ ಕಾರಣವಾಗಿದೆ.

ಈ ಸಂಪನ್ಮೂಲಗಳನ್ನು ಉಳಿಸಿಕೊಳ್ಳುವ ಒಂದೇ ಒಂದು ಮಾರ್ಗವೆಂದರೆ ಇವುಗಳ ನಿರ್ವಹಣೆಯನ್ನು

ಸ್ಥಳೀಯ ಸಮುದಾಯಕ್ಕೆ ಹಿಂತಿರುಗಿಸುವುದು. ಸಮುದಾಯಗಳು ಇವುಗಳ ಮೇಲಿನ ತಮ್ಮ ಒಡೆತನವನ್ನು ಬಿಟ್ಟುಕೊಡಲು ನಿರಾಕರಿಸಬೇಕು. ಸಮುದಾಯಗಳು ಪರಸ್ಪರ ಕೈಜೋಡಿಸಿ ಬಂಡವಾಳಶಾಹಿಗಳು ಈ ಸಂಪನ್ಮೂಲಗಳನ್ನು ಅನಿಯಮಿತವಾಗಿ ಶೋಷಿಸುವದನ್ನು ತಪ್ಪಿಸಬೇಕು.

## ಸಮುದಾಯದ ಒಳಗೆ ಸಂಪನ್ಮೂಲದ ಸಮಾನ ಹಂಚಿಕೆ

ಹೀಗೆ ಕಳೆದುಕೊಂಡಿರುವ ಭೂಮಿಯ ಉತ್ಪಾದನಾ ಸಾಮರ್ಥ್ಯವನ್ನು ಮರಳಿ ಪಡೆಯಲು ಭಾರೀ ಪ್ರಯತ್ನವನ್ನೇ ಮಾಡಬೇಕಾಗಿದೆ. ಹೀಗೆ ಮಾಡುವಾಗ ಉತ್ಪಾದನಾ ಸಾಮರ್ಥ್ಯ ನಿರಂತರವಾಗಿ ಉಳಿಯುವಹಾಗೆಯೂ ಮತ್ತು ಸಮಾನವಾಗಿ ಹಂಚಿಕೆಯಾಗುವ ಹಾಗೆಯು ಗಮನವಿರಿಸಬೇಕು. ದುರ್ಬಲ ವರ್ಗದ ಜನರು ಮುಖ್ಯವಾಹಿನಿಯಿಂದ ದೂರಸರಿಯದಂತೆ ಕಾಳಜಿವಹಿಸಬೇಕು. ಉದಾಹರಣೆಗೆ ಒಂದು ಕೆರೆ ಅಥವಾ ಅಣೆಕಟ್ಟಿನ ನೀರಿನ ನಿರ್ವಹಣೆಯನ್ನು ಸಮುದಾಯಕ್ಕೇ ನೀಡುವಾಗ, ದಲಿತರಿಗೆ ಮತ್ತು ಭೂರಹಿತ ಕೂಲಿಗಾರರಿಗೆ ನ್ಯಾಯಯುತ ಕೂಲಿಯ ಜೊತೆಗೆ ನೀರಿನ ಹಂಚಿಕೆ ಮತ್ತು ಯೋಜನೆಯ ನಿರ್ವಹಣೆಯಲ್ಲಿಯೂ ಸಮಾನ ಅವಕಾಶ ಸಿಗಬೇಕು. ಇವು ಅಸಾಧ್ಯವಾದ ಆಶಯಗಳೇನಲ್ಲ. ಶಾಶ್ವತ ಪರಿಹಾರವನ್ನು ನೀಡುವ ಏಕೈಕ ಮಾರ್ಗ ಇದೇ ಆಗಿದೆ. ಉಳಿದ ಮಾರ್ಗಗಳು ದೂರಗಾಮೀ ದೃಷ್ಟಿಯಿಂದ ಕಾರ್ಯಸಾಧ್ಯವಲ್ಲ ಮತ್ತು ಅಪೇಕ್ಷಿತವೂ ಅಲ್ಲ.

## ಪ್ರಜಾಪ್ರಭುತ್ವ ಮತ್ತು ನೈತಿಕ ಚೌಕಟ್ಟು

ಅಸಂಘಟಿತ ಕ್ಷೇತ್ರದಲ್ಲಿ ಜೀವನೋಪಾಯದ ಮಾರ್ಗಗಳನ್ನು ಉತ್ಪಾದಿಸುವಾಗ ಮತ್ತು ಉತ್ತಮಪಡಿಸುವಾಗ, ಸ್ಪರ್ಧೆ ಮತ್ತು ದುರಾಸೆಯನ್ನು ಆಧರಿಸಿದ ನಮ್ಮ ವ್ಯವಸ್ಥೆಯಲ್ಲಿ ಎದುರಾಗುವ ಸಮಸ್ಯೆಗಳನ್ನು ನೆನಪಿನಲ್ಲಿಡಬೇಕು. ಹಾಗಿಲ್ಲದಿದ್ದರೆ ಸಂಘಟಿತ ಕ್ಷೇತ್ರಕ್ಕಿಂತ ಇಲ್ಲಿಯೇ ಹೆಚ್ಚು ಅನಾಹುತಗಳಾಗಬಹುದು. ಸ್ತ್ರೀಯರಿಗೆ ಅನ್ಯಾಯವಾಗಬಹುದು. ಖರ್ಚನ್ನು ಕಡಿಮೆಮಾಡಲು ಬಾಲಕಾರ್ಮಿಕರನ್ನು ಉಪಯೋಗಿಸಬಹುದು. ಕಾರ್ಮಿಕರನ್ನು ಶೋಷಿಸಬಹುದು. ಹೀಗಾಗದಿರಲು ಪ್ರಜ್ಞಾಪೂರ್ವಕ ಪ್ರಯತ್ನವನ್ನು ಪ್ರಜಾಪ್ರಭುತ್ವ ಮಾರ್ಗದಲ್ಲಿ ಮಾಡಬೇಕು. ಹೀಗಾದಾಗ ಮಾತ್ರ ಈ ಮಾರ್ಗಗಳು ಸಾಮಾಜಿಕ ಬದಲಾವಣೆಯನ್ನು ತರಬಲ್ಲವು. ಹೀಗಾಗಲು ಪರಸ್ಪರ ಸೌಹಾರ್ದ ಚಿಂತನಾ ವಿಧಾನ ಮತ್ತು ಪರಿಕಲ್ಪನೆಗಳಲ್ಲಿ ಬದಲಾವಣೆ ಅಗತ್ಯವಾಗಿದೆ.




6 4



## ಮಾಡಬೇಕಾದದ್ದು?

'ಎಲ್ಲರಿಗೂ ಈಗ ಆರೋಗ್ಯ' ಚಳುವಳಿ ಬೇರೆ ಅಂಶಗಳ ಜೊತೆ ಅಸಂಘಟಿತ ಕ್ಷೇತ್ರದ ಬಡಜನರಿಗೆ ಜೀವನೋಪಾಯವನ್ನು ಕಲ್ಪಿಸುವ ಅಂಶವನ್ನೂ ಹೊಂದಿರುವುದು ಬಹಳ ಅಗತ್ಯವಾದುದು.

## ಸಣ್ಣ ಉದ್ಯಮಗಳು

ಮೊದಲು ಪ್ರತಿಯೊಂದು ರಾಜ್ಯವೂ ನುರಿತ ತಜ್ಞರ ಗುಂಪುಗಳನ್ನು ಯೋಜಿಸಬೇಕು. ಈ ಗುಂಪು ಜಾಗತಿಕ ಬೃಹತ್ ಉದ್ಯಮದ ಹಿನ್ನೆಲೆಯಲ್ಲಿ ಸ್ಥಳೀಯ ಸಣ್ಣ ಉದ್ಯಮಗಳ ಸಮಸ್ಯೆಯನ್ನು ಆಳವಾಗಿ ಅಭ್ಯಸಿಸಬೇಕು. ರಾಜ್ಯಮಟ್ಟದ ಇಂತಹ ತಜ್ಞರ ತಂಡದ ಕೆಳಗೆ ಈ ಕೆಳಗಿನ ಅಂಶಗಳನ್ನು ಅಧ್ಯಯನ ಮಾಡಲು ಅಧ್ಯಯನ ತಂಡಗಳನ್ನು ರಚಿಸಬೇಕು

1. ಭೌತ ಮತ್ತು ಮಾನವ ಸಂಪನ್ಮೂಲದ ಲಭ್ಯತೆ.
2. ಮಾರುಕಟ್ಟೆಯ ಪರಿಶೀಲನೆ, ಕೈಗಾರಿಕೋತ್ಪನ್ನಗಳ ಆಯ್ಕೆ ಮತ್ತು ಪ್ರಮಾಣ.
3. ಸೂಕ್ತ ತಂತ್ರಜ್ಞಾನಗಳನ್ನು ಗುರುತಿಸುವುದು.
4. ಹೊಸ ಉದ್ಯಮಗಳ ನಿರ್ಮಾಣ ಮತ್ತು ಲಭ್ಯ ಮಾರುಕಟ್ಟೆಗಳ ಹಿಡಿತ.
5. ಚಿಕ್ಕ ಉದ್ಯಮಗಳ ರಕ್ಷಣೆಗೆ ಸೂಕ್ತ ಸಂಸ್ಥೆಗಳ ಸ್ಥಾಪನೆ.

ಈ ವರ್ಷದ ದ್ವಿತೀಯಾರ್ಧದಲ್ಲಿ ಪ್ರಾರಂಭವಾಗುವ ಈ ಯೋಜನೆ ಒಂದು ಆರಂಭ ಮಾತ್ರ. ಈ ಮಧ್ಯೆ ರಾಜ್ಯ ಮಟ್ಟ, ವಲಯ ಮಟ್ಟ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗಬೇಕಾಗಿದೆ. ರಾಜ್ಯ ಮಟ್ಟದ 15-20 ಗುಂಪುಗಳು ಮತ್ತು ಪ್ರತಿ ಗುಂಪಿನ ಕೆಳಗೆ 4-5 ಉಪಗುಂಪುಗಳು ಇರಬಹುದು. 2001 ನೆಯ ಇಸವಿಯ ಮಧ್ಯಭಾಗದ ಹೊತ್ತಿಗೆ ಈ ಬಗ್ಗೆ ಒಂದು ಪ್ರಾಯೋಗಿಕ ಯೋಜನೆಯನ್ನು ಸಿದ್ಧಪಡಿಸುವುದು ಅಗತ್ಯ.

## ವ್ಯವಸಾಯ

ಕೃಷಿಯಂತಹ ಪ್ರಾಥಮಿಕ ಕ್ಷೇತ್ರದಲ್ಲಿ ಪ್ರವೇಶಿಸಿ ಪರಿವರ್ತನೆಯನ್ನು ಸಾಧಿಸಲು ಸಾಕಷ್ಟು ಅವಕಾಶಗಳಿವೆ. ಸ್ಥಳೀಯ ಅಗತ್ಯಗಳಿಗನುಗುಣವಾಗಿ ಉತ್ಪಾದನೆಯನ್ನು ಸುಧಾರಿಸಲು ಸಾಕಷ್ಟು ಮಾದರಿಗಳು ಸಿಗುತ್ತವೆ. ಆರೋಗ್ಯ ಕ್ಷೇತ್ರದಲ್ಲಿ ಈಗ ನಡೆಯುತ್ತಿರುವಂತಹ ಒಂದು ಜಾಗೃತಿಯ ಆಂದೋಳನ ಕೃಷಿ ಕ್ಷೇತ್ರದಲ್ಲೂ ಆಗಬೇಕಾಗಿದೆ. ರಚನಾತ್ಮಕ ಹೊಂದಾಣಿಕೆ ನೀತಿಯು ಆರೋಗ್ಯ ಕ್ಷೇತ್ರದ ಮೇಲೆ ಉಂಟುಮಾಡುವಂತಹ ಕಹಿಯಾದ ಪರಿಣಾಮವನ್ನು ಕೃಷಿ ಕ್ಷೇತ್ರದಲ್ಲೂ ಮಾಡಲಿದೆ.

ನಮ್ಮ ಮುಂದಿರುವ ಕೆಲಸಗಳು ಎರಡು ಬಗೆಯವು:

1. ಭೂಸುಧಾರಣೆಯನ್ನು ಮರಳಿ ತರುವುದು. ಸಾರ್ವಜನಿಕ ಆಸ್ತಿಗೆ ಪ್ರವೇಶ (ಗೋಮಾಳ ಮುಂತಾದದ್ದು). ಮೂಲಭೂತ ಮಾನವ ಹಕ್ಕುಗಳು, ರಾಜಕೀಯ ಕಾರ್ಯಕ್ರಮಗಳ ಬಗೆಗೆ ಮಾಹಿತಿಯ ಹಕ್ಕು.
2. ಅಭಿವೃದ್ಧಿಯ ಪರ್ಯಾಯ (ಬದಲಿ) ಮಾದರಿಗಳನ್ನು ಅನುಸರಿಸುವುದು. ಈ ಮಾದರಿಗಳ ಒಂದು ಜಾಲದ ಸೃಷ್ಟಿ, ಜವಾಬ್ದಾರಿಯುತ ಬಳಕೆಯ ಬಗೆಗೆ ಪ್ರಚಾರ ಮತ್ತು ಆಗ್ರಹ.

ಈ ಎರಡೂ ಬಗೆಯ ಕಾರ್ಯಗಳ ಸಮರ್ಪಕ ಬೆಸುಗೆಯಿಂದ ಮಾತ್ರ ಸಾಮಾಜಿಕ ಪರಿವರ್ತನೆ ಸಾಧ್ಯ.

*****

## ಜನಾರೋಗ್ಯ ಪುಸ್ತಕ ಮಾಲಿಕೆಯಲ್ಲಿ ಪ್ರಕಟವಾಗಿರುವ ಪುಸ್ತಕಗಳು

1. ಜಾಗತೀಕರಣದಿಂದ ಜನಾರೋಗ್ಯಕ್ಕೇನಾದೀತು? ರೂ. 15

2. ಕ್ರಿ.ಶ. 2000ದ ವೇಳೆಗೆ ಎಲ್ಲರಿಗೂ ಆರೋಗ್ಯ ನಿರ್ಧಾರವೇನಾಯ್ತು? ರೂ. 20

3. ಬದುಕಲು ಯೋಗ್ಯವಾದ ಬದುಕಿಗಾಗಿ ರೂ. 20

4. ನಮ್ಮ ಅಸ್ತಿತ್ವವೂ ಪ್ರಮುಖವಾಗುವ ಜಗತ್ತು ರೂ. 20

5. ಆರೋಗ್ಯ ಪಾಲನೆಯಲ್ಲಿ ವ್ಯಾಪಾರೀಕರಣವನ್ನು ಎದುರಿಸುವುದು ರೂ. 25

# ಜನಾರೋಗ್ಯ ಸಭೆ - ಕರ್ನಾಟಕ

'ಕ್ರಿ. ಶ. 2000ದ ವೇಳೆಗೆ ಎಲ್ಲರಿಗೂ ಆರೋಗ್ಯ' ಎಂಬ ಗುರಿಯನ್ನು ಸರ್ಕಾರ ಹಾಗೂ ಅಂತರರಾಷ್ಟ್ರೀಯ ಸಂಸ್ಥೆಗಳು ಮರೆತಿವೆ. ಆದರೆ ನಾವು ಅದನ್ನು ಮರೆಯಲಾರೆವು. ಜನಕೇಂದ್ರಿತ ಪ್ರಯತ್ನಗಳನ್ನು ಬಲಪಡಿಸಿ ವರ್ಧಿಸುವುದಕ್ಕೆ ಈಗ ಸಕಾಲ. ಇದರಿಂದ ನವೀನ ಪರಿಹಾರಗಳು ಮೂಡಿ ನೀತಿ-ನಿರ್ಣಾಯಕರನ್ನು ಈಬಗ್ಗೆ ಒತ್ತಾಯಿಸಲು ಸಾಧ್ಯವಾದೀತು.

ಎಲ್ಲರಿಗೂ ಆರೋಗ್ಯವನ್ನು ಸಾಧಿಸುವುದೆಂದರೆ ಜನರಿಗೆ ಗುಣಮಟ್ಟದ ವೈದ್ಯಕೀಯ ಸೌಕರ್ಯ, ಶುದ್ಧವಾದ ಕುಡಿಯುವ ನೀರು, ನೈರ್ಮಲ್ಯ, ಪೋಷಕಾಂಶಭರಿತ ಆಹಾರ, ಉಡುಪು, ವಸತಿ ಮತ್ತು ಉದ್ಯೋಗಗಳನ್ನು ಒದಗಿಸುವುದು. ಜಾತಿ, ವರ್ಗ, ಜನಾಂಗ ಹಾಗೂ ಲಿಂಗಾಧಾರಿತ ಭೇದ ಭಾವ ಇರದಂತೆ ನೋಡಿಕೊಳ್ಳುವುದು ಇದರ ಅಂಗವೇ. ಜನರ ಆರೋಗ್ಯ ಹದಗೆಡುತ್ತಿರುವುದಕ್ಕೂ ಜಾಗತೀಕರಣಕ್ಕೂ ಸಂಬಂಧವಿದೆ ಎಂಬುದು ಜನರಿಗೆ ತಿಳಿಯಬೇಕು. ರಾಚನಿಕ ಹೊಂದಾಣಿಕೆ ನೀತಿಗಳು ಅಲ್ಪಾವಧಿಯ ದೂರದೃಷ್ಟಿಯನ್ನು ಕಡೆಗಣಿಸುತ್ತಿರುವಾಗ ಎಲ್ಲರಿಗೂ ಆರೋಗ್ಯದ ಆಶಯದ ನವೀಕರಣ ಅನಿವಾರ್ಯ. ಈ ಸಲುವಾಗಿ ಜನಾರೋಗ್ಯ ಸಭೆಯೆಂಬ ಹೆಸರಿನಡಿ ಪ್ರಚಾರಾಂದೋಲನವನ್ನು ಅನೇಕ ಜನಪರ ಸಂಘಟನೆಗಳು ದೇಶದಾದ್ಯಂತ ಕೈಗೊಂಡಿವೆ. ಈ ಕಾರ್ಯಕ್ರಮದ ಮೂರು ಪ್ರಮುಖ ಉದ್ದೇಶಗಳೆಂದರೆ:

- ಆರೋಗ್ಯ ಹಾಗೂ ಸಮವಿತರಣೆಯ ಅಭಿವೃದ್ಧಿಯನ್ನು ಪ್ರಥಮಾದ್ಯತೆಯಲ್ಲಿ ಪರಿಗಣಿಸುವಂತೆ ಪ್ರಾಥಮಿಕ ಆರೋಗ್ಯ ಪಾಲನೆಯ ನೀತಿಯನ್ನು ಮರುಸ್ಥಾಪಿಸುವುದು.

- ಸ್ಥಳೀಯ, ರಾಷ್ಟ್ರೀಯ ಹಾಗೂ ಜಾಗತಿಕ ಮಟ್ಟದಲ್ಲಿ ಪ್ರಜಾಪ್ರಭುತ್ವ ಶಕ್ತಿಗಳನ್ನು ಸಂಘಟಿಸಿ ದೀರ್ಘಾವಧಿ ನಿರಂತರ ಪರಿಹಾರಗಳನ್ನು ಆರೋಗ್ಯ ಸಮಸ್ಯೆ ಕುರಿತಂತೆ ರೂಪಿಸುವುದು.

- ಅಂತರ ವಲಯದ ಸಮಸ್ಯೆಯಾಗಿ ಆರೋಗ್ಯ ತತ್ವವನ್ನು ದೃಢಪಡಿಸುವುದು.

ಈ ಆಂದೋಲನಕ್ಕೆ ನಾಲ್ಕು ಸ್ತರದ ರಚನೆಯಿದೆ. 'ಎಲ್ಲರಿಗೂ ಆರೋಗ್ಯ ಈಗಲೇ' ಕುರಿತು ಜನರನ್ನು ಸಂಘಟಿಸಿ ಸ್ಥಳೀಯ ಮಟ್ಟದಲ್ಲಿನ ಆರೋಗ್ಯ ನಿರ್ವಹಣೆಯ ಬಗ್ಗೆ ತಿಳಿಯುವುದು. ಪ್ರತಿ ಜಿಲ್ಲೆಗೂ ಒಂದು ಜಿಲ್ಲಾಮಟ್ಟದ ಸಂಘಟನೆಯ ಮೂಲಕ ವಿಚಾರಸಂಕಿರಣ ಏರ್ಪಡಿಸಲಾಗುವುದು. ಈ ಎಲ್ಲವೂ ರಾಷ್ಟ್ರೀಯ ಆರೋಗ್ಯ ಸಮಾವೇಶದ ರೂಪದಲ್ಲಿ 2000ನೇ ನವೆಂಬರ್ 30 ಮತ್ತು ಡಿಸೆಂಬರ್ 1 ರಂದು ಕಲಕತ್ತಾದಲ್ಲಿ ನಡೆಯುವುದು. ಈ ಸಮಾವೇಶವು ರಾಚನಿಕ ಹೊಂದಾಣಿಕೆಗಳ ನೀತಿಯನ್ನು ಹಿಂದಕ್ಕೊಯ್ಯಲು ಮತ್ತು ಎಲ್ಲರಿಗೂ ಆರೋಗ್ಯ ಪ್ರತಿಜ್ಞೆಗೆ ಬದ್ಧರಾಗಲು ಕರೆನೀಡುವುದು. 2000ನೇ ಡಿಸೆಂಬರ್ 4-8ರ ಅವಧಿಯಲ್ಲಿ ಢಾಕಾದಲ್ಲಿ ನಡೆಯುವ ಅಂತರರಾಷ್ಟ್ರೀಯ ಜನಾರೋಗ್ಯ ಸಮಾವೇಶಕ್ಕೆ ಸದಸ್ಯರನ್ನು ಕಳುಹಿಸಿಕೊಡುವುದು.

ಜನಾರೋಗ್ಯ ಸಭೆಯನ್ನು ರಾಷ್ಟ್ರದ ಹದಿನೈದು ಪ್ರಮುಖ ಸಂಸ್ಥೆಗಳನ್ನೊಳಗೊಂಡ ರಾಷ್ಟ್ರೀಯ ಸಮನ್ವಯ ಸಮಿತಿಯು ಆಯೋಜಿಸುವುದು. ಈ ಕಾರ್ಯಕ್ರಮದಲ್ಲಿ ನೀಡುವ ಉಪನ್ಯಾಸಗಳಿಗೆ ಪೂರಕವಾಗಿ ಹೊರತರುತ್ತಿರುವ ಪುಸ್ತಕ ಮಾಲಿಕೆಯಲ್ಲಿ ಇದು ಮೂರನೆಯದು.